ಸೋಮವಾರ, ಜನವರಿ 2, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪುಷ್ಪ ಪ್ರದರ್ಶನ
ಗುಜರಾತ್‌ನ ಅಹಮದಾಬಾದ್‌ನಲ್ಲಿ ಹಮ್ಮಿಕೊಂಡಿರುವ ಪುಷ್ಪ ಪ್ರದರ್ಶನದಲ್ಲಿ ಹೂವುಗಳಿಂದ ನಿರ್ಮಿಸಿರುವ ಸೈಕಲ್ ಸವಾರನ ಮಾದರಿ



‘ಬಿಜೆಪಿ ಎಲ್ಲ 224 ಸೀಟು ಖರೀದಿಸಲಿ’

ಭಟ್ಕಳ (ಉತ್ತರಕನ್ನಡ ಜಿಲ್ಲೆ): ‘ಬಿಜೆಪಿ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಹೊಂದಿಲ್ಲದ ಪಕ್ಷ. ಅದು 150 ವಿಧಾನಸಭಾ ಸೀಟುಗಳನ್ನು ಖರೀದಿ ಮಾಡುವ ಲೆಕ್ಕಾಚಾರದಲ್ಲಿ ಇದೆ. ಖರೀದಿ ಮಾಡುವುದಾದರೆ ಎಲ್ಲ 224 ಸೀಟು ಖರೀದಿಸಲಿ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಲೇವಡಿ ಮಾಡಿದರು.

ಭಾನುವಾರ ಪಟ್ಟಣದ ಅಂಜುಮನ್ ಶಿಕ್ಷಣ ಸಂಸ್ಥೆಯ ಶತಮಾನೋತ್ಸವ ಕಾರ್ಯಕ್ರಮದ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಅವರು, ‘ಬಿಜೆಪಿ ಈ ಬಾರಿ 150 ಸೀಟು ಗೆದ್ದು ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯುತ್ತದೆ’ ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿಕೆಗೆ ಹೀಗೆ ಪ್ರತಿಕ್ರಿಯಿಸಿದರು.

ಡಿಸೆಂಬರ್ ಕೊನೆ ವಾರದಲ್ಲಿ ಬೊಕ್ಕಸ ಸೇರಿದ ತೆರಿಗೆ ವರಮಾನ ₹ 657.79 ಕೋಟಿ

1,262 ಕೋಟಿ ಮೌಲ್ಯದ ಮದ್ಯ ಬಿಕರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ರ ಡಿಸೆಂಬರ್‌ನ ಕೊನೆಯ ಏಳು ದಿನಗಳಲ್ಲಿ ರಾಜ್ಯದಲ್ಲಿ ₹ 1,262.65 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮದ್ಯ ಮಾರಾಟದಲ್ಲಿ ಶೇಕಡ 14.86ರಷ್ಟು ಹೆಚ್ಚಳವಾಗಿದೆ.

ಡಿಸೆಂಬರ್ 23ರಿಂದ 31ರ ಅವಧಿಯಲ್ಲಿ ಏಳು ದಿನಗಳಲ್ಲಿ ರಾಜ್ಯ ಪಾನೀಯ ನಿಗಮ ಈ ವಹಿವಾಟು ನಡೆಸಿದೆ. ಡಿ.24 ಮತ್ತು 25ರಂದು ವಹಿವಾಟು ಇರಲಿಲ್ಲ. ವರ್ಷದ ಕೊನೆಯ ಏಳು ದಿನಗಳಲ್ಲಿ 35.70 ಲಕ್ಷ ಪೆಟ್ಟಿಗೆಗಳಷ್ಟು ದೇಶೀಯವಾಗಿ ತಯಾರಾದ ಮದ್ಯ (ಐಎಂಎಲ್) ಹಾಗೂ ಬಿಯರ್ ಮಾರಾಟ ನಡೆದಿದೆ.



ವರ್ಷಾಂತ್ಯದಲ್ಲಿ 20.66 ಲಕ್ಷ ಪೆಟ್ಟಿಗೆಗಳಷ್ಟು ಐಎಂಎಲ್ ಮಾರಾಟವಾಗಿದೆ. 2020ರ ಡಿಸೆಂಬರ್‌ನ ಇದೇ ಅವಧಿಯಲ್ಲಿ 17.48 ಲಕ್ಷ ಪೆಟ್ಟಿಗೆ, 2021ರ ಡಿಸೆಂಬರ್ ಕೊನೆಯ ವಾರದಲ್ಲಿ 19.46 ಲಕ್ಷ ಪೆಟ್ಟಿಗೆಗಳಷ್ಟು ಮದ್ಯ ಮಾರಾಟ ನಡೆದಿತ್ತು. 2021ಕ್ಕೆ ಹೋಲಿಸಿದರೆ 2022ರ ಅಂತ್ಯದಲ್ಲಿ ಐಎಂಎಲ್ ಮಾರಾಟದಲ್ಲಿ ಶೇ 6.17ರಷ್ಟು ಹೆಚ್ಚಳವಾಗಿದೆ.

ಮದ್ಯ ಮಾರಾಟದ ವಿವರ

ದಿನಾಂಕ	ಮಾರಾಟದ ಮೌಲ್ಯ (₹ ಕೋಟಿಗಳಲ್ಲಿ)
ಡಿ.23	228.57
ಡಿ.26	145.84
ಡಿ.27	210.22
ಡಿ.28	144.70
ಡಿ.29	152.99
ಡಿ.30	197.32
ಡಿ.31	183.01
ಒಟ್ಟು	1,262.65

ಬಿಯರ್ ಖರೀದಿ ಭಾರಿ ಹೆಚ್ಚಳ: ಡಿಸೆಂಬರ್ ಕೊನೆಯ ವಾರದಲ್ಲಿ ರಾಜ್ಯದಲ್ಲಿ 15.04 ಲಕ್ಷ ಪೆಟ್ಟಿಗೆಗಳಷ್ಟು ಬಿಯರ್ ಮಾರಾಟವಾಗಿದೆ. 2020ರ ಇದೇ ಅವಧಿಯಲ್ಲಿ 10.62 ಲಕ್ಷ ಪೆಟ್ಟಿಗೆ, 2021ರ ಇದೇ ಅವಧಿಯಲ್ಲಿ 11.24 ಲಕ್ಷ ಪೆಟ್ಟಿಗೆ ಬಿಯರ್ ಮಾರಲಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಮಾರಾಟದಲ್ಲಿ ಶೇ 33.81ರಷ್ಟು ಏರಿದೆ ಎಂದು ಇಲಾಖೆ ತಿಳಿಸಿದೆ.

₹ 657 ಕೋಟಿ ತೆರಿಗೆ ಸಂಗ್ರಹ: ಡಿ.23ರಿಂದ ಡಿ.31ರ ಅವಧಿಯಲ್ಲಿ ಮದ್ಯ ಮಾರಾಟದಿಂದ ರಾಜ್ಯ ಬೊಕ್ಕಸಕ್ಕೆ ₹ 657.79 ಕೋಟಿ ತೆರಿಗೆ ವರಮಾನ ಸಂದಾಯವಾಗಿದೆ. 2020ರ ಡಿಸೆಂಬರ್ ಕೊನೆಯ ವಾರ ಮದ್ಯ ಮಾರಾಟದಿಂದ ₹ 614.68 ಕೋಟಿ ತೆರಿಗೆ ಸಂಗ್ರಹವಾಗಿತ್ತು. 2021ರ ಇದೇ ಅವಧಿಯಲ್ಲಿ ₹ 736 ಕೋಟಿ ಸಂಗ್ರಹವಾಗಿತ್ತು.

‘2022ರ ಡಿಸೆಂಬರ್ ಕೊನೆಯ ವಾರದಲ್ಲಿ ಐಎಂಎಲ್ ಮತ್ತು ಬಿಯರ್ ಮಾರಾಟದ ನಿಖರ ಮಾಹಿತಿ ಇಲಾಖೆಗೆ ದೊರಕಿದೆ. ಆದರೆ, ತೆರಿಗೆ ಸಂಗ್ರಹದ ಸಂಪೂರ್ಣ ವಿವರ ಲಭಿಸಲು ಕೆಲವು ದಿನಗಳು ಬೇಕಾಗುತ್ತವೆ. ಮಾರಾಟದಲ್ಲಿ ಗಣನೀಯ ಹೆಚ್ಚಳ ಆಗಿರುವುದರಿಂದ ತೆರಿಗೆ ಸಂಗ್ರಹವೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಲಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕೋವಿಡ್ ಕಾರಣದಿಂದ 2020ರ ವರ್ಷಾಂತ್ಯದಲ್ಲಿ ಮದ್ಯ ಮಾರಾಟದಲ್ಲಿ ಹೆಚ್ಚಿನ ಏರಿಕೆಯಾಗಿರಲಿಲ್ಲ. 2019ರ ವರ್ಷಾಂತ್ಯಕ್ಕೆ ಹೋಲಿಸಿದರೆ ಶೇ 1.38ರಷ್ಟು ಹೆಚ್ಚಳ ಮಾತ್ರ ದಾಖಲಾಗಿತ್ತು. 2021ರ ವರ್ಷಾಂತ್ಯದಲ್ಲಿ ಪರಿಸ್ಥಿತಿ ಚೇತರಿಸಿಕೊಂಡಿತ್ತು. ಆಗ, 2020ರ ವರ್ಷಾಂತ್ಯಕ್ಕೆ ಹೋಲಿಸಿದರೆ ಮದ್ಯ ಮಾರಾಟದಲ್ಲಿ ಶೇ 8.05ರಷ್ಟು ಹೆಚ್ಚಳ ಆಗಿತ್ತು.

ಸುದ್ದಿ 2 ನಿಮಿಷ

ಜನಾರ್ದನ ರೆಡ್ಡಿಗೆ ಬೆಂಬಲ ನೀಡಿಲ್ಲ: ಬಿ.ವೈ.ವಿಜಯೇಂದ್ರ

ಗದಗ: ‘ಮಾಜಿ ಮುಖ್ಯಮಂತ್ರಿ, ಶಾಸಕ ಬಿ.ಎಸ್.ಯಡಿಯೂರಪ್ಪ ನಾಯಕತ್ವದ ಬಗ್ಗೆ ವಿರೋಧ ಪಕ್ಷದವರೂ ಹಲವು ಬಾರಿ ಹೊಗಳಿದ್ದಾರೆ. ಅದೇ ರೀತಿ, ಜನಾರ್ದನ ರೆಡ್ಡಿ ಕೂಡ ಬಿಎಸ್‌ವೈ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ಹಾಗಂತ, ರೆಡ್ಡಿ ಅವರಿಗೆ ಯಡಿಯೂರಪ್ಪನವರ ಬೆಂಬಲ ಇದೆ ಎಂಬುದು ಸತ್ಯಕ್ಕೆ ದೂರವಾದ ಮಾತು’ ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, ‘ಯಡಿಯೂರಪ್ಪ ನೇರ ರಾಜಕಾರಣ ಮಾಡುವ ಎದೆಗಾರಿಕೆ ಇರುವ ವ್ಯಕ್ತಿ. ಹಿಂದೆ ನಿಂತು ಯಾವತ್ತೂ ರಾಜಕಾರಣ ಮಾಡಿದವರಲ್ಲ. ಹೀಗಿರುವಾಗ ರೆಡ್ಡಿಗೆ ಬೆಂಬಲ ಕೊಡುವ ಪ್ರಶ್ನೆಯೇ ಇಲ್ಲ’ ಎಂದರು.



‘ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ನಂತರ ಬಿ.ವೈ. ವಿಜಯೇಂದ್ರ ಹಿನ್ನೆಲೆಗೆ ಸರಿದಿದ್ದಾರೆ ಎಂಬುದು ಸುಳ್ಳು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ನೇತೃತ್ವದಲ್ಲಿ ಸಿಎಂ ಬೊಮ್ಮಾಯಿ, ಬಿಎಸ್‌ವೈ ಹಾಗೂ ಪಕ್ಷದ ಹಿರಿಯರ ನಾಯಕತ್ವದಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ, ಪಕ್ಷ ಸಂಘಟನೆ ಮಾಡುತ್ತಿದ್ದೇನೆ’ ಎಂದರು.

ಕೇಂದ್ರ ಸಚಿವ ಅಮಿತ್ ಶಾ ಕಾರ್ಯಕ್ರಮಕ್ಕೆ ಯಡಿಯೂರಪ್ಪ ಅವರು ಗೈರಾಗಿದ್ದಕ್ಕೆ ಪ್ರತಿಕ್ರಿಯಿಸಿದ ಅವರು, ‘ಯಡಿಯೂರಪ್ಪ ವಿದೇಶಕ್ಕೆ ಹೋಗುವ ಕಾರ್ಯಕ್ರಮ ಎರಡು ತಿಂಗಳ ಹಿಂದೆಯೇ ತೀರ್ಮಾನವಾಗಿದ್ದರಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ. ಈ ಬಗ್ಗೆ ಬಿಎಸ್‌ವೈ ಅವರು ಅಮಿತ್ ಶಾ ಜತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಯಡಿಯೂರಪ್ಪ ಸಂತೋಷದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ’ ಎಂದರು.

ನಾಟಕದಲ್ಲಿ ಸಿದ್ದರಾಮಯ್ಯನವರ ಅವಹೇಳನ: ದೂರು ದಾಖಲು

ಮೈಸೂರು: ‘ಇಲ್ಲಿನ ರಂಗಾಯಣದಲ್ಲಿ ಶನಿವಾರ ನಡೆದ ನಾಟಕ ಪ್ರದರ್ಶನದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಲಾಗಿದೆ’ ಎಂದು ಆರೋಪಿಸಿ ರಂಗಾಯಣದ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳ ವಿರುದ್ಧ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಭಾನುವಾರ ದೂರು ನೀಡಿದ್ದಾರೆ.

ಚಂದ್ರಶೇಖರ ಕಂಬಾರರ ‘ಸಾಂಬಶಿವ ಪ್ರಹಸನ’ ನಾಟಕವನ್ನು ಕಾರ್ತಿಕ್ ಉಪಮನ್ಯು ನಿರ್ದೇಶನದಲ್ಲಿ ‘ನಾಗರತ್ನಮ್ಮ’ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳು ಪ್ರದರ್ಶಿಸುತ್ತಿದ್ದರು. ಆ ವೇಳೆ, ಮೋಹನ್ ಎನ್ನುವವರು ಪ್ರದರ್ಶನದ ವೇಳೆಯೇ ಎದ್ದು ನಿಂತು ಆಕ್ರೋಶ ವ್ಯಕ್ತಪಡಿಸಿದ್ದರು.

‘ಭಾಗ್ಯಗಳನ್ನು ನೀಡಿ ಸೋಮಾರಿ ಮಾಡುತ್ತಿದ್ದೀರಿ, ಬರೀ ನಿದ್ದೆ ಮಾಡುತ್ತಿದ್ದೀರಿ ಎಂದೆಲ್ಲ ಹೇಳಿಸುವ ಮೂಲಕ ಸಿದ್ದರಾಮಯ್ಯ ಅವರನ್ನು ವ್ಯಂಗ್ಯ ಮಾಡುತ್ತಿದ್ದೀರಿ. ಮೂಲ ನಾಟಕದಲ್ಲಿ ಹೀಗಿದೆಯೇ? ದುರುದ್ದೇಶಪೂರ್ವಕವಾಗಿ ನಾಟಕ ರೂಪಿಸಿದ್ದೀರಿ’ ಎಂದು ವೇದಿಕೆಗೇರಿ ಕಿಡಿಕಾರಿದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ‘ಕೆ.ಡಿ.ಅಂಕಲ್’ ಎಂದು ವ್ಯಂಗ್ಯ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ‘ನಾಟಕ ತಂಡದಲ್ಲಿದ್ದ 18 ಮಂದಿ ವಿರುದ್ಧ ಭಾನುವಾರ ದೂರು ನೀಡಿದ್ದೇನೆ. ಚುನಾವಣೆ ಸಮೀಪಿಸುತ್ತಿರುವುದರಿಂದಾಗಿ, ಸಿದ್ದರಾಮಯ್ಯ ಅವರನ್ನು ಉದ್ದೇಶಪೂರ್ವಕವಾಗಿ ಅವಹೇಳನ ಮಾಡಲಾಗಿದೆ. ಈ ಬಗ್ಗೆ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಲಾಗಿದೆ’ ಎಂದು ಬಿ.ಸುಬ್ರಹ್ಮಣ್ಯ ತಿಳಿಸಿದರು.

ಕದ್ದ ರೈಫಲ್ ತಾಸಿನಲ್ಲಿ ಮರಳಿಸಿದ ಯುವಕ

ಶ್ರೀನಗರ (ರಾಯಿಟರ್ಸ್): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯ ಎಕೆ -47 ರೈಫಲ್ ಕಸಿದುಕೊಂಡು ಪರಾರಿಯಾದ ಯುವಕ ರೈಫಲ್ ಅನ್ನು ಪುನಃ ಸಿಆರ್‌ಪಿಎಫ್ ಸಿಬ್ಬಂದಿಗೆ ವಾಪಸ್ ಕೊಟ್ಟ ಘಟನೆ ಭಾನುವಾರ ನಡೆದಿದೆ.

ತಾಸಿನೊಳಗೆ ಯುವಕ ರೈಫಲ್ ಹಿಂತಿರುಗಿಸುವಲ್ಲಿ ಆತನ ಕುಟುಂಬ ವಹಿಸಿದ ಪಾತ್ರ ಪ್ರಶಂಸನೀಯ. ಈ ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಕಾಶ್ಮೀರದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವಿಜಯ್ ಕುಮಾರ್ ಭಾನುವಾರ ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ರಾಜ್‌ಪೊರಾ ಪ್ರದೇಶದಲ್ಲಿ ಕರ್ತವ್ಯ ನಿರತ ಸಿಆರ್‌ಪಿಎಫ್ ಸಿಬ್ಬಂದಿಯ ರೈಫಲ್ ಅನ್ನು ಪುಲ್ವಾಮಾದ ಸುಮಾರು 25 ವರ್ಷದ ಇರ್ಫಾನ್ ಬಶೀರ್ ಗನಿ ಎಂಬಾತ ಬೆಳಿಗ್ಗೆ ಕಸಿದುಕೊಂಡು ಪರಾರಿಯಾಗಿದ್ದ. ನಂತರ, ಭದ್ರತಾ ಪಡೆಗಳು ರೈಫಲ್ ಪತ್ತೆಗೆ ಮತ್ತು ಕಳವು ಮಾಡಿದ್ದ ಯುವಕನ ಬಂಧನಕ್ಕೆ ಶೋಧ ಕಾರ್ಯಾಚರಣೆ ಆರಂಭಿಸಿದ್ದವು.

ಕಾಂಗ್ರೆಸ್, ಜೆಡಿಎಸ್‌ನ ಚುನಾವಣಾ ಗಿಮಿಕ್: ಎಸ್.ಟಿ. ಸೋಮಶೇಖರ್

‘ಕೆಎಂಎಫ್, ಅಮುಲ್ ವಿಲೀನ ಪ್ರಸ್ತಾಪವೇ ಆಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎರಡು ದಿನ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರೊಂದಿಗೇ ಇದ್ದೆ. ಕೆಎಂಎಫ್ ಅನ್ನು ಗುಜರಾತ್‌ನ ಅಮುಲ್ ಜತೆ ವಿಲೀನಗೊಳಿಸುವ ಕುರಿತು ಪ್ರಸ್ತಾಪವೇ ಆಗಿಲ್ಲ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ‘ಗುಜರಾತ್‌ನ ಅಮುಲ್‌ನಷ್ಟೇ ಪ್ರಬಲವಾಗಿ ಕೆಎಂಎಫ್ ಬೆಳೆಯುತ್ತಿದೆ. ಎರಡೂ ಒಟ್ಟಾಗಿ ಹೋದರೆ ಅಭಿವೃದ್ಧಿ ಸಾಧ್ಯ ಎಂದು ಮಂಡ್ಯದಲ್ಲಿ ಕೇಂದ್ರ ಸಚಿವರು ಹೇಳಿದ್ದರು. ಚುನಾವಣೆ ಸಮೀಪದಲ್ಲಿರುವ ಕಾರಣದಿಂದ ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ಗಿಮಿಕ್ ಮಾಡಿ, ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದು ತಿಳಿಸಿದರು.

ನಿರ್ಣಯದ ಮೂಲಕ ಪ್ರಸ್ತಾಪಿಸಲಿ: ಡಿ.ಕೆ. ಶಿವಕುಮಾರ್

‘ಕೆಎಂಎಫ್ ಹಾಗೂ ಅಮುಲ್ ವಿಲೀನದ ಬಗ್ಗೆ ಅಮಿತ್ ಶಾ ಹೇಳಿರುವ ಮಾತನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ನಿರ್ಣಯದ ಮೂಲಕ ಪ್ರಸ್ತಾಪಿಸಲಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

‘ಇದು ರಾಜ್ಯಕ್ಕೆ ಸಂಬಂಧಿಸಿದ ವಿಚಾರ. ನಾನೂ ಸಹಕಾರ ಸಚಿವನಾಗಿದ್ದೆ. ನಮ್ಮ ಹಾಲು, ನಮ್ಮ ನೀರು, ನಮ್ಮ ಜನ, ನಮ್ಮ ಹಕ್ಕು. ಕನಕಪುರದಲ್ಲಿ ಅಮುಲ್ ಕಂಪನಿಗಿಂತ ದೊಡ್ಡ ಹಾಲು ಉತ್ಪಾದನೆ ಘಟಕ ಇದೆ. ರಾಜ್ಯದ ಎಲ್ಲ ಕಡೆಗಳಲ್ಲಿ ರೈತರು ಹಾಲು ಒಕ್ಕೂಟಗಳನ್ನು ಬೆಳೆಸಿದ್ದಾರೆ. ನಮ್ಮ ಸಂಸ್ಥೆ ಲಾಭದಲ್ಲಿ ನಡೆಯುತ್ತಿದೆ. ಬೇರೆ ರಾಜ್ಯಗಳ ಸಂಸ್ಥೆಯ ಜತೆ ವಿಲೀನ ಮಾಡಿಕೊಳ್ಳುವ ಅಗತ್ಯವಿಲ್ಲ. ಆ ಸಂಸ್ಥೆ ಜೊತೆಗೆ ಆರೋಗ್ಯಕರ ಸ್ಪರ್ಧೆ ಮಾಡುವ ಶಕ್ತಿ ನಮ್ಮ ರಾಜ್ಯದ ಹಾಲು ಉತ್ಪಾದಕರಿಗಿದೆ’ ಎಂದರು.

ವಿಲೀನಕ್ಕೆ ಮೊಯಿಲಿ ಆಕ್ಷೇಪ

ಮಂಗಳೂರು: ‘ಅಮುಲ್ ಹಾಗೂ ನಂದಿನಿ ಬ್ರ್ಯಾಂಡ್‌ಗಳನ್ನು ವಿಲೀನಗೊಳಿಸುವುದು ಅವಿವೇಕದ ನಿರ್ಧಾರ. ಸಹಕಾರ ತತ್ವದ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೂ ಇದು ವಿರುದ್ಧವಾದುದು’ ಎಂದು ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೋಯಿಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ಪ್ರತಿ ರಾಜ್ಯದಲ್ಲೂ ಹಾಲು ಉತ್ಪಾದಕರ ಒಕ್ಕೂಟಗಳನ್ನು ಬಲಪಡಿಸಬೇಕು ಎಂಬುದು ಕ್ಷೀರಕ್ರಾಂತಿಯ ರೂವಾರಿ ವರ್ಗೀಸ್ ಕುರಿಯನ್ ಅವರ ಆಶಯವಾಗಿತ್ತು. ಇಡೀ ವ್ಯವಸ್ಥೆಯನ್ನು ಕೇಂದ್ರೀಕರಣಗೊಳಿಸುವ ಮೂಲಕ ಸಹಕಾರಿ ತತ್ವಕ್ಕೆ ತಿಲಾಂಜಲಿ ಇಡಲು ಕೇಂದ್ರ ಸರ್ಕಾರ ಮುಂದಾಗಿದೆ’ ಎಂದರು.

‘ಅಮಿತ್ ಶಾ ಅವರಿಗೆ ಒಕ್ಕೂಟ ವ್ಯವಸ್ಥೆ ಎಂದರೆ ಏನೆಂದೇ ತಿಳಿದಿಲ್ಲ. ಅವರು ಸಂವಿಧಾನವನ್ನೂ ಓದಿಕೊಂಡಿರುವ ಬಗ್ಗೆಯೂ ಅನುಮಾನಗಳಿವೆ. ಎರಡೂವರೆ ವರ್ಷ ರಾಜ್ಯದಿಂದಲೇ ಗಡಿಪಾರಾದ ವ್ಯಕ್ತಿಯಿಂದ ಬೇರೇನನ್ನು ನಿರೀಕ್ಷೆ ಮಾಡಲು ಸಾಧ್ಯ’ ಎಂದೂ ಅವರು ಪ್ರಶ್ನಿಸಿದರು.

‘ಕೆಎಂಎಫ್ ಬಲಿಷ್ಠ ಸಂಸ್ಥೆ. 15 ಸಹಕಾರ ಹಾಲು ಉತ್ಪಾದಕರ ಒಕ್ಕೂಟಗಳು, ಒಂಬತ್ತು ಲಕ್ಷ ಮಹಿಳೆಯರು ಸೇರಿದಂತೆ 26 ಲಕ್ಷ ಜನರು ಈ ಸಂಸ್ಥೆಯಡಿ ಇದ್ದಾರೆ. ಸಾವಿರಾರು ಕೋಟಿ ರೂಪಾಯಿ ವಹಿವಾಟು ನಡೆಸುತ್ತಿದೆ. ಕೆಎಂಎಫ್ ಹಾಗೂ ಅಮುಲ್ ವಿಲೀನದ ಪ್ರಶ್ನೆಯೇ ಇಲ್ಲ. ಅಂತಹ ಮಾತನ್ನು ಅಮಿತ್ ಶಾ ಎಲ್ಲಿಯೂ ಹೇಳಿಲ್ಲ’ ಎಂದರು.

‘ಸಹಕಾರ ಸಂಸ್ಥೆಗಳ ಬಲವರ್ಧನೆ, ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಸಶಕ್ತ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆ, ಏಕರೂಪದ ತಂತ್ರಾಂಶ ಅಳವಡಿಸಿ, ಬೈಲಾ ರಚನೆ ಕುರಿತು ಚರ್ಚೆ ನಡೆದಿದೆ’ ಎಂದರು.



ಫಲಪುಷ್ಪ ಪ್ರದರ್ಶನ ಮೈಸೂರಿನ ಅರಮನೆಯಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದರು –ಪ್ರಜಾವಾಣಿ ಚಿತ್ರ

ಬಾಕಿ ಬಿಡುಗಡೆ ವಿಳಂಬವೇ ಪ್ರಸಾದ್ ಆತ್ಮಹತ್ಯೆಗೆ ಕಾರಣ?

ಸಾಲಬಾಧೆ ತಾಳದೆ ತುಮಕೂರು ತೊರೆದ ನಾಲ್ವರು ಗುತ್ತಿಗೆದಾರರು

ಪ್ರಜಾವಾಣಿ ವಾರ್ತೆ

ತುಮಕೂರು: ಇಲ್ಲಿನ ಸಪ್ತಗಿರಿ ಬಡಾವಣೆಯ ಪ್ರಥಮ ದರ್ಜೆ ಗುತ್ತಿಗೆದಾರ ಟಿ.ಎನ್. ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ಸಾಲ ಬಾಧೆ ತಾಳಲಾರದೆ ನಾಲ್ವರು ಗುತ್ತಿಗೆದಾರರು ನಗರ ತೊರೆದಿರುವುದು ಗೊತ್ತಾಗಿದೆ.

ತಾಲ್ಲೂಕಿನ ದೇವರಾಯನದುರ್ಗದ ಅತಿಥಿ ಗೃಹದಲ್ಲಿ ಶುಕ್ರವಾರ ಸಾಲದ ಒತ್ತಡ ತಾಳಲಾರದೆ ಪ್ರಸಾದ್ (50) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಜಿಲ್ಲೆಯಲ್ಲಿ 20 ವರ್ಷಗಳಿಂದ ಅವರು ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದರು. ಹೇಮಾವತಿ ನಾಲಾ ವಿಭಾಗ, ಲೋಕೋಪಯೋಗಿ ಇಲಾಖೆಯಡಿ ಹಲವು ಕಾಮಗಾರಿಗಳನ್ನು ನಿರ್ವಹಿಸಿದ್ದರು.

‘2015–16, 2016–17ನೇ ಸಾಲಿನಡಿ ಪ್ರಸಾದ್ ಅವರ ಸ್ನೇಹಿತರೊಬ್ಬರು ಶಿವಮೊಗ್ಗದಲ್ಲಿ ನಗರೋತ್ಥಾನ ಯೋಜನೆಯಡಿ ₹ 4 ಕೋಟಿ ಮೊತ್ತದ ಕಾಮಗಾರಿಗಳ ಗುತ್ತಿಗೆ ಪಡೆದಿದ್ದರು. ಈ ಸ್ನೇಹಿತನೊಟ್ಟಿಗೆ ಪ್ರಸಾದ್ ಕೂಡ ಪಾಲುದಾರರಾಗಿ ಕಾಮಗಾರಿಗಳನ್ನು ನಿರ್ವಹಿಸಿದ್ದರು. ಇದೇ ಯೋಜನೆಯಡಿ ಹೆಚ್ಚುವರಿಯಾಗಿ ನಿರ್ವಹಿಸಿದ ಚರಂಡಿ, ಸಿ.ಸಿ ರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳ ಬಿಲ್ ಪಾವತಿಯಾಗಿರಲಿಲ್ಲ. ಇದರಿಂದ ಅವರು ನೊಂದಿದ್ದರು’



ಟಿ.ಎನ್.ಪ್ರಸಾದ್

ಎಂದು ಪ್ರಸಾದ್ ಅವರ ದೊಡ್ಡಪ್ಪನ ಪುತ್ರ, ಪ್ರಥಮದರ್ಜೆ ಗುತ್ತಿಗೆದಾರ ರಾಧೇಶ್ಯಾಮ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಗರೋತ್ಥಾನ ಯೋಜನೆಯಡಿಯ ಹೆಚ್ಚುವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಎಷ್ಟು ಕೋಟಿ ರೂಪಾಯಿ ಬಿಲ್ ಬಾಕಿ ಇತ್ತು ಎಂಬುದು ನನಗೆ ತಿಳಿದಿಲ್ಲ. 2018ರಿಂದಲೂ ಈ ಸಂಬಂಧ ಶಿವಮೊಗ್ಗಕ್ಕೆ ಪದೇ ಪದೇ ಹೋಗಿ ಬರುತ್ತಿದ್ದರು. ಆದರೆ, ಬಾಕಿ ಮೊತ್ತ ಬಿಡುಗಡೆಯಾಗಿರಲಿಲ್ಲ’ ಎಂದು ಹೇಳಿದರು.

‘ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡ ಅತಿಥಿಗೃಹದ ಪಕ್ಕದಲ್ಲಿಯೇ ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿರುವ ಮಯೂರ ವರ್ಮ ಅತಿಥಿ ಗೃಹದ ದುರಸ್ತಿ ಗುತ್ತಿಗೆಯನ್ನು ನಾನೇ ಪಡೆದಿದ್ದೆ. ₹ 46 ಲಕ್ಷದ ಈ ಕಾಮಗಾರಿಯ ಉಸ್ತುವಾರಿ ನೋಡಿಕೊಳ್ಳಲು ಅವರಿಗೆ ವಹಿಸಿದ್ದೆ. ಇಲ್ಲಿಯವರೆಗೆ ಈ ಕಾಮಗಾರಿಯಡಿ ₹ 18.75 ಲಕ್ಷ ಬಿಡುಗಡೆಯಾಗಿದೆ. ಇನ್ನೂ ₹ 26 ಲಕ್ಷ ಬಿಲ್ ಬಾಕಿ ಇದೆ’ ಎಂದು ವಿವರಿಸಿದರು.

‘ತೀವ್ರ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದ್ದ ಪ್ರಸಾದ್ ಎರಡು ವರ್ಷದ ಹಿಂದೆ ನಗರದ ಸರಸ್ವತಿಪುರಂನಲ್ಲಿ ನಿರ್ಮಿಸಿದ್ದ ₹ 1 ಕೋಟಿ ಬೆಲೆ ಬಾಳುವ ಸ್ವಂತ ಮನೆಯನ್ನು ಮಾರಾಟ ಮಾಡಿದ್ದರು. ಏಳೆಂಟು ವರ್ಷದ ಹಿಂದೆ ಹೇಮಾವತಿ ನಾಲಾ ವಿಭಾಗದಲ್ಲಿ ನಿರ್ವಹಿಸಿದ್ದ ಕಾಮಗಾರಿಯೊಂದರ ₹ 1 ಲಕ್ಷ ಬಾಕಿ ಬಿಲ್ ಪಡೆಯಲು ಕಚೇರಿಗೆ ಅಲೆದಾಡುತ್ತಿದ್ದರು’ ಎಂದು ವಿವರಿಸಿದರು.

ಭ್ರಷ್ಟಾಚಾರ ಉಲ್ಬಣ: ‘ಸರ್ಕಾರಿ ಇಲಾಖೆಗಳಲ್ಲಿ ಭ್ರಷ್ಟಾಚಾರ ಜಾಸ್ತಿಯಾಗಿದೆ. ಮಾಡಿದ ಸಾಲ ತೀರಿಸಲಾಗದೆ ತುಮಕೂರಿನ ನಾಲ್ವರು ಗುತ್ತಿಗೆದಾರರು ಈಗಾಗಲೇ ಊರು ಬಿಟ್ಟು ಬೇರೆಡೆ ಹೋಗಿದ್ದಾರೆ’ ಎಂದು ಗುತ್ತಿಗೆದಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ.ಡಿ. ಬಲರಾಮಯ್ಯ ಪ್ರತಿಕ್ರಿಯೆ ನೀಡಿದರು.

‘ಇಲಾಖೆಗಳಲ್ಲಿ ಪ್ರತಿಯೊಂದಕ್ಕೂ ಲಂಚ ಪಡೆಯುತ್ತಿದ್ದಾರೆ. ಕಾಮಗಾರಿಗಳ ಬಿಲ್‌ಗಳನ್ನು ಸೂಕ್ತ ಸಮಯಕ್ಕೆ ಬಿಡುಗಡೆ ಮಾಡದೆ ಸತಾಯಿಸುತ್ತಾರೆ. ಇದರಿಂದ ಗುತ್ತಿಗೆದಾರರು ಮಾಡಿದ ಸಾಲಕ್ಕೆ ಬಡ್ಡಿ ಬೆಳೆಯುತ್ತದೆ. ಇದರಿಂದ ಆತ್ಮಹತ್ಯೆ ದಾರಿ ಹಿಡಿಯುವ ವಾತಾವರಣ ಸೃಷ್ಟಿಯಾಗಿದೆ’ ಎಂದರು.

‘ಕಾಂಗ್ರೆಸ್ ಸೋಲಿಸಲು ಬಿಜೆಪಿಯಿಂದ ಕೇಂದ್ರ ತಂಡ’

ಬೆಂಗಳೂರು: ‘ಕಾಂಗ್ರೆಸ್ ಪಕ್ಷದ ಸಾಮೂಹಿಕ ನಾಯಕತ್ವವನ್ನು ಸೋಲಿಸಲು ಸಾಧ್ಯವಿಲ್ಲವೆಂದು ತಿಳಿದು ಬಿಜೆಪಿಯವರು ಪ್ರಧಾನಿ ಹೆಸರನ್ನು ಮುಂಚೂಣಿಗೆ ತಂದು, ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸುವುದಾಗಿ ಅಮಿತ್ ಶಾ ಹೇಳಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭಾನುವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಕಾಂಗ್ರೆಸ್ ಪಕ್ಷ ಮಲ್ಲಿಕಾರ್ಜುನ ಖರ್ಗೆ, ನಾನು, ಸಿದ್ದರಾಮಯ್ಯ, ಪರಮೇಶ್ವರ, ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಬಿ.ಕೆ.ಹರಿಪ್ರಸಾದ್ ಸೇರಿ ಎಲ್ಲರ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಲಿದೆ’ ಎಂದರು.

‘ಕೇಂದ್ರ ಸಚಿವ ಅಮಿತ್ ಶಾ ಅವರು ಎರಡು ದಿನ ರಾಜ್ಯ ಪ್ರವಾಸದಲ್ಲಿ, ಬಿಜೆಪಿಯಲ್ಲಿ ನಾಯಕತ್ವ ವಹಿಸಿಕೊಳ್ಳಲು ಯಾರೂ ಸಿದ್ಧರಿಲ್ಲ. ಪಕ್ಷದ ಈಗಿನ ಮುಖಂಡರ ನಾಯಕತ್ವದಲ್ಲಿ ಮುಂದಿನ ಚುನಾವಣೆ ಗೆಲ್ಲಲಾಗದು ಎಂದು ಒಪ್ಪಿಕೊಂಡು, ಪ್ರಧಾನಿ ನಾಯಕತ್ವದಲ್ಲಿ ಚುನಾವಣೆ ಎದುರಿಸುವುದಾಗಿ ಸತ್ಯ ನುಡಿದಿದ್ದಾರೆ. ಅಂದರೆ, ನಮ್ಮನ್ನು ಸೋಲಿಸಲು ರಾಜ್ಯದಲ್ಲಿರುವ ಬಿಜೆಪಿ ನಾಯಕರ ಕೈಯಲ್ಲಿ ಸಾಧ್ಯವಾಗದೆ ಕೇಂದ್ರ ತಂಡ ಬರುತ್ತಿದೆ. ಬರಲಿ ತೊಂದರೆ ಇಲ್ಲ. ಜನರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೆ’ ಎಂದು ಅವರು ಹೇಳಿದರು.

ಕೇಂದ್ರದಿಂದ ಸಿರಿಧಾನ್ಯ ಕೇಂದ್ರಿತ ಚಟುವಟಿಕೆಗಳಿಗೆ ಪ್ರೋತ್ಸಾಹ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ಪ್ರಯುಕ್ತ ಕೇಂದ್ರ ಸರ್ಕಾರವು ದೇಶದಾದ್ಯಂತ ‘ಸಿರಿಧಾನ್ಯ ಕೇಂದ್ರಿತ’ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದಾಗಿ ಭಾನುವಾರ ತಿಳಿಸಿದೆ.

ಅಲ್ಲದೆ ಸಿರಿಧಾನ್ಯವು ಜಿ–20ರ ಸಮಾವೇಶದ ಭಾಗವೂ ಆಗಿರಲಿದೆ ಎಂದು ಕೇಂದ್ರ ಹೇಳಿದೆ.

ಕೇಂದ್ರ ಸರ್ಕಾದ ವಿವಿಧ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಭಾರತೀಯ ರಾಯಭಾರ ಕಚೇರಿಗಳು ಐವೈಎಂ ಪ್ರಯುಕ್ತ ಬೇರೆ ಬೇರೆ ತಿಂಗಳಿನಲ್ಲಿ ಸಿರಿಧಾನ್ಯಕ್ಕೆ ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರೋತ್ಸಾಹಿಸಲಿವೆ. ಸಿರಿಧಾನ್ಯದ ಪ್ರಯೋಜನಗಳ ಕುರಿತು ಈ ವೇಳೆ ವ್ಯಾಪಕವಾಗಿ ಜಾಗೃತಿ ಮೂಡಿಸಲಾಗುವುದು ಎಂದು ಕೃಷಿ ಇಲಾಖೆಯ ಪ್ರಕಟಣೆ ಹೇಳಿದೆ.

ಮೀನು ಹಿಡಿಯಲು ಹೋಗಿದ್ದಾಗ ಆನೆ ದಾಳಿ

ತಂದೆ ಸಾವು, ಮಗನಿಗೆ ಗಾಯ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ: ಕಡಬ ತಾಲ್ಲೂಕಿನ ಶಿರಾಡಿ ಗ್ರಾಮದಲ್ಲಿ ಮೀನಿಗೆ ಬಲೆ ಹಾಕಲು ಹೊಳೆ ಬದಿಗೆ ಹೋಗಿದ್ದ ವೇಳೆ ಕಾಡಾನೆ ದಾಳಿಯಿಂದ ಶಿರಾಡಿಯ ಜನತಾ ಕಾಲೊನಿ ನಿವಾಸಿ ತಿಮ್ಮಪ್ಪ (45) ಮೃತಪಟ್ಟಿದ್ದಾರೆ.



ತಿಮ್ಮಪ್ಪ

ಅವರ ಪುತ್ರ ಶರೂನ್ (18) ಗಾಯಗೊಂಡಿದ್ದು, ಮಂಗಳೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ತಿಮ್ಮಪ್ಪ ಹಾಗೂ ಶರೂನ್ ಅವರು ಶನಿವಾರ ಸಂಜೆ ಗುಂಡ್ಯ ಹೊಳೆಯಲ್ಲಿ ಮೀನು ಹಿಡಿಯಲು ತೆರಳಿದ್ದರು. ಈ ವೇಳೆ ಕಾಡಾನೆಯೊಂದು ದಾಳಿ ನಡೆಸಿದೆ. ಗಂಭೀರ ಗಾಯಗೊಂಡ ತಿಮ್ಮಪ್ಪ ಹೊಳೆ ಬದಿಯಲ್ಲಿಯೇ ಬಿದ್ದಿದ್ದು, ಶರೂನ್ ಗಾಯಗೊಂಡರೂ ತಪ್ಪಿಸಿಕೊಂಡು ಸಮೀಪದ ನಿವಾಸಿ ರಾಜೇಶ್ ಎಂಬುವರ ಮನೆಗೆ ಓಡಿ ಬಂದು ಸುದ್ದಿ ತಿಳಿಸಿದ್ದರು. ಬಳಿಕ ಗ್ರಾಮಸ್ಥರು ಸ್ಥಳಕ್ಕೆ ತೆರಳಿದ್ದು, ದಾಳಿ ನಡೆಸಿದ್ದ ಆನೆ ಪತ್ತೆಯಾಗಲಿಲ್ಲ. ಗಂಭೀರ ಗಾಯಗೊಂಡು ಬಿದ್ದಿದ್ದ ತಿಮ್ಮಪ್ಪ ಅವರನ್ನು ಮಂಗಳೂರು ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಅವರು ಮೃತಪಟ್ಟಿದ್ದರು. ಶರೂನ್ ಮಂಗಳೂರಿನಲ್ಲಿ ಐಟಿಐ ವ್ಯಾಸಂಗ ಮಾಡುತ್ತಿದ್ದು ರಜೆಯಲ್ಲಿ ಊರಿಗೆ ಬಂದಿದ್ದರು.

ಆನೆ ದಾಳಿ: ಕಾವಲುಗಾರ ಸಾವು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ಮೇಟಿಕುಪ್ಪೆ ವನ್ಯಜೀವಿ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆನೆ ಕಾವಲುಗಾರ, ತಾಲ್ಲೂಕಿನ ಭೀಮನಕೊಲ್ಲಿ ಗ್ರಾಮದ ಮಹದೇವಸ್ವಾಮಿ (35) ಶನಿವಾರ ರಾತ್ರಿ ಆನೆ ದಾಳಿಯಿಂದ ಸಾವಿಗೀಡಾಗಿದ್ದಾರೆ.



ಮಹದೇವಸ್ವಾಮಿ

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

‘ಕಾಡಿನಿಂದ ಹೊರ ಬಂದ ಆನೆಗಳನ್ನು ಓಡಿಸುವಾಗ ಮಹದೇವಸ್ವಾಮಿ ಟಾರ್ಚ್ ಹಿಡಿದಿದ್ದರು. ಆ ಬೆಳಕಿನ ಹಾದಿ ಹಿಡಿದು ಬಂದು ಆನೆಯು ದಾಳಿ ಮಾಡಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ರಾತ್ರಿಯೇ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಆದರೆ, ಚಿಕಿತ್ಸೆಗೆ ಸ್ಪಂದಿಸಿಲ್ಲ’ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಿತು.

ನಾಗರಹೊಳೆ ರಾಷ್ಟ್ರೀಯ ಉದ್ಯಾನದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ₹ 5 ಲಕ್ಷ ಪರಿಹಾರದ ಚೆಕ್ ಕುಟುಂಬದವರಿಗೆ ನೀಡಿದರು.

ವಿಷಾಹಾರ: 100ಕ್ಕೂ ಅಧಿಕ ಮಂದಿ ಅಸ್ವಸ್ಥ

ಪತ್ತನಂತಿಟ್ಟ, ಕೇರಳ (ಪಿಟಿಐ): ಇಲ್ಲಿನ ಕೀಳವೈಪುರದ ಚರ್ಚ್‌ನಲ್ಲಿ ನಡೆದಿದ್ದ ದೀಕ್ಷೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರ ಪೈಕಿ 100ಕ್ಕೂ ಅಧಿಕ ಮಂದಿ ಅಸ್ವಸ್ಥರಾಗಿದ್ದು, ಒಬ್ಬರ ಸ್ಥಿತಿ ಗಂಭೀರವಾಗಿದೆ. ವಿಷಾಹಾರ ಸೇವನೆ ಇದಕ್ಕೆ ಕಾರಣವಾಗಿರಬಹುದೆಂಬ ಅನು ಮಾನ ವ್ಯಕ್ತವಾಗಿದೆ.

ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರು ಈ ಕುರಿತು ತನಿಖೆಗೆ ಆದೇಶಿಸಿದ್ದಾರೆ. ಈ ಸಂಬಂಧ ಶೀಘ್ರವೇ ವರದಿ ಸಲ್ಲಿಸುವಂತೆ ಆಹಾರ ಸುರಕ್ಷತಾ ಇಲಾಖೆಗೆ ಸೂಚಿಸಿದ್ದಾರೆ.

ಆಹಾರ ಪೂರೈಕೆದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಬಿಜೆಪಿ ‘ಬೂತ್ ವಿಜಯ’ ಅಭಿಯಾನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾ ಚುನಾವಣೆಗೆ ಮತಗಟ್ಟೆ ಹಂತದಲ್ಲಿ ಪಕ್ಷವನ್ನು ಸಜ್ಜುಗೊಳಿಸಲು ಬಿಜೆಪಿ ಹಮ್ಮಿಕೊಂಡಿರುವ ಬೂತ್ ವಿಜಯ ಅಭಿಯಾನವು ಸೋಮವಾರ ಆರಂಭವಾಗಲಿದ್ದು, ಜ. 12ರವರೆಗೂ ನಡೆಯಲಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮಹೇಶ್ ಟೆಂಗಿನಕಾಯಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಮಂಗಳೂರಿನಲ್ಲಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶಿವಾಜಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

‘ಪಕ್ಷದ ಎಲ್ಲ 39 ಸಂಘಟನಾ ಜಿಲ್ಲೆಗಳು, 312 ಮಂಡಲಗಳು, 1,445 ಮಹಾಶಕ್ತಿ ಕೇಂದ್ರ, 11,642 ಶಕ್ತಿ ಕೇಂದ್ರ ಹಾಗೂ 58,186 ಮತಗಟ್ಟೆಗಳ ಹಂತದಲ್ಲಿ ಈ ಅಭಿಯಾನ ನಡೆಯಲಿದೆ’ ಎಂದು ತಿಳಿಸಿದರು.

‘ಚುನಾವಣೆಯಲ್ಲಿ ಕನಿಷ್ಠ 150 ಸ್ಥಾನ ಗೆಲ್ಲುವ ಗುರಿಯೊಂದಿಗೆ ಈ ಅಭಿಯಾನ ನಡೆಯಲಿದೆ. ಕೇಂದ್ರ, ರಾಜ್ಯ ಸಚಿ ವರು, ಸಂಸದರು, ಶಾಸಕರು ಸೇರಿಎಲ್ಲ ಮುಖಂಡರು ಪಾಲ್ಗೊಳ್ಳಲಿದ್ದಾರೆ. 20 ಲಕ್ಷ ಕಾರ್ಯಕರ್ತರು ಭಾಗವಹಿಸುವರು. ಮತಗಟ್ಟೆ ಹಂತದ ಸಮಿತಿ, ‘ಪೇಜ್ ಪ್ರಮುಖ’ರ ನಿಯುಕ್ತಿ, ಮತಗಟ್ಟೆ ಹಂತದ ವಾಟ್ಸ್‌ಆ್ಯಪ್ ಗುಂಪುಗಳ ರಚನೆ,ಮನ್ ಕೀ ಬಾತ್ ವೀಕ್ಷಣೆಗೆ 60 ಸಾವಿರ ಗುಂಪುಗಳ ರಚನೆ, 50 ಲಕ್ಷ ಮನೆಗಳ ಮೇಲೆ ಪಕ್ಷದ ಧ್ವಜ ಹಾರಿಸಲಾಗುವುದು. ಸಚಿವ ಕೋಟ ಶ್ರೀನಿವಾಸ ಪೂಜಾರಿ ನೇತೃತ್ವದಲ್ಲಿ ಸಂಚಾಲನಾ ಸಮಿತಿ ರಚಿಸಲಾಗಿದೆ’ ಎಂದು ತಿಳಿಸಿದರು.

‘ರಾಜಕೀಯ ವಂಶಪಾರಂಪರ್ಯ ವ್ಯಾಪಾರವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಕೀಯ ವಂಶ ಪಾರಂಪರ್ಯವಾಗಿ ನಡೆಸುವ ವ್ಯಾಪಾರ ವಲ್ಲ. ಅಪ್ಪ, ಮಗ, ಮೊಮ್ಮಗ, ಮರಿಮಗ ಅಧಿಕಾರಕ್ಕಾಗಿ ಟವೆಲ್ ಹಾಕುವುದು ನಿಲ್ಲಬೇಕು’ ಎಂದು ಜೆಡಿಎಸ್ ನಾಯಕರ ವಿರುದ್ಧ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಭಾನುವಾರ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅಪ್ಪನ ನಂತರ ಮಗ, ನಂತರ ಮೊಮ್ಮಗ ಹೀಗೆ ಟವೆಲ್ ಹಾಕುತ್ತಾರೆ. ಅನುಕಂಪ ಸೃಷ್ಟಿಸಿ ಗೆದ್ದೂ ಬರುತ್ತಾರೆ. ಆದರೆ, ಜನಸೇವೆ ಮಾಡುವುದಿಲ್ಲ. ಉದ್ಯೋಗ ಬೇಕು ಎಂದು ರಾಜಕೀಯಕ್ಕೆ ಬರಬೇಕಾ? ಅವಕಾಶ ಸಿಕ್ಕಾಗ ಜನಸೇವೆ ಮಾಡುವ ಜವಾಬ್ದಾರಿ ನಿರ್ವಹಿಸಬೇಕಾ’ ಎಂದು ಪ್ರಶ್ನಿಸಿದರು.

‘ರಾಮನಗರ ಕ್ಷೇತ್ರ ಹೇಗಿದೆ ಎಂದು ನೋಡಬೇಕು. ಚನ್ನಪಟ್ಟಣ ಕ್ಷೇತ್ರದ ಕತೆಯೂ ಹಾಗೇ ಇದೆ. ಮಾಜಿ ಮುಖ್ಯಮಂತ್ರಿಯೊಬ್ಬರು ಪ್ರತಿನಿಧಿಸಿದ ಕ್ಷೇತ್ರವೇ ಎಂದು ಅಚ್ಚರಿಯಾಗುತ್ತದೆ. ಎಂತೆಂಥವರಿಗೆ ಅಧಿಕಾರ ಕೊಟ್ಟಿದ್ದೇವಲ್ಲಾ’ ಎಂದರು.

‘ರಾಜ್ಯದ ಎಲ್ಲ ಭಾಗಗಳಲ್ಲೂ ಬಿಜೆಪಿ ಬಲಿಷ್ಠವಾಗಿ ಬೆಳೆಯಬೇಕು ಮತ್ತು ಸ್ವತಂತ್ರವಾಗಿ ಅಧಿಕಾರಕ್ಕೆ ಬರಬೇಕು ಎಂಬುದು ಕೇಂದ್ರ ಸಚಿವ ಅಮಿತ್ ಶಾ ಅವರ ಗುರಿ. ಆ ಕಾರಣಕ್ಕಾಗಿಯೇ ಬಿಜೆಪಿಯ ಎದುರಾಳಿ ಯಾರು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. 2008, 2018ರ ಚುನಾವಣೆಯಂತೆ ಅತಂತ್ರ ಫಲಿತಾಂಶ ಬರುವುದನ್ನು ತಪ್ಪಿಸುವುದು ಇದರ ಉದ್ದೇಶ’ ಎಂದು ಹೇಳಿದರು.

ಮೊದಲ ಬಾರಿ ರಾಜ್ಯದಲ್ಲಿ ಪ್ರಯೋಗ, ಚುನಾವಣೆ ಕಾರ್ಯಕ್ಕೆ ‘ಸಂಜ್ಞೆ ಸಂವಹನಕಾರರು’

ಮಾತು ಬಾರದ, ಕಿವಿ ಕೇಳದ ಮತದಾರರಿಗೆ ನೆರವು

• ಬಾಲಕೃಷ್ಣ ಪಿ.ಎಚ್.

ಪ್ರಜಾವಾಣಿ ವಿಶೇಷ

ದಾವಣಗೆರೆ: ಮಾತು ಬಾರದ, ಕಿವಿ ಕೇಳದ ಮತದಾರರ ನೆರವಿಗಾಗಿ ‘ಸಂಜ್ಞೆ ಸಂವಹನಕಾರರನ್ನು ಪೋಲ್ ಪ್ಯಾನಲ್ ಸಹಾಯಕರನ್ನಾಗಿ ನೇಮಿಸಿಕೊಳ್ಳಬೇಕು’ ಎಂದು ಚುನಾವಣಾ ಆಯೋಗ ಸೂಚಿಸಿದ್ದು, ರಾಜ್ಯ ವಿಧಾನಸಭೆ ಚುನಾವಣೆಯ ಮತಗಟ್ಟೆಗಳಲ್ಲಿ ಸಂಜ್ಞೆ ಸಂವಹನಕಾರರು ಕಾರ್ಯ ನಿರ್ವಹಿಸಲಿದ್ದಾರೆ.

ರಾಜ್ಯದಲ್ಲಿ 2011ರ ಗಣತಿ ಪ್ರಕಾರ ವಾಕ್ ಮತ್ತು ಶ್ರವಣದೋಷ ಹೊಂದಿದ 1.66 ಲಕ್ಷ ಜನರಿದ್ದು, ಈಗ ಅವರ ಸಂಖ್ಯೆ 2 ಲಕ್ಷ ದಾಟಿದೆ. ಅವರು ಮತ ಚಲಾಯಿಸಲು ಬಂದಾಗ ಯಾವುದೇ ಸಂಶಯ ಬಂದರೂ ಕೇಳಲು ಅವರಿಗೆ ಮಾತು ಬಾರದು. ಅಲ್ಲಿದ್ದವರಿಗೆ ಇವರ ಸಂಜ್ಞೆ ಅರ್ಥವಾಗದು ಎಂಬ ಕಾರಣದಿಂದ ಸಮಸ್ಯೆ ನಿವಾರಣೆಗಾಗಿ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ನೀಡಿದ ಸೂಚನೆ ಮೇರೆಗೆ ಸರ್ಕಾರ ನೆರವಿನ ಕ್ರಮ ಕೈಗೊಂಡಿದೆ.



ಬಹುತೇಕ ಜಿಲ್ಲೆಗಳಲ್ಲಿ ನೇಮಕ ನಡೆದಿಲ್ಲ. ಕೂಡಲೇ ನೇಮಿಸಿಕೊಳ್ಳಬೇಕು. ಇಲ್ಲವೇ ಬೂತ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೇ ಸಂಜ್ಞೆ ಸಂವಹನವನ್ನು ಕಲಿಸಿಕೊಡಬೇಕು

ದುರ್ಗೇಶ್, ಸಂಜ್ಞೆ ಸಂವಹನಕಾರ, ಚುನಾವಣಾ ಐಕಾನ್ ದಾವಣಗೆರೆ



ಶ್ರವಣದೋಷ ಉಳ್ಳವರು ವಿದ್ಯಾವಂತರಾಗಿರಬೇಕು. ಇಲ್ಲದಿದ್ದರೆ ಅವರಿಗೂ ಸಂಜ್ಞೆ ಭಾಷೆ ಬರುವುದಿಲ್ಲ. ಬಾರದೇ ಹೋದರೆ ಅವರ ಸಂಶಯವನ್ನು ನಿವಾರಿಸಲೂ ಆಗುವುದಿಲ್ಲ

ಡಾ. ಕೆ.ಕೆ. ಪ್ರಕಾಶ್, ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ

ಸಂಜ್ಞೆ ಸಂವಹನ ಸಹಾಯಕರು ಆಯಾ ಮತಗಟ್ಟೆಯಲ್ಲಿ ಇದ್ದರೆ, ಮಾತು ಬಾರದ, ಕಿವಿ ಕೇಳದ ಮತದಾರರಲ್ಲಿನ ಗೊಂದಲ ನಿವಾರಿಸಬಹುದು. ಎಲ್ಲ ಮತಗಟ್ಟೆಯಲ್ಲಿ ಸಂಜ್ಞೆ ಸಂವಹನಕಾರರು ಇರಲಾರರು. ಅದಕ್ಕಾಗಿ ಈ ಸಂವಹನಕಾರರ ಮೊಬೈಲ್ ಸಂಖ್ಯೆ ಎಲ್ಲ ಬೂತ್‌ಗಳಲ್ಲಿ ಇರಬೇಕು. ಅಗತ್ಯ ಇರುವವರು ಈ ಸಂಖ್ಯೆಗೆ ವಿಡಿಯೊ ಕಾಲ್ ಮಾಡಿ ಸಂಶಯ ನಿವಾರಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಶ್ರವಣದೋಷ ಉಳ್ಳವರಿಗಾಗಿ ತಲಾ ಒಂದು ಪ್ರಾಥಮಿಕ, ಪ್ರೌಢಶಾಲೆ ಇದೆ. ಅದರಲ್ಲಿ 40 ಮಂದಿ ಶಿಕ್ಷಕರು ಇದ್ದಾರೆ. ಬೇರೆಯವರೂ ಸಂಜ್ಞೆ ಸಂವಹನ ಜ್ಞಾನ ಹೊಂದಿದ್ದಾರೆ. ಜಿಲ್ಲೆಯಲ್ಲಿ ಸಂಜ್ಞೆ ಸಂವಹನಕಾರರ ಕೊರತೆ ಇಲ್ಲ. ಯಾವ ಜಿಲ್ಲೆಯಲ್ಲಿ ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಕಲಿಕೆಗೆ ಸೌಲಭ್ಯ ಇಲ್ಲವೋ ಅಲ್ಲಿ ಕೊರತೆ ಕಾಡಲಿದೆ ಎಂದು ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್ ತಿಳಿಸಿದರು.

‘ನಮ್ಮಲ್ಲಿ ಎಲ್ಲರಿಗೂ ಸಂಜ್ಞೆ ಭಾಷೆ ಕಲಿಸಲಾಗುತ್ತಿದೆ. ವಿದ್ಯಾವಂತರಾಗಿ ಇರುವುದರಿಂದ ಅವರಿಗೆ ಕನ್ನಡ ಓದಲು ಬರುತ್ತದೆ. ಯಾರಿಗೆ ಮತ ಹಾಕಬೇಕು ಎಂಬುದು ಗೊತ್ತಾಗುತ್ತದೆ. ಇಷ್ಟಾದ ಮೇಲೂ ಸಂಶಯ ಬಂದರೆ ಸಂಜ್ಞೆ ಸಂವಹನಕಾರರು ಸಹಾಯ ಮಾಡುತ್ತಾರೆ’ ಎಂದು ವಿವರಿಸಿದರು.

ಸೋಮವಾರ, ಜನವರಿ 2, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 2 | ಪುಟ 14
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಯುಪಿಎಸ್‌ಸಿ ಪರೀಕ್ಷೆಯ ತಯಾರಿ ಕುರಿತ ಮಾಹಿತಿ ಇಲ್ಲಿದೆ



ಸಿಎಂಐಇ ಸಂಸ್ಥೆಯ ವರದಿಯಲ್ಲಿ ಉಲ್ಲೇಖ • ನಗರ ಪ್ರದೇಶಗಳಲ್ಲಿ ಹೆಚ್ಚು

ನಿರುದ್ಯೋಗ 16 ತಿಂಗಳ ಗರಿಷ್ಠ

ನವದೆಹಲಿ (ರಾಯಿಟರ್ಸ್): ಡಿಸೆಂಬರ್ ತಿಂಗಳಲ್ಲಿ ದೇಶದ ನಿರುದ್ಯೋಗ ಪ್ರಮಾಣವು ಶೇಕಡ 8.30ಕ್ಕೆ ಏರಿಕೆ ಆಗಿದೆ. ಇದು 16 ತಿಂಗಳ ಗರಿಷ್ಠ ಮಟ್ಟ. ನವೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣವು ಶೇ 8ರಷ್ಟು ಇತ್ತು ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಸಂಸ್ಥೆ ಸಿದ್ಧಪಡಿಸಿರುವ ವರದಿ ಹೇಳಿದೆ.

ನಗರ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ನವೆಂಬರ್‌ನಲ್ಲಿ ಶೇ 8.96ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ ಶೇ 10.09ಕ್ಕೆ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗ ಪ್ರಮಾಣವು ಇದೇ ಅವಧಿಯಲ್ಲಿ ಶೇ 7.55ರಿಂದ ಶೇ 7.44ಕ್ಕೆ ಇಳಿಕೆಯಾಗಿದೆ.

ನಿರುದ್ಯೋಗ ಪ್ರಮಾಣದಲ್ಲಿನ ಏರಿಕೆಗೆ ಸಂಬಂಧಿಸಿದ ಅಂಕಿ-ಅಂಶಗಳು 'ಕಾಣುವಷ್ಟು ಕೆಟ್ಟದ್ದಾಗಿಲ್ಲ' ಎಂದು ಸಿಎಂಐಇ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ವ್ಯಾಸ್ ಹೇಳಿದ್ದಾರೆ. ಡಿಸೆಂಬರ್‌ನಲ್ಲಿ ಕಾರ್ಮಿಕರ ಭಾಗೀದಾರಿಕೆ ಪ್ರಮಾಣವು ಶೇ 40.48ಕ್ಕೆ ಹೆಚ್ಚಾಗಿದ್ದು, ಇದು 12 ತಿಂಗಳ ಗರಿಷ್ಠ ಎಂದು ವ್ಯಾಸ್ ಹೇಳಿದ್ದಾರೆ.

'ಭಾರತವು ಜಿಡಿಪಿ ಬೆಳವಣಿಗೆಯ ಮೇಲೆ ಮಾತ್ರ ಗಮನ ಹರಿಸುವ ಬದಲು, ಉದ್ಯೋಗ ಸೃಷ್ಟಿಯೂ ಹೆಚ್ಚಾಗುವ, ಯುವಕರ ಕೌಶಲ ಹೆಚ್ಚಿಸುವ ಹಾಗೂ ರಫ್ತಿಗೆ ಅವಕಾಶ ಇರುವ ರೀತಿಯಲ್ಲಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಬೆಳವಣಿಗೆಯ ಕಡೆ ಸಾಗಬೇಕು' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಶನಿವಾರ ಹೇಳಿದ್ದರು.

ನಿರುದ್ಯೋಗ

10.09% ನಗರ ಪ್ರದೇಶಗಳಲ್ಲಿ ನಿರುದ್ಯೋಗ



7.44% ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ

ದಕ್ಷಿಣದ ರಾಜ್ಯಗಳಲ್ಲಿ ಎಷ್ಟು?

ಕರ್ನಾಟಕ	2.5%
ಕೇರಳ	7.4%
ತಮಿಳುನಾಡು	4.1%
ತೆಲಂಗಾಣ	4.1%
ಆಂಧ್ರಪ್ರದೇಶ	7.7%

(ಆಧಾರ: ಸಿಎಂಐಇ)

ಮುಖ್ಯಾಂಶಗಳು
- ಹರಿಯಾಣದಲ್ಲಿ ಅತಿಹೆಚ್ಚು ನಿರುದ್ಯೋಗ
- ಕರ್ನಾಟಕದಲ್ಲಿ ನಿರುದ್ಯೋಗ ಪ್ರಮಾಣ ಕಡಿಮೆ
- ಕಾರ್ಮಿಕರ ಭಾಗೀದಾರಿಕೆ ಪ್ರಮಾಣದಲ್ಲಿ ಏರಿಕೆ

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ನವೆಂಬರ್‌ನಲ್ಲಿ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ನಿರುದ್ಯೋಗ ಪ್ರಮಾಣವು ಶೇ 7.2ಕ್ಕೆ ಇಳಿಕೆಯಾಗಿದೆ. ನಿರುದ್ಯೋಗ ಪ್ರಮಾಣವು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 7.6ರಷ್ಟು ಇತ್ತು.

ಸಿಎಂಐಇ ವರದಿ ಪ್ರಕಾರ, ಡಿಸೆಂಬರ್‌ನಲ್ಲಿ ಹರಿಯಾಣದಲ್ಲಿ ನಿರುದ್ಯೋಗ ಪ್ರಮಾಣವು ಶೇ 37.4ಕ್ಕೆ ಹೆಚ್ಚಾಗಿದೆ. ರಾಜಸ್ಥಾನದಲ್ಲಿ ಶೇ 28.5ರಷ್ಟು, ದೆಹಲಿಯಲ್ಲಿ ಶೇ 20.8ರಷ್ಟು ನಿರುದ್ಯೋಗ ಇದೆ ಎಂದು ಸಿಎಂಐಇ ಹೇಳಿದೆ. ಕರ್ನಾಟಕದಲ್ಲಿ ಡಿಸೆಂಬರ್‌ನಲ್ಲಿ ಶೇ 2.5ರಷ್ಟು ನಿರುದ್ಯೋಗ ಪ್ರಮಾಣ ದಾಖಲಾಗಿದೆ.

ಡಿಸೆಂಬರ್ ತಿಂಗಳಲ್ಲಿ ಒಡಿಶಾದಲ್ಲಿ ಅತ್ಯಂತ ಕಡಿಮೆ ಪ್ರಮಾಣದ (ಶೇ 0.9 ರಷ್ಟು) ನಿರುದ್ಯೋಗ ದಾಖಲಾಗಿದೆ.

ಜಿಎಸ್‌ಟಿ ಸಂಗ್ರಹ ಶೇ 15ರಷ್ಟು ಏರಿಕೆ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾಗುವ ವರಮಾನವು ಡಿಸೆಂಬರ್ ತಿಂಗಳಲ್ಲಿ ಶೇಕಡ 15ರಷ್ಟು ಹೆಚ್ಚಾಗಿದ್ದು, ₹ 1.49 ಲಕ್ಷ ಕೋಟಿಗೆ ತಲುಪಿದೆ. 8



86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಏಲಕ್ಕಿ ಮಾಲೆಗಳನ್ನು ತಯಾರಿಸುತ್ತಿರುವ ಹಾವೇರಿಯ ಉಸ್ಮಾನ್‌ಸಾಹೇಬ್ ಪಟವೇಗಾರ್ ಕುಟುಂಬಸ್ಥರು –ಪ್ರಜಾವಾಣಿ ಚಿತ್ರ/ ಮಾಲತೇಶ ಇಚ್ಚಂಗಿ

ಉಸ್ಮಾನ್ ಸಾಹೇಬ್ ಪಟವೇಗಾರ್ ಕುಟುಂಬಸ್ಥರಿಂದ ಸಿದ್ಧತೆ

ನುಡಿಜಾತ್ರೆಗೆ ಏಲಕ್ಕಿ ಮಾಲೆ ಕಂಪು

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ಏಲಕ್ಕಿ ಕಂಪಿನ ನಾಡಿನಲ್ಲಿ ಜನವರಿ 6ರಿಂದ 8ರವರೆಗೆ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಸಮ್ಮೇಳನಾಧ್ಯಕ್ಷ, ಮುಖ್ಯಮಂತ್ರಿ ಹಾಗೂ ಇತರೆ ಗಣ್ಯರನ್ನು ಗೌರವಿಸಲು ₹5 ಲಕ್ಷ ಮೌಲ್ಯದ ಒಂದು ಸಾವಿರ ಏಲಕ್ಕಿ ಮಾಲೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಈ ಮಾಲೆಗಳು ತನ್ನ ಸೊಬಗು ಮತ್ತು ಪರಿಮಳದಿಂದ ಹಾವೇರಿಗೆ 'ಏಲಕ್ಕಿ ಕಂಪಿನ ನಗರ' ಎಂದು ಹೆಸರು ತಂದುಕೊಟ್ಟಿವೆ. ಬೆಂಗಳೂರಿನ ವಿಧಾನಸೌಧದಿಂದ ನವದೆಹಲಿಯ ರಾಷ್ಟ್ರಪತಿ ಭವನದವರೆಗೆ ಅನೇಕ ಗಣ್ಯರ ಕೊರಳನ್ನು ಅಲಂಕರಿಸಿವೆ. ಅಷ್ಟೇ ಏಕೆ ಅಮೆರಿಕ, ಇಂಗ್ಲೆಂಡ್, ಜಪಾನ್ ಮುಂತಾದ ವಿದೇಶಗಳಲ್ಲೂ ಕಂಪನ್ನು ಬೀರಿವೆ.

ಹಾವೇರಿಯ ಚಂದ್ರಪಟ್ಟಣ ರಸ್ತೆಯ ಉಸ್ಮಾನ್ ಸಾಹೇಬ್ ಪಟವೇಗಾರ್ ಕುಟುಂಬ ಎಂಟು ದಶಕಗಳಿಂದ ಏಲಕ್ಕಿ ಮಾಲೆಗಳನ್ನು ತಯಾರಿಸುತ್ತಾ ಬಂದಿದೆ. 1996ರಲ್ಲಿ ಈ ಕುಟುಂಬಕ್ಕೆ ರಾಜ್ಯ ಪ್ರಶಸ್ತಿಯ ಗೌರವವೂ ಸಂದಿದೆ. ಹೀಗಾಗಿ, ಈ ಕುಟುಂಬಕ್ಕೆ ನುಡಿಜಾತ್ರೆಗೆ ಸಾವಿರ ಏಲಕ್ಕಿ ಮಾಲೆಗಳನ್ನು ತಯಾರಿಸುವ ಹೊಣೆಯನ್ನು ಜಿಲ್ಲಾಡಳಿತ ನೀಡಿದೆ.

ಸಮ್ಮೇಳನಾಧ್ಯಕ್ಷರಿಗೆ ಬೃಹತ್ ಹಾರ: 'ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ 4 ಅಡಿ ಎತ್ತರದ 10 ಎಳೆಗಳುಳ್ಳ ಬೃಹತ್ ಏಲಕ್ಕಿ ಮಾಲೆಯನ್ನು ತಯಾರಿಸುತ್ತಿದ್ದೇವೆ. ಎರಡೂವರೆ ಅಡಿ ಎತ್ತರದ 5 ಎಳೆಯ 400 ಹಾರಗಳು ಮತ್ತು 2 ಅಡಿ ಎತ್ತರದ 600 ಹಾರಗಳನ್ನು ಸಿದ್ಧಪಡಿಸುತ್ತಿದ್ದೇವೆ. ಕೈಯಿಂದಲೇ ಮಾಲೆ ಕಟ್ಟಬೇಕಿರುವುದರಿಂದ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಸುಮಾರು 40 ಕಾರ್ಮಿಕರೊಂದಿಗೆ ಹಗಲು-ರಾತ್ರಿ ಬಿಡುವಿಲ್ಲದೆ ಮಾಲೆ ಕಟ್ಟುತ್ತಿದ್ದೇವೆ' ಎಂದು ವ್ಯಾಪಾರಿ ಹಜರತ್ ಸಾಹೇಬ್ ಪಟವೇಗಾರ್ ತಿಳಿಸಿದರು.

4ನೇ ಪುಟ ನೋಡಿ

ಹಾವೇರಿ ಅಸ್ಮಿತೆಯ ಪ್ರತೀಕವಾಗಿರುವ ಏಲಕ್ಕಿ ಮಾಲೆಗಳನ್ನು ನುಡಿಜಾತ್ರೆಗಾಗಿ ತಯಾರಿಸುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ
ಹಜರತ್ ಸಾಹೇಬ್ ಪಟವೇಗಾರ್
ಏಲಕ್ಕಿ ಮಾಲೆ ವ್ಯಾಪಾರಿ

ನೆಹರೂ ಕೊರಳು ಅಲಂಕರಿಸಿದ್ದ ಏಲಕ್ಕಿ ಮಾಲೆ

'ಒಂದು ಕಾಲದಲ್ಲಿ ಹಾವೇರಿ ಏಲಕ್ಕಿಯ ವ್ಯಾಪಾರ ಕೇಂದ್ರವಾಗಿತ್ತು. ಸ್ವಾತಂತ್ರ್ಯ ನಂತರ ರಾಜಕೀಯ ಧುರೀಣ ಹೊಸಮನಿ ಸಿದ್ದಪ್ಪ ಅವರು ಹಾವೇರಿಯ 'ಟ್ರೇಡ್ ಮಾರ್ಕ್' ಆಗಿದ್ದ ಏಲಕ್ಕಿಯನ್ನು ಬಳಸಿ ಮಾಲೆ ಮಾಡಲು ಪ್ರಯತ್ನಿಸುವಂತೆ ನನ್ನ ತಂದೆ ಹಜರತ್ ಸಾಹೇಬ್ ಅವರನ್ನು ಕೇಳಿಕೊಂಡರು. ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಗೆ ನನ್ನ ತಂದೆ ತಾವೇ ತಯಾರಿಸಿದ ಏಲಕ್ಕಿ ಮಾಲೆ ಹಾಕಿದ್ದರು. ಹೀಗೆ ಏಲಕ್ಕಿ ಮಾಲೆಯ ವ್ಯಾಪಾರ ಆರಂಭವಾಯಿತು' ಎಂದು ಉಸ್ಮಾನ್ ಸಾಹೇಬ್ ಪಟವೇಗಾರ್ ನೆನಪಿಸಿಕೊಂಡರು.

ಐದು ವರ್ಷಗಳಲ್ಲಿ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ

ಎಸ್‌ಸಿ ಶೇ 2.8, ಎಸ್‌ಟಿ ಶೇ 1.3

ನವದೆಹಲಿ (ಪಿಟಿಐ): ಕಳೆದ ಐದು ವರ್ಷಗಳಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ನಡೆದ ನೇಮಕಗಳಲ್ಲಿ ಇತರ ಹಿಂದುಳಿದ ವರ್ಗ (ಒಬಿಸಿ), ಪರಿಶಿಷ್ಟ ಪಂಗಡ (ಎಸ್‌ಟಿ), ಪರಿಶಿಷ್ಟ ಜಾತಿ (ಎಸ್‌ಸಿ), ಅಲ್ಪಸಂಖ್ಯಾತರ ಪ್ರಮಾಣವು ಬಹಳ ಕಡಿಮೆ ಇದೆ ಎಂದು ನ್ಯಾಯಾಂಗ ಇಲಾಖೆಯು ಸಂಸದೀಯ ಸಮಿತಿಯೊಂದಕ್ಕೆ ಮಾಹಿತಿ ನೀಡಿದೆ.

2018ರಿಂದ 2022ರ ಡಿಸೆಂಬರ್ 19ರವರೆಗೆ 537 ನ್ಯಾಯಮೂರ್ತಿಗಳನ್ನು ಹೈಕೋರ್ಟ್‌ಗಳಿಗೆ ನೇಮಕ ಮಾಡಲಾಗಿದೆ. ಅವರ ಪೈಕಿ ಶೇ 2.8ರಷ್ಟು ಎಸ್‌ಸಿ, ಶೇ 1.3ರಷ್ಟು ಎಸ್‌ಟಿ, ಶೇ 11ರಷ್ಟು ಒಬಿಸಿ ಮತ್ತು ಶೇ 2.6ರಷ್ಟು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಎಂದು ನ್ಯಾಯಾಂಗ ಇಲಾಖೆಯು ಹೇಳಿದೆ. ಈ ಅವಧಿಯಲ್ಲಿ ನೇಮಕವಾದ 20 ನ್ಯಾಯಮೂರ್ತಿಗಳ ಹಿನ್ನೆಲೆಯ ಬಗೆಗಿನ ಮಾಹಿತಿ ಲಭ್ಯವಿಲ್ಲ ಎಂದೂ ಇಲಾಖೆಯು ತಿಳಿಸಿದೆ.

ನ್ಯಾಯಮೂರ್ತಿಗಳ ನೇಮಕದ ಹೊಣೆಯನ್ನು ನ್ಯಾಯಾಂಗವೇ ವಹಿಸಿಕೊಂಡು ಮೂರು ದಶಕಗಳಾಗಿವೆ. ಹಾಗಿದ್ದರೂ ಎಲ್ಲರನ್ನೂ ಒಳಗೊಳ್ಳುವಂತೆ ಹಾಗೂ ಸಾಮಾಜಿಕ ವೈವಿಧ್ಯವು ಪ್ರತಿಬಿಂಬಿಸುವಂತೆ ನೇಮಕಾತಿ ನಡೆಸಲು ಸಾಧ್ಯವಾಗಿಲ್ಲ ಎಂದು ನ್ಯಾಯಾಂಗ ಇಲಾಖೆಯು ಹೇಳಿದೆ.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನೇಮಕಾತಿ ಪ್ರಸ್ತಾವಗಳನ್ನು ಸಿದ್ಧಪಡಿಸುವ ಹೊಣೆಗಾರಿಕೆಯು ಕೊಲಿಜಿಯಂನದ್ದಾಗಿದೆ. ಹಾಗಾಗಿ, ಶಿಫಾರಸಿನಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಹೆಸರುಗಳು ಇರುವಂತೆ ನೋಡಿಕೊಳ್ಳುವುದು ಕೊಲಿಜಿಯಂನ ಜವಾಬ್ದಾರಿಯಾಗಿದೆ ಎಂದು ನ್ಯಾಯಾಂಗ ಇಲಾಖೆಯು ಹೇಳಿದೆ.

ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಶಿಫಾರಸು ಮಾಡಿದವರನ್ನು ಮಾತ್ರ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳಾಗಿ ಸರ್ಕಾರ ನೇಮಿಸಬಹುದಾಗಿದೆ ಎಂದು ಇಲಾಖೆಯು ವಿವರಿಸಿದೆ. ಬಿಜೆಪಿಯ ಸಂಸದ ಸುಶೀಲ್ ಮೋದಿ ಅವರ ನೇತೃತ್ವದ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ, ಕಾನೂನು ಮತ್ತು ನ್ಯಾಯದ ಸಂಸದೀಯ ಸಮಿತಿಯ ಮುಂದೆ ನ್ಯಾಯಾಂಗ ಇಲಾಖೆಯು ವಿವರವಾದ ವರದಿಯನ್ನು ಮಂಡಿಸಿದೆ.

ಸರ್ಕಾರ–ಕೋರ್ಟ್ ಜಟಾಪಟಿ

ನ್ಯಾಯಮೂರ್ತಿ ನೇಮಕಕ್ಕೆ ಸಂಬಂಧಿಸಿ ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ನಡುವೆ ಜಟಾಪಟಿ ನಡೆಯುತ್ತಿದೆ.

ನ್ಯಾಯಮೂರ್ತಿಗಳ ನೇಮಕಕ್ಕಾಗಿ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ರಚಿಸಲು ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ತಂದು ಕಾನೂನು ರೂಪಿಸಿತ್ತು. ಆದರೆ, ಎನ್‌ಜೆಎಸಿ ಸಂವಿಧಾನಬಾಹಿರ ಎಂದು ಹೇಳಿದ್ದ ಸುಪ್ರೀಂ ಕೋರ್ಟ್, ಅದನ್ನು ರದ್ದುಪಡಿಸಿತ್ತು. ನ್ಯಾಯಾಂಗವೇ ನ್ಯಾಯಮೂರ್ತಿಗಳನ್ನು ನೇಮಿಸುವ ಪದ್ಧತಿಯು ಸರಿಯಲ್ಲ ಎಂದು ಕೇಂದ್ರದ ಕಾನೂನು ಸಚಿವ ಕಿರಣ್ ರಿಜಿಜು ಹಲವು ಬಾರಿ ಹೇಳಿದ್ದಾರೆ.

ಎನ್‌ಜೆಎಸಿ ಕಾಯ್ದೆಯನ್ನು ರದ್ದುಪಡಿಸುವ ಮೂಲಕ ಸಂಸತ್ತಿನ ಸಾರ್ವಭೌಮತ್ವಕ್ಕೆ ಸುಪ್ರೀಂ ಕೋರ್ಟ್ ಧಕ್ಕೆ ತಂದಿದೆ. ಜನಾದೇಶವನ್ನು ನಿರ್ಲಕ್ಷಿಸಿದೆ ಎಂದು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಾಜ್ಯಸಭೆಯಲ್ಲಿ ಇತ್ತೀಚೆಗೆ ಹೇಳಿದ್ದರು. ಸುಪ್ರೀಂ ಕೋರ್ಟ್, ಈ ಮಾತಿಗೆ ಗಂಭೀರವಾದ ಆಕ್ಷೇಪ ವ್ಯಕ್ತಪಡಿಸಿತ್ತು.

ವಾಣಿಜ್ಯ ಬಳಕೆ ಎಲ್‌ಪಿಜಿ ₹ 25.50 ಏರಿಕೆ



ಬೆಂಗಳೂರು: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಭಾನುವಾರ ಹೆಚ್ಚಿಸಿವೆ. ಬೆಲೆ ಹೆಚ್ಚಳವು ಬೆಂಗಳೂರಿನಲ್ಲಿ ಪ್ರತಿ ಸಿಲಿಂಡರ್‌ಗೆ ₹ 25.50ರಷ್ಟು ಇದೆ.

'ಸಿಲಿಂಡರ್ ಬೆಲೆಯು ಬೆಂಗಳೂರಿನಲ್ಲಿ ₹ 1,814 ಆಗಿತ್ತು. ಇನ್ನು ಮುಂದೆ ಅದು ₹ 1839.50 ಆಗಲಿದೆ' ಎಂದು ಹೋಟೆಲ್ ಉದ್ಯಮದ ಮೂಲಗಳು ತಿಳಿಸಿವೆ.

ಕ್ರೀಡಾ ಖಾತೆ ತೊರೆದ ಸಂದೀಪ್ ಸಿಂಗ್

ಚಂಡೀಗಢ (ಪಿಟಿಐ): ಜೂನಿಯರ್ ಮಹಿಳಾ ಅಥ್ಲೆಟಿಕ್ಸ್ ತಂಡದ ಕೋಚ್‌ಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ ಅವರು ನೈತಿಕ ಹೊಣೆ ಹೊತ್ತು ಭಾನುವಾರ ತಮ್ಮ ಖಾತೆ ತೊರೆದಿದ್ದಾರೆ. ಆದರೆ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿಲ್ಲ. ಮುದ್ರಣ ಮತ್ತು ಲೇಖನ ಸಾಮಾಗ್ರಿ ಸಚಿವರಾಗಿ ಅವರು ಮುಂದುವರಿದಿದ್ದಾರೆ. 9

ಒಳ ಪುಟಗಳು



ಕಳಸಾ ತಿರುವು: ಅರಣ್ಯ ಇಲಾಖೆ ಒಪ್ಪಿಗೆ

33 ಹೆಕ್ಟೇರ್ ಮೀಸಲು ಅರಣ್ಯ ಬಳಕೆ • ಕೇಂದ್ರ ಪರಿಸರ ಸಚಿವಾಲಯಕ್ಕೆ ಪ್ರಸ್ತಾವ

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ನವದೆಹಲಿ: ಮಹದಾಯಿ ಯೋಜನೆಯ ಕಳಸಾ ನಾಲಾ ತಿರುವು ಯೋಜನೆಗೆ 33.05 ಹೆಕ್ಟೇರ್ ಮೀಸಲು ಅರಣ್ಯವನ್ನು ಬಳಸಿಕೊಳ್ಳಲು ಕರ್ನಾಟಕ ಅರಣ್ಯ ಇಲಾಖೆ ಒಪ್ಪಿಗೆ ನೀಡಿದೆ.

ಮಹದಾಯಿ ನದಿ ನೀರು ವಿವಾದ ನ್ಯಾಯಾಧೀಕರಣವು 2018ರ ಆಗಸ್ಟ್ 14ರಂದು ಕಳಸಾ- ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ಮೀಸಲಿಡಲಾಗಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡುವಂತೆ ಕರ್ನಾಟಕ ನೀರಾವರಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಅರಣ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದರು.

ಬೆಳಗಾವಿ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಅವರು ಅಕ್ಟೋಬರ್ 19, ಡಿಸೆಂಬರ್ 15 ಹಾಗೂ 20ರಂದು ಸ್ಥಳ ಪರಿಶೀಲನೆ ನಡೆಸಿ ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಅವರಿಗೆ ಹಲವು ಶಿಫಾರಸುಗಳು ಹಾಗೂ ಷರತ್ತುಗಳನ್ನು ಒಳಗೊಂಡ ವರದಿ ಸಲ್ಲಿಸಿದ್ದರು. ಬಳಿಕ ಸಿಸಿಎಫ್ ಅವರು ಅರಣ್ಯ ಪಡೆಯ ಮುಖ್ಯಸ್ಥ ರಾಜ್ ಕಿಶೋರ್ ಸಿಂಗ್ ಅವರಿಗೆ ವರದಿ ನೀಡಿದ್ದರು. ಈ ವರದಿಯ ಆಧಾರದಲ್ಲಿ ರಾಜ್ ಕಿಶೋರ್ ಸಿಂಗ್ ಅವರು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ಶುಕ್ರವಾರ ವರದಿ ಸಲ್ಲಿಸಿದ್ದಾರೆ.

4ನೇ ಪುಟ ನೋಡಿ

ಕಳಸಾ ಯೋಜನೆ– ಬೇಕಿರುವ ಅರಣ್ಯ ಭೂಮಿ

ಗ್ರಾಮ	ಸರ್ವೆ ಸಂಖ್ಯೆ	ಅರಣ್ಯ (ಹೆಕ್ಟೇರ್)
ಚೋರ್ಲಾ	34 ಎ, 45	6.42
ಕಲಮನಿ	101, 104, 15, 20	3.38
ಕಾಲನಾಯಕನಹಟ್ಟಿ	124, 138, 136, 132, 128, 129,130	2.27
ಕಣಕುಂಬಿ	1,42,43, 49,40, 171, 169	16.71
ಒಳಮನಿ	173	0.46
ಬೆಥನೆ	21, 38	3.43
ಪರ್ವಡ	63	0.34

ಅರಣ್ಯೀಕರಣಕ್ಕೆ 60 ಹೆಕ್ಟೇರ್

ಯಾವುದೇ ಯೋಜನೆಗೆ ಅರಣ್ಯ ಭೂಮಿ ಬಳಸುವ ವೇಳೆ ಅರಣ್ಯೇತರ ಜಾಗದಲ್ಲಿ ಕಡ್ಡಾಯ ಅರಣ್ಯೀಕರಣ ಯೋಜನೆ ಕೈಗೆತ್ತಿಕೊಳ್ಳಬೇಕು ಎಂದು ಕೇಂದ್ರ ಪರಿಸರ ಸಚಿವಾಲಯ 2019ರಲ್ಲಿ ನಿರ್ದೇಶನ ನೀಡಿದೆ. ಕರ್ನಾಟಕ ಸರ್ಕಾರವು ಕಡ್ಡಾಯ ಅರಣ್ಯೀಕರಣಕ್ಕಾಗಿ ಅಥಣಿ ತಾಲ್ಲೂಕಿನ ಹಲ್‌ಹಳ್ಳಿ ಗ್ರಾಮದ 60 ಹೆಕ್ಟೇರ್ ಜಾಗವನ್ನು ಅರಣ್ಯೀಕರಣಕ್ಕೆ ಬಳಸುವುದಾಗಿ ತಿಳಿಸಿದೆ. ಪ್ರತಿ ಹೆಕ್ಟೇರ್‌ನಲ್ಲಿ 1 ಸಾವಿರ ಗಿಡಗಳನ್ನು ನೆಡುವುದಾಗಿ ಹೇಳಿದೆ. ಅರಣ್ಯೀಕರಣದ ವೆಚ್ಚವನ್ನು ಕರ್ನಾಟಕ ನೀರಾವರಿ ನಿಗಮ ಭರಿಸಲಿದೆ.

ಮೀಸಲಾತಿ: ಅಂತಿಮ ವರದಿ ಬಳಿಕ ಸ್ಪಷ್ಟತೆ– ಸಿ.ಎಂ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಹಿಂದುಳಿದ ವರ್ಗಗಳ ಆಯೋಗದ ಮಧ್ಯಂತರ ವರದಿ ಅನ್ವಯ ಮೀಸಲಾತಿ ಘೋಷಿಸಲಾಗಿದೆ. ಅಂತಿಮ ವರದಿ ಬಂದಾಗ ಎಲ್ಲವೂ ಸ್ಪಷ್ಟವಾಗಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ನಗರದ ತಮ್ಮ ನಿವಾಸದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕೆಲವು ಹಿಂದುಳಿದ ವರ್ಗಗಳಿಗೆ ಅನೇಕ ವರ್ಷಗಳಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹಿನ್ನಡೆಯಾಗಿತ್ತು. ಅವರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಮೀಸಲಾತಿ ಘೋಷಣೆ ಮಾಡಿದ್ದೇವೆ. ಈಗಿರುವ ಹಿಂದುಳಿದ ವರ್ಗಗಳ ಮೀಸಲಾತಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇವೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಇದನ್ನು ಮಾಡಲು ಸಾಧ್ಯವಾಗಿರಲಿಲ್ಲ. ನಾವು ಮಾಡಿದ್ದಕ್ಕೆ ಅವರಿಗೆ ಸಮಸ್ಯೆಯಾಗಿದೆ' ಎಂದರು.

ಸಾಮಾಜಿಕ ಸುಸ್ಥಿರತೆ ಕದಡಲಿದೆ: ವೀರಪ್ಪ ಮೊಯಿಲಿ ಕಳವಳ

ಮಂಗಳೂರು: 'ರಾಜ್ಯದಲ್ಲಿ ಒಕ್ಕಲಿಗ ಹಾಗೂ ಲಿಂಗಾಯತರಿಗೆ ಮೀಸಲಾತಿ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರ ರಾಜಕೀಯ ಸಮಯಸಾಧಕತನವನ್ನು ಪ್ರದರ್ಶಿಸಿದೆ. ಈ ನಿರ್ಧಾರ ಸಾಮಾಜಿಕ ಸುಸ್ಥಿರತೆಯನ್ನು ಕದಡಲಿದೆ' ಎಂದು ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಕಳವಳ ವ್ಯಕ್ತಪಡಿಸಿದರು.


ಇಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಮೀಸಲಾತಿ ಪರಿಷ್ಕರಣೆ ವಿಚಾರದಲ್ಲಿ ಯಾವರೀತಿ ನಡೆದುಕೊಳ್ಳಬೇಕು ಎಂಬ ಬಗ್ಗೆ ನಾನು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರ ಸ್ಪಷ್ಟ ನೀತಿಯನ್ನು ರೂಪಿಸಿತ್ತು. ಅದೇ ಮಾದರಿಯ ವ್ಯವಸ್ಥೆ ರೂಪಿಸುವಂತೆ ಸುಪ್ರೀಂ ಕೋರ್ಟ್ ಕೂಡಾ ಆದೇಶ ಮಾಡಿದೆ. ಮೀಸಲಾತಿಯ ಕುರಿತು ಸಚಿವ ಸಂಪುಟ ನಿರ್ಧಾರ ಕೈಗೊಳ್ಳಲು ಅವಕಾಶವಿಲ್ಲ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ಆಧರಿಸಿ ಕೇಂದ್ರದ ಅಥವಾ ರಾಜ್ಯದ ಶಾಶ್ವತ ಆಯೋಗಗಳೇ ಈ ಬಗ್ಗೆ ನಿರ್ಧಾರ ತಳೆಯಬೇಕು' ಎಂದರು.

'ರಾಜ್ಯ ಸರ್ಕಾರವು ಮೀಸಲಾತಿಯ ಬಗ್ಗೆ ವಿವೇಚನಾರಹಿತ ನಿರ್ಧಾರ ತಳೆದಿದೆ. ಇದೊಂದು ಪಾಪದ ಕೆಲಸ. ಒಂದು ಪ್ರವರ್ಗವನ್ನು ಕಿತ್ತು ಹಾಕುವುದು, ಇನ್ನೊಂದನ್ನು ಸೇರ್ಪಡೆಗೊಳಿಸುವುದು ಸರಿಯಲ್ಲ. ಇದು ಸಮಾಜವನ್ನು ಕವಲುದಾರಿಯತ್ತ ಕೊಂಡೊಯ್ಯಲಿದೆ' ಎಂದು ಎಚ್ಚರಿಸಿದರು.

ವಿಲೀನ ಅಲ್ಲ, ಒಟ್ಟಿಗೆ ಕೆಲಸ ಮಾಡಿದರೆ ಲಾಭ ಎಂದು ಶಾ ಹೇಳಿದ್ದಾರೆ: ಸಮರ್ಥನೆ

'ನಂದಿನಿ' ಪ್ರತ್ಯೇಕ ಅಸ್ತಿತ್ವ ಕಾಯ್ದುಕೊಳ್ಳಲಿದೆ: ಸಿ.ಎಂ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕರ್ನಾಟಕ ಹಾಲು ಮಹಾಮಂಡಳವನ್ನು (ಕೆಎಂಎಫ್–ನಂದಿನಿ) ಗುಜರಾತ್‌ನ ಅಮುಲ್ ಜೊತೆ ವಿಲೀನ ಮಾಡುತ್ತಾರೆ ಎನ್ನುವುದು ತಪ್ಪು ಕಲ್ಪನೆ. ಊಹೆ ಮಾಡಿ ಯಾರೂ ಟೀಕೆ ಮಾಡಬಾರದು. ನಂದಿನಿ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಸದಾ ಕಾಯ್ದುಕೊಳ್ಳಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಸ್ಪಷ್ಟಪಡಿಸಿದರು.

ಆರ್.ಟಿ.ನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ವಿಷಯದಲ್ಲಿ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಮಾತನಾಡಿರುವುದು ಸ್ಪಷ್ಟವಾಗಿದೆ. ನಂದಿನಿ ಅಸ್ತಿತ್ವ ನೂರಾರು ವರ್ಷ ಶಾಶ್ವತವಾಗಿ ಇರಲಿದೆ' ಎಂದರು.

'ನಂದಿನಿ ಮತ್ತು ಅಮುಲ್ ತಾಂತ್ರಿಕವಾಗಿ ಮತ್ತು ಮಾರುಕಟ್ಟೆಯಲ್ಲಿ ಪರಸ್ಪರ ಸಹಕಾರ ಮಾಡಬೇಕು. ಇವೆರಡೂ ದೊಡ್ಡ ಸಂಸ್ಥೆಗಳು. ಪೂರಕವಾಗಿ ಕೆಲಸ ಮಾಡಬೇಕು ಎಂದು ಶಾ ಹೇಳಿದ್ದಾರೆ. ಅದರರ್ಥ ವಿಲೀನಗೊಳಿಸುವುದು ಎಂದಲ್ಲ' ಎಂದು ಪ್ರತಿಕ್ರಿಯಿಸಿದರು.

ಒಟ್ಟಾಗಿ ಕೆಲಸ ಮಾಡಿದರೆ ಲಾಭ: 'ನಂದಿನಿ ಮತ್ತು ಅಮುಲ್ ಕೆಲ ವಲಯಗಳಲ್ಲಿ ಒಟ್ಟಿಗೆ ಕೆಲಸ ಮಾಡಿದರೆ ಲಾಭವಿದೆ. ಇವುಗಳು ತಾಂತ್ರಿಕತೆಯನ್ನು ವಿನಿಮಯ ಮಾಡಿಕೊಳ್ಳಬಹುದು. ಆಡಳಿತಾತ್ಮಕ ಕ್ರಮಗಳನ್ನು ವಿನಿಮಯ ಮಾಡಿಕೊಳ್ಳಿ ಎಂದು ಶಾ ಹೇಳಿದ್ದಾರೆ. ಅದಕ್ಕೆ ತಪ್ಪು ಅರ್ಥ ಕಲ್ಪಿಸುವ ಅಥವಾ ಈ ವಿಷಯದಲ್ಲಿ ರಾಜಕಾರಣ ಮಾಡುವ ಅವಶ್ಯಕತೆ ಇಲ್ಲ' ಎಂದರು.

ಕೆಎಂಎಫ್ ಮುಟ್ಟಿದರೆ ಬಿಜೆಪಿ ಭಸ್ಮ: ಎಚ್‌ಡಿಕೆ

ಬೆಂಗಳೂರು: 'ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಸಮಸ್ತ ಕನ್ನಡಿಗರ ಆಸ್ತಿ ಮತ್ತು ಅಸ್ಮಿತೆ. ನಂದಿನಿ ಬ್ರ್ಯಾಂಡ್ ಕನ್ನಡಿಗರ ಜೀವನಾಡಿ. ಅದನ್ನು ಮುಟ್ಟಿದರೆ ಬಿಜೆಪಿ ಭಸ್ಮವಾಗಲಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಕೆಎಂಎಫ್ ಮತ್ತು ಗುಜರಾತ್‌ನ ಅಮುಲ್ ಸಂಸ್ಥೆಗಳನ್ನು ಒಂದುಗೂಡಿಸಬೇಕು ಎಂಬ ಕೇಂದ್ರ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆಗೆ ಟ್ವಿಟರ್‌ನಲ್ಲಿ ಭಾನುವಾರ ಪ್ರತಿಕ್ರಿಯಿಸಿರುವ ಅವರು, 'ಅಮುಲ್ ಜತೆ ಕೆಎಂಎಫ್ ವಿಲೀನ ಸಾಧ್ಯವಿಲ್ಲ. ನಮ್ಮ ರೈತರ ಅನ್ನ ಕಸಿಯುವ ಪ್ರಯತ್ನಗಳನ್ನು ಸಹಿಸಿಕೊಳ್ಳುವ ಪ್ರಶ್ನೆಯೇ ಇಲ್ಲ' ಎಂದಿದ್ದಾರೆ.

'ನೆಲ, ಜಲ ಮತ್ತು ನುಡಿಯ ವಿಚಾರದಲ್ಲಿ ಕನ್ನಡ ಹಾಗೂ ಕರ್ನಾಟಕದ ಮೇಲೆ ನಿರಂತರ ಪ್ರಹಾರ ನಡೆಸುತ್ತಿರುವ ಬಿಜೆಪಿಯು ಕನ್ನಡಿಗರ ವಿರುದ್ಧದ ತನ್ನ ರಾಕ್ಷಸ ನೀತಿಗಳನ್ನು ಮುಂದುವರಿಸಿದೆ. ಈಗ ಕರ್ನಾಟಕದ ಹಾಲಿನಲ್ಲೂ ಗುಜರಾತಿನ ಹುಳಿ ಹಿಂಡಲು ಅಮಿತ್ ಶಾ ಹೊರಟಿದ್ದಾರೆ' ಎಂದು ಟೀಕಿಸಿದ್ದಾರೆ.

'ಬ್ಯಾಂಕಿಂಗ್ ಕ್ಷೇತ್ರದಲ್ಲಿ ದೇಶಕ್ಕೇ ಮಾದರಿಯಾಗಿದ್ದ ಕರ್ನಾಟಕವನ್ನು ಉತ್ತರ ಭಾರತದ ಬ್ಯಾಂಕ್‌ಗಳ ಅಡಿಯಾಳು ಮಾಡಿ ಕನ್ನಡಿಗರ ಅನ್ನ ಕಸಿದುಕೊಳ್ಳಲಾಯಿತು. ಈಗ ನಂದಿನಿ ಬ್ರ್ಯಾಂಡ್ ಅನ್ನು ಕಸಿದುಕೊಂಡು ಹೋಗುವ ರಹಸ್ಯ ಕಾರ್ಯಸೂಚಿ ರೂಪಿಸಿದಂತಿದೆ' ಎಂದೂ ಹೇಳಿದ್ದಾರೆ.

ಸಿದ್ಧೇಶ್ವರ ಶ್ರೀ ಆರೋಗ್ಯದಲ್ಲಿ ಏರುಪೇರು: ಭಕ್ತರಲ್ಲಿ ಆತಂಕ



ವಿಜಯಪುರ: ಅನಾರೋಗ್ಯದಿಂದ ನಿತ್ರಾಣವಾಗಿರುವ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಶ್ರೀಗಳ ಆರೋಗ್ಯದಲ್ಲಿ ಮೂರ್ನಾಲ್ಕು ದಿನಗಳಿಂದ ತೀವ್ರ ಏರುಪೇರಾಗುತ್ತಿರುವುದರಿಂದ ಆತಂಕಕ್ಕೆ ಒಳಗಾದ ಭಕ್ತರು ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿಆಶ್ರಮಕ್ಕೆಧಾವಿಸಿದ್ದರು.

ಮುಖ್ಯಮಂತ್ರಿ, ಸಚಿವರು, ಶಾಸಕರು, ಮಠಾಧೀಶರು, ರಾಜಕಾರಣಿಗಳು, ಅಧಿಕಾರಿಗಳು ಆಶ್ರಮಕ್ಕೆ ಭೇಟಿ ನೀಡುತ್ತಿರುವುದರಿಂದ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಶ್ರೀಗಳ ಬಗ್ಗೆ ವದಂತಿಗಳು ಹರಡುತ್ತಿರುವುದರಿಂದ ಭಾನುವಾರ ದಿನವಿಡೀ ಆಶ್ರಮದಲ್ಲಿ ಆತಂಕದ ವಾತಾವರಣ ಮನೆ ಮಾಡಿತ್ತು. ಸಂಜೆ ವೇಳೆಗೆ ಶ್ರೀಗಳ ಆರೋಗ್ಯದಲ್ಲಿ ಚೇತರಿಕೆಯಾದ ಬಳಿಕ ಎಲ್ಲರೂ ನಿರಾಳರಾದರು.

ಶ್ರೀಗಳಿಗೆ ಆಶ್ರಮದಲ್ಲೇ ಚಿಕಿತ್ಸೆ ನೀಡುತ್ತಿರುವ ಬಿ.ಎಲ್.ಡಿ.ಇ ಆಸ್ಪತ್ರೆಯ ಡಾ.ಎಸ್.ಬಿ. ಪಾಟೀಲ್, ಡಾ. ಅರವಿಂದ್ ಪಾಟೀಲ್, ಡಾ.ಮಲ್ಲಣ್ಣ ಮೂಲಿಮನಿ ನೇತೃತ್ವದ ವೈದ್ಯರ ತಂಡ ಶ್ರೀಗಳ ಆರೋಗ್ಯ ಸ್ಥಿತಿ ಕುರಿತು ಮಾಹಿತಿ ನೀಡಿ, 'ಸ್ವಾಮೀಜಿ ಚಿಕಿತ್ಸೆಗೆ ಸ್ಪಂದಿಸಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

ಎಲ್‌ಇಡಿ ಪರದೆಯಲ್ಲಿ ದರ್ಶನ:

ಆಶ್ರಮದ ಆವರಣದಲ್ಲಿ ಬೃಹತ್ ಎಲ್‌ಇಡಿ ಪರದೆಯನ್ನು ಅಳವಡಿಸಿ ಭಕ್ತರಿಗೆ ಶ್ರೀಗಳ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅಲ್ಲದೇ, ಆಶ್ರಮದ ಯುಟ್ಯೂಬ್ ಚಾನಲ್‌ನಲ್ಲೂ ನೇರ ಪ್ರಸಾರವನ್ನು ಮಾಡಲಾಯಿತು. ಶ್ರೀಗಳನ್ನು ಕಣ್ತುಂಬಿಕೊಂಡ ಭಕ್ತರು ನಿರಾಳರಾದರು. ಆಶ್ರಮಕ್ಕೆ ಶ್ರೀಗಳ ದರ್ಶನಕ್ಕೆ ಬಂದಿದ್ದ ಭಕ್ತರಿಗೆ ಅನ್ನ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.


4ನೇ ಪುಟ ನೋಡಿ

ಬಂದೂಕಿನಿಂದ ಗುಂಡು ಹಾರಿದ ಪ್ರಕರಣ: ಇಬ್ಬರ ಸಾವು

ಶಿವಮೊಗ್ಗ: ಡಬಲ್ ಬ್ಯಾರಲ್ ಗನ್ ಮೂಲಕ ಗುಂಡು ಹಾರಿಸಿ ಹೊಸ ವರ್ಷವನ್ನು ಸ್ವಾಗತಿಸುವ ಧಾವಂತಕ್ಕೆ ನಗರದಲ್ಲಿ ಎರಡು ಜೀವಗಳು ಬಲಿಯಾಗಿವೆ.



ಮಂಜುನಾಥ



ವಿನಯ್

ಇಲ್ಲಿನ ವಿದ್ಯಾನಗರದ ನಿವಾಸಿ ಮಂಜುನಾಥ ಓಲೇಕಾರ, ತಮ್ಮ ಮನೆಯ ಮಹಡಿಯ ಮೇಲೆ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಶನಿವಾರ ರಾತ್ರಿ ಗನ್‌ಗೆ ಗುಂಡು ತುಂಬುವಾಗ ಆಕಸ್ಮಿಕವಾಗಿ ಸಿಡಿದ ಅದು ಎಚ್.ಯು. ವಿನಯ್ (34) ಅವರಿಗೆ ತಗುಲಿ ತೀವ್ರವಾಗಿ ಗಾಯಗೊಂಡರು. ಅವರನ್ನು ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಘಟನೆಯಿಂದ ತೀವ್ರವಾಗಿ ಘಾಸಿಗೊಳಗಾದ ಮಂಜುನಾಥ ಓಲೇಕಾರ (67) ನಂತರ ಹೃದಯಾಘಾತದಿಂದ ಮೃತಪಟ್ಟರು. ಆಸ್ಪತ್ರೆಗೆ ದಾಖಲಾಗಿದ್ದ ಗಾಯಾಳು ವಿನಯ್ ಭಾನುವಾರ ಬೆಳಿಗ್ಗೆ ಸಾವನ್ನಪ್ಪಿದರು.

ಗುಂಡೇಟಿಗೆ ಬಲಿಯಾದ ವಿನಯ್ ಹೊಸನಗರದ ನಿವಾಸಿಯಾಗಿದ್ದು, ದಾವಣಗೆರೆ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿದ್ದರು. ಮಂಜುನಾಥ ಓಲೇಕಾರ ಅವರಿಗೆ ತೋಟ ಇದ್ದು, ಗನ್ ಪರವಾನಗಿ ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಬಿಬಿಎಂಪಿ ವ್ಯಾಪ್ತಿಯಲ್ಲಿ ಹಳೆಯ ಕಟ್ಟಡಗಳ ನವೀಕರಣಕ್ಕೂ ದೊರೆಯದ ಸಮ್ಮತಿ

ರಕ್ಷಣಾ ಪ್ರದೇಶಗಳ ಸುತ್ತ ಕಟ್ಟಡ ನಕ್ಷೆಗಿಲ್ಲ ಒಪ್ಪಿಗೆ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿರುವ ರಕ್ಷಣಾ ಪ್ರದೇಶಗಳ ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ವಸತಿ ಸೇರಿದಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ, ಪುನರ್ ನಿರ್ಮಾಣಕ್ಕೆ ರಕ್ಷಣಾ ಇಲಾಖೆಯ ನಿರಾಕ್ಷೇಪಣಾ ಪತ್ರ ಕಡ್ಡಾಯಗೊಳಿಸಿರುವುದು ನಾಗರಿಕರನ್ನು ಸಂಕಷ್ಟಕ್ಕೆ ದೂಡಿದೆ.

ಹೆಬ್ಬಾಳ, ಆರ್.ಟಿ.ನಗರ, ಅಗರ, ಹಲಸೂರು, ಬಾಣಸವಾಡಿ, ದೊಮ್ಮಲೂರು, ಯಲಹಂಕ ವಾಯುನೆಲೆ, ಜಾಲಹಳ್ಳಿ, ಯಲಹಂಕಗಳಲ್ಲಿ ರಕ್ಷಣಾ ಇಲಾಖೆಗೆ ಸೇರಿದ ಪ್ರದೇಶಗಳಿವೆ. ಈ ಪ್ರದೇಶಗಳ ಅಂಚಿನಿಂದ ನಿರ್ಬಂಧಿತ ಪ್ರದೇಶದಲ್ಲಿ ಹೊಸ ನಿರ್ಮಾಣದ ನಕ್ಷೆಗೆ ಬಿಬಿಎಂಪಿ ಅನುಮತಿ ನೀಡುತ್ತಿಲ್ಲ.

ಯಲಹಂಕ, ಜಾಲಹಳ್ಳಿ ಸೇರಿದಂತೆ ಹಲವು ಪ್ರದೇಶಗಳು ಬಿಬಿಎಂಪಿಗೆ ಸೇರುವ ಮುನ್ನವೇ ಸಾಕಷ್ಟು ಕಟ್ಟಡಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಅನುಮತಿ ಪಡೆದು ನಿರ್ಮಾಣವಾಗಿವೆ. ಬಿಬಿಎಂಪಿ ವ್ಯಾಪ್ತಿಗೆ ಸೇರಿದ ಮೇಲೆಯೂ ವಸತಿ, ವಸತಿ ಸಂಕೀರ್ಣ ಸೇರಿದಂತೆ ವಾಣಿಜ್ಯ ಕಟ್ಟಡಗಳಿಗೆ ನಕ್ಷೆ ನೀಡಲಾಗಿದೆ. ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ನೀಡಲಾಗಿದೆ. ಆದರೆ, ಅದೇ ಪ್ರದೇಶದಲ್ಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ನಕ್ಷೆಗೆ ಸಮ್ಮತಿ ನೀಡುತ್ತಿಲ್ಲ. ಅಕ್ಕಪಕ್ಕದಲ್ಲಿ ಕಟ್ಟಡವಿದ್ದರೂ ನಿವೇಶನದಾರರು ನಿರ್ಮಾಣ ಮಾಡದಂತಾಗಿದೆ.

'ರಕ್ಷಣಾ ಪ್ರದೇಶಗಳ ಬಫರ್ ಝೋನ್‌ನಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಮೊದಲು ರಕ್ಷಣಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು' ಎಂದು ಬಿಡಿಎ, ಬಿಬಿಎಂಪಿ, ಬಿಎಂಆರ್‌ಡಿಎ, ಜಿಲ್ಲಾ ಪಂಚಾಯಿತಿ, ಬಿಐಎಪಿಎ, ಬಿಎಂಐಸಿಎಪಿಎ, ನಗರ ಜಿಲ್ಲೆಯ ತಹಶೀಲ್ದಾರ್,-ಚಿಕ್ಕಬಾಣಾವರ, ಹುಣಸೆಮಾರನಹಳ್ಳಿ ಪುರಸಭೆ, ತಾಲ್ಲೂಕು ಪಂಚಾಯಿತಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

'ಬೆಂಗಳೂರು ಮಹಾನಗರ ಪಾಲಿಕೆಯ ಕಟ್ಟಡ ಉಪವಿಧಿಗಳು- 2003 ಹಾಗೂ ಪರಿಷ್ಕೃತ ಮಾಸ್ಟರ್ ಪ್ಲಾನ್ -2015ರ ವಲಯ ನಿಯಮಾವಳಿಯಲ್ಲಿ ಯಾವುದೇ ರೀತಿಯ ತಿದ್ದುಪಡಿಗಳನ್ನು ಮಾಡಿಲ್ಲ. ಹೀಗಾಗಿ, ಜಿಲ್ಲಾಧಿಕಾರಿಯವರ ಸೂಚನೆಯನ್ನು ಪಾಲಿಸಲು ನಿಯಮಗಳೇ ಇಲ್ಲ. ಅದರ ಬಗ್ಗೆ ಸ್ಪಷ್ಟ ಹಾಗೂ ಕೈಗೊಳ್ಳಬೇಕಾದ ಮಾರ್ಗಸೂಚಿಗಳ ವಿವರ ನೀಡಲು ಪತ್ರ ಬರೆಯಲಾಗಿದೆ. ಈ ವರೆಗೆ ಯಾವುದೇ ಮಾಹಿತಿ ಬಂದಿಲ್ಲ' ಎಂದು ಬಿಬಿಎಂಪಿ ನಗರ ಯೋಜನೆ ಅಧಿಕಾರಿಗಳು ತಿಳಿಸಿದರು.

'ರಕ್ಷಣಾ ಇಲಾಖೆಯಿಂದ ಅನುಮತಿ ಅಥವಾ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಬೇಕೆಂದು ಬಿಬಿಎಂಪಿಯ ನಗರಯೋಜನೆ ಅಧಿಕಾರಿಗಳು ಹಾಗೂ ವಲಯ ಜಂಟಿ ಆಯುಕ್ತರು ಹೇಳುತ್ತಿದ್ದಾರೆ. ಆದರೆ, ಎಲ್ಲಿ ಪಡೆಯಬೇಕು, ಯಾವ ಕಚೇರಿ, ಯಾರನ್ನು ಕೇಳಬೇಕೆಂಬ ವಿವರ ಯಾರಲ್ಲಿಯೂ ಇಲ್ಲ. ರಕ್ಷ ಇಲಾಖೆಯ ಕೇಂದ್ರಗಳಿರುವ ಕಡೆ ಕೇಳಿದರೆ ಭದ್ರತಾ ಸಿಬ್ಬಂದಿ ಒಳಗೆ ಬಿಡುವುದಿಲ್ಲ' ಎಂದು ನಾಗರಿಕರಾದ ರಮೇಶ್, ರಾಮಕೃಷ್ಣ, ವೇಣುಗೋಪಾಲ್, ಭರತ್ ಅಳಲು ತೋಡಿಕೊಂಡರು.

ಎಲ್ಲೆಲ್ಲಿ ನಿರ್ಬಂಧ?: ರಕ್ಷಣಾ ಇಲಾಖೆಯ ಕೇಂದ್ರದ ಕಾಂಪೌಂಡ್‌ನಿಂದ 10 ಮೀಟರ್ ವರೆಗಿನ ಪ್ರದೇಶದಲ್ಲಿ ಯಾವುದೇ ನಿರ್ಮಾಣ ಇರುವಂತಿಲ್ಲ. ವಾಯುನೆಲೆಯಂತಹ ಕೇಂದ್ರಗಳ ಕಾಂಪೌಂಡ್‌ನಿಂದ ಈ ನಿರ್ಬಂಧ 100 ಮೀಟರ್‌ವರೆಗಿದೆ.

'ನಿಯಮ ಪಾಲಿಸಿದರೆ ಸಂಕಷ್ಟ...'

'ಹತ್ತಾರು ವರ್ಷಗಳಿಂದ ನಾವು ಇಲ್ಲಿ ಮನೆ ಕಟ್ಟಿಕೊಂಡಿದ್ದೇವೆ. ನಕ್ಷೆ ಅನುಮೋದನೆಯನ್ನೂ ಪಡೆಯಲಾಗಿದೆ. ಆದರೆ, ಇದೀಗ ಮರು ನಿರ್ಮಾಣದ ಸಂಬಂಧ ನಕ್ಷೆ ಅನುಮೋದನೆಗೆ ಸಲ್ಲಿಸಿದರೆ ಬಿಬಿಎಂಪಿ ಸಮ್ಮತಿ ನೀಡುತ್ತಿಲ್ಲ. ರಕ್ಷಣಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಬೇಕೆನ್ನುತ್ತಾರೆ. ನಮ್ಮ ಮನೆಯ ಸುತ್ತಮುತ್ತಲೂ ನಾಲ್ಕಾರು ಅಂತಸ್ತಿನ ಕಟ್ಟಡಗಳಿವೆ. ಅವರಿಗೆ ಯಾವುದೇ ನಿರ್ಬಂಧ ಇಲ್ಲ. ಕಟ್ಟಡ ನಿರ್ಮಾಣಕ್ಕೆ ಗುತ್ತಿಗೆದಾರರು, ಸಾಮಗ್ರಿಗಳಿಗೆಲ್ಲ ಮುಂಗಡ ನೀಡಲಾಗಿದೆ. ಸಾಕಷ್ಟು ಸಂಕಷ್ಟದಲ್ಲಿದ್ದೇವೆ. ಶೀಘ್ರ ಪರಿಹಾರ ನೀಡಲಿ' ಎಂದು ಯಲಹಂಕದ ಪ್ರದೀಪ್ ಮನವಿ ಮಾಡಿದರು.

'ಅಭಿಪ್ರಾಯ ಬಂದಿಲ್ಲ...'

'ರಕ್ಷಣಾ ಇಲಾಖೆಯ ಕೇಂದ್ರಗಳಿರುವ ಪ್ರದೇಶದ ಸುತ್ತಮುತ್ತ ಕಟ್ಟಡಗಳ ನಕ್ಷೆಗೆ ಅನುಮೋದನೆ ನೀಡುವಲ್ಲಿ ಸ್ವಲ್ಪ ತಡೆಯಾಗಿದೆ. ರಕ್ಷಣಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವಿದ್ದರೆ ಮಾತ್ರ ನಕ್ಷೆ ಅನುಮೋದಿಸಲು ಜಿಲ್ಲಾಧಿಕಾರಿ ಸೂಚಿಸಿದ್ದಾರೆ. ಈ ಬಗ್ಗೆ ನಾಗರಿಕರ ಆಕ್ಷೇಪಣೆಗಳು ಸೇರಿದಂತೆ ಕೆಲವು ವಿವರಗಳನ್ನು ಕೇಳಲಾಗಿದೆ. ಅದಕ್ಕೆ ಇನ್ನೂ ಯಾವುದೇ ರೀತಿಯ ಸ್ಪಷ್ಟನೆ ರಕ್ಷಣಾ ಇಲಾಖೆಯಿಂದ ಬಂದಿಲ್ಲ' ಎಂದು ಬಿಬಿಎಂಪಿ ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ಗಿರೀಶ್ ಅವರು ಹೇಳಿದರು.

'ಇದಲ್ಲದೆ, ಯಲಹಂಕ ವೈಮಾನಿಕ ತರಬೇತಿ ಶಾಲೆಯ ರನ್‌ವೇ ಸುತ್ತಮುತ್ತಲಿನ 5 ಕಿ.ಮೀ ವ್ಯಾಪ್ತಿಯಲ್ಲಿ ಎತ್ತರದ ಕಟ್ಟಡಗಳ ತೆರವು ಸೇರಿದಂತೆ ಕೆಲವು ಮಾರ್ಗಸೂಚಿಗಳನ್ನು ನೀಡಲಾಗಿದೆ. ಎಲ್ಲ ರೀತಿಯ ಅನುಮತಿಯನ್ನು ಸಂಬಂಧಪಟ್ಟ ಇಲಾಖೆ, ಪ್ರಾಧಿಕಾರಗಳಿಂದ ಪಡೆದು, ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇವುಗಳ ಮೇಲೆ ಹೇಗೆ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸ್ಪಷ್ಟ ವಿವರಗಳನ್ನು ನೀಡಬೇಕು ಎಂದು ಜಕ್ಕೂರು ವಿಮಾನ ನಿಲ್ದಾಣದ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಯ ನಿರ್ದೇಶಕರಿಗೆ ಅ.25ರಂದು ಪತ್ರ ಬರೆಯಲಾಗಿದೆ. ಅವರಿಂದ ಪ್ರತಿಕ್ರಿಯೆ ಬಂದಿಲ್ಲ' ಎಂದರು.

ಸುದ್ದಿ 2 ನಿಮಿಷ

ಜ.7ಕ್ಕೆ ಸುರ್ ಸಂಧ್ಯಾ ಸಂಗೀತೋತ್ಸವ

ಬೆಂಗಳೂರು: ಕಾರಾಗೃಹ ಶಿಕ್ಷೆಗೊಳಗಾದ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಸೋಕೇರ್ ಸಂಸ್ಥೆಯ ಬೆಳ್ಳಿ ಮಹೋತ್ಸವದ ಅಂಗವಾಗಿ ಸರಸ್ ಕಮ್ಯುನಿಕೇಷನ್ ಸಂಸ್ಥೆ ಜ.7ರಂದು 'ಸುರ್ ಸಂಧ್ಯಾ' ಸಂಗೀತ ಕಾರ್ಯಕ್ರಮ ವನ್ನು ಚೌಡಯ್ಯ ಸ್ಮಾರಕ ಭವನದಲ್ಲಿ ಹಮ್ಮಿಕೊಂಡಿದೆ.

'ಕಾರ್ಯಕ್ರಮದಲ್ಲಿ ದೇಶದ ಪ್ರಸಿದ್ಧ ಸಂಗೀತಗಾರರಾದ ಜಿಮುಟ್ ರಾಯ್, ರಾಣಿತ ಬ್ಯಾನರ್ಜಿ, ಮಂಪೀ ನಾಯರ್, ಶೃತಿ ಬಿಡೆ, ನರಸಿಂಹ ಕಣ್ಣನ್, ವಿ. ಸಂಜೀವ್ ಸಂಗೀತ ಪ್ರೇಮಿಗಳನ್ನು ರಂಜಿಸಲಿದ್ದಾರೆ. ಬೆಂಗಳೂರಿನ ಶಬ್ಬೀರ್ ಅಹಮದ್ ತಂಡ ವಾದ್ಯಗೋಷ್ಠಿ ನಡೆಸಿ ಕೊಡಲಿದ್ದು, 15 ಜನ ಪ್ರಸಿದ್ಧ ಪಿಟೀಲು ವಾದಕರು ಭಾಗವಹಿಸಲಿದ್ದಾರೆ' ಎಂದು ಸರಸ್ ಮುಖ್ಯಸ್ಥೆ ಸಂಧ್ಯಾ.ಎಸ್. ಕುಮಾರ್ ತಿಳಿಸಿದರು.



'ಸೋಕೇರ್ ಸಂಸ್ಥೆಗೆ ಸಹಾಯಹಸ್ತ ಚಾಚಲು ಈ ಕಾರ್ಯಕ್ರಮಹಮ್ಮಿಕೊಳ್ಳಲಾಗುತ್ತಿದೆ. ಸಮಾಜದಲ್ಲಿ ಅವಕೃಪೆಗೆ ಒಳಗಾಗಿದ್ದ ನೂರಾರು ಕುಟುಂಬಗಳ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಬರಲು ಇದು ಸಹಾಯಕವಾಗಿದೆ. ಕಾರ್ಯಕ್ರಮವನ್ನು ಪ್ರಾಯೋಜಿಸಲು ಶೃಂಗೇರಿ ಶಾರದಾ ಪೀಠ ಸೇರಿ ಹಲವು ಸಂಘ-ಸಂಸ್ಥೆಗಳು ಸಹಕಾರ ನೀಡಿವೆ. ಕಾರ್ಯಕ್ರಮವು ಟಿಕೆಟ್‌ರಹಿತವಾಗಿದ್ದು, ಆಸಕ್ತರು 636162626249 ಅಥವಾ 9341215026 ಸಂಖ್ಯೆಗೆ ಸಂಪರ್ಕಿಸಬಹುದು' ಎಂದು ತಿಳಿಸಿದ್ದಾರೆ.

'ಬೆಂಗಳೂರು– ಮೈಸೂರು ಹೆದ್ದಾರಿಗೆ ಒಡೆಯರ್ ಹೆಸರಿಡಿ'

ಬೆಂಗಳೂರು: ಹೊಸತಾಗಿ ನಿರ್ಮಾಣವಾಗಿರುವ ದಶಪಥಗಳ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ನಾಮಕರಣ ಮಾಡುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿಗೆ ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಅವರು ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಪತ್ರ ಬರೆದಿರುವ ಅವರು, ಒಡೆಯರ್ ಹೆಸರು ಇಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಒತ್ತಾಯಿಸಿದ್ದಾರೆ.

'1902ರಿಂದ 1940ರವರೆಗೆ ಮೈಸೂರು ರಾಜ್ಯವನ್ನು ಆಳಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್, ರಾಜ್ಯದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಅನೇಕ ಶತಮಾನಗಳ ಪರಂಪರೆ ಮತ್ತು ಪದ್ಧತಿಗಳಲ್ಲಿ ಸಮೃದ್ಧವಾಗಿರುವ ಮೈಸೂರು ಸಂಸ್ಕೃತಿಯನ್ನು ರೂಪಿಸಿದ ಒಡೆಯರ್, ಕೃಷ್ಣ ರಾಜಸಾಗರ ಅಣೆಕಟ್ಟೆಯನ್ನು ನಿರ್ಮಿಸಿದ್ದು ಅವರ ಜೀವಮಾನದ ಮಹತ್ಸಾಧನೆಯಾಗಿದೆ. ಅವರು ದೂರದೃಷ್ಟಿಯ ಜನಪರ ರಾಜರಾಗಿದ್ದರು' ಎಂದೂ ಪತ್ರದಲ್ಲಿ ಬಣ್ಣಿಸಿದ್ದಾರೆ.

'ಸಾಧಕ ವಿದ್ಯಾರ್ಥಿಗಳನ್ನು ಗುರುತಿಸಿ'

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಹಳೆಯ ವಿದ್ಯಾರ್ಥಿಗಳ ದಿನವನ್ನು ಆಚರಿಸಲಾಯಿತು.

ಐಐಎಸ್‌ಸಿ ಏರೊಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಗೋಪಾಲನ್ ಜಗದೀಶ್ ಅವರು, ನಿಯಂತ್ರಿತ ಆಲೋಚನೆಗಳು, ಮಾನವೀಯತೆ ಮತ್ತು ವಿನ್ಯಾಸ ಚಿಂತನೆಯ ಬಗ್ಗೆ ಬೆಳಕು ಚೆಲ್ಲಿದರು. ಫ್ಲಾರಿಡಾ ಇಂಟರ್‌ನ್ಯಾಷನಲ್ ವಿ.ವಿಯ ಪ್ರಾಧ್ಯಾಪಕ ಡಾ.ಎಸ್.ಎಸ್.ಅಯ್ಯಂಗಾರ್, ಸಾಧಕ ವಿದ್ಯಾರ್ಥಿಗಳನ್ನು ಅಧ್ಯಾಪಕರ ಗುರುತಿಸುವುದು ಬಹಳ ಮುಖ್ಯ ಎಂದರು.

ಯುವಿಸಿಇ ನಿರ್ದೇಶಕರಾದ ಡಾ.ಎಚ್.ಎನ್.ರಮೇಶ್, ಎಲ್. ವಾಸುದೇವಮೂರ್ತಿ ಇತರರಿದ್ದರು.

ವಿಚಾರ ಸಂಕಿರಣದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಬಣ್ಣನೆ

'ಕುವೆಂಪು ವರ್ತಮಾನದ ಬೆಳಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುವೆಂಪು ಅವರು ಮಹಾನ್ ವಿಚಾರವಾದಿ ಹಾಗೂ ದಾರ್ಶನಿಕರಾಗಿದ್ದರಿಂದ ಅವರು ಪ್ರಸ್ತುತರಾಗಿ ನಿಲ್ಲುತ್ತಾರೆ. ಅವರು ವರ್ತಮಾನದ ಬೆಳಕಾಗಿದ್ದಾರೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನ ಹಾಗೂ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಕುವೆಂಪು- ವರ್ತಮಾನದ ಬೆಳಕಿನಲ್ಲಿ' ವಿಚಾರ ಸಂಕಿರಣದಲ್ಲಿ ಭಾಗವಹಿಸಿ, ಮಾತನಾಡಿದರು.



ಕುವೆಂಪು ಅವರ ಭಾವಚಿತ್ರಕ್ಕೆ ಬರಗೂರು ರಾಮಚಂದ್ರಪ್ಪ, ಲೇಖಕ ಎಲ್.ಎನ್. ಮುಕುಂದರಾಜ್, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಖಜಾಂಚಿ ಪ್ರಭಾಕರ ಬೆಲವಾಡಿ ಹಾಗೂ ಅಧ್ಯಕ್ಷ ಎಂ. ತಿಮ್ಮಯ್ಯ ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

'ಸಾಹಿತ್ಯವನ್ನು ಮೀರಿದ ವ್ಯಕ್ತಿತ್ವ ಕುವೆಂಪು ಅವರದ್ದಾಗಿದೆ. ಅವರು ಒಂದು ಕ್ಷೇತ್ರಕ್ಕೆ ಸೀಮಿತವಾಗದೆ, ಭಾಷೆ, ಸಾಹಿತ್ಯ, ವಿಮರ್ಶೆ, ಮೀಮಾಂಸೆ, ಶಿಕ್ಷಣ ಸೇರಿ ಎಲ್ಲ ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದ್ದಾರೆ. ಅವರ ಬರವಣಿಗೆಯಲ್ಲಿ ಸ್ಥಳೀಯತೆಯ ಜತೆಗೆ ರಾಷ್ಟ್ರೀಯತೆ ಹಾಗೂ ಅಂತರರಾಷ್ಟ್ರೀಯತೆಯೂ ಅಡಗಿದೆ' ಎಂದು ಹೇಳಿದರು.

'ಕುವೆಂಪು ಅವರು ಏಕಕಾಲದಲ್ಲಿ ಕನ್ನಡಿಗನೂ ಆಗುತ್ತಾ, ಭಾರತೀಯನೂ ಆಗುತ್ತಾ ವಿಶ್ವಮಾನವತೆಯನ್ನು ಪ್ರತಿಪಾದಿಸಿದರು. ಆದ್ದರಿಂದ, ವಿಶ್ವಕವಿ ಆಗುವಂತಹ ವಿಚಾರವಾದಿ ಅವರಾಗಿದ್ದರು. ಜಾತ್ಯತೀತ ಮನೋಧರ್ಮದ ಅವರು, ಎಲ್ಲರನ್ನೂ ಒಳಗೊಳ್ಳುವ ಕ್ರಿಯೆಯಿಂದಲೇ ಹೊಸ ವಿಚಾರಧಾರೆ ಹುಟ್ಟುಹಾಕಿದರು' ಎಂದು ತಿಳಿಸಿದರು.

'ವ್ಯಕ್ತಿಯೊಬ್ಬ ಸಾಂಸ್ಥಿಕ ಧರ್ಮದಲ್ಲಿ ಇರುವುದು, ಮಾನಸಿಕವಾಗಿ ಧಾರ್ಮಿಕನಾಗುವುದು ಬೇರೆ. ನಿಜವಾದ ಭಕ್ತಿಗೆ ಬೈಲಾ ಇರುವುದಿಲ್ಲ. ಸಾಂಸ್ಥಿಕ ಧರ್ಮವು ಹೀಗೆ ಪೂಜೆ ಮಾಡಬೇಕು, ಹೀಗೆ ಪೂಜೆ ಮಾಡಿದರೆ ದೇವರು ಒಲಿಯಲು ಸಾಧ್ಯ ಎಂದು ಹೇಳುತ್ತದೆ. ಆದರೆ, ಧಾರ್ಮಿಕತೆಯಲ್ಲಿ ಅದಕ್ಕೆ ಬೈಲಾ ಹಾಗೂ ನಿಯಂತ್ರಣ ಇರುವುದಿಲ್ಲ' ಎಂದರು.

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು.



ಹೊಸ ವರ್ಷದ ಮೊದಲ ದಿನವಾದ ಭಾನುವಾರ ನಗರದ ಬನಶಂಕರಿ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ದೇವಿ ದರ್ಶನ ಪಡೆದರು. ಯುವತಿಯೊಬ್ಬರು ಆರತಿ ಬೆಳಗಿದರು – ಪ್ರಜಾವಾಣಿ ಚಿತ್ರ

ವಿಮ್ಸ್ ರಕ್ತನಿಧಿಯಲ್ಲಿ ಅಗ್ನಿ ಅವಘಡ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಇಲ್ಲಿನ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ(ವಿಮ್ಸ್) ರಕ್ತನಿಧಿಯಲ್ಲಿ ಭಾನುವಾರ ಮಧ್ಯಾಹ್ನ ಅಗ್ನಿ ಅವಘಡ ಸಂಭವಿಸಿದ್ದು, ರಕ್ತ ಬ್ಯಾಂಕ್ ಸುಟ್ಟು ಭಸ್ಮವಾಗಿದೆ.

ಈ ಅವಘಡಕ್ಕೆ ಬೆಂಕಿಗೆ ಕಾರಣ ಏನು ಎಂಬುದು ನಿಖರವಾಗಿ ತಿಳಿದು ಬಂದಿಲ್ಲ.

ಚಿತ್ರಾವಳಿ



ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಬೆಂಗಳೂರಿನಲ್ಲಿ ಭಾನುವಾರ ಅಧಿಕೃತವಾಗಿ ಆಹ್ವಾನ ನೀಡಿದರು




ವಿ. ಸೋಮಣ್ಣ ಪ್ರತಿಷ್ಠಾನದ ವತಿಯಿಂದ 2023ನೇ ಕ್ಯಾಲೆಂಡರ್ ಅನಾವರಣ ಕಾರ್ಯಕ್ರಮದಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ನಿರ್ದೇಶಕಿ ತಮಿಳ್ ಸೆಲ್ವಿ ಅವರನ್ನು ಭಾನುವಾರ ಸನ್ಮಾನಿಸಲಾಯಿತು. ಸಚಿವ ವಿ. ಸೋಮಣ್ಣ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಫಾಲನೇತ್ರ, ಕರ್ನಾಟಕ ಗೃಹ ಮಂಡಳಿ ಆಯುಕ್ತೆ ಕವಿತಾ ಮನ್ನಿಕೇರಿ, ಲೇಖಕರಾದ ಸಿ.ಯು. ಮಂಜುನಾಥ್, ಎಂ.ಆರ್ ಸತ್ಯನಾರಾಯಣ, ವೀರಪ್ಪ ಮರಳವಾಡಿ ಇದ್ದರು.

ನಿಧನ ವಾರ್ತೆ

ಸಾವಿತ್ರಮ್ಮ

ಬೆಂಗಳೂರು: ರಾಜಾಜಿನಗರದ ನವರಂಗ ವೃತ್ತದ ಅಂಬಾಜಿ ನ್ಯೂಸ್ ಏಜೆನ್ಸಿಯ ವೆಂಕಟರಾಜು ಅವರ ತಾಯಿ ಸಾವಿತ್ರಮ್ಮ (86) ಅವರು ಭಾನುವಾರ ನಿಧನರಾದರು.

ಅವರಿಗೆ ಪುತ್ರವೆಂಕಟರಾಜು ಹಾಗೂ ಮೂವರು ಪುತ್ರಿಯರಿದ್ದಾರೆ. ಹರಿಶ್ಚಂದ್ರ ಘಾಟ್ ಸ್ಮಶಾನದಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.



ಸಾವಿತ್ರಮ್ಮ

ಮಾರ್ಚ್‌ನಲ್ಲಿ ಸೇವೆಗೆ ಲಭ್ಯ: ಬಿಎಂಆರ್‌ಸಿಎಲ್ ನಿರೀಕ್ಷೆ

ಡಬಲ್ ಡೆಕ್ಕರ್ ಕಾಮಗಾರಿ ಬಹುತೇಕ ಅಂತಿಮ

3.3 ಕಿ.ಮೀ. ಡಬಲ್ ಡೆಕ್ಕರ್ ಮೇಲ್ಸೇತುವೆ ಉದ್ದ

5.5 ಮೀಟರ್ ಮೆಟ್ರೊ ಮಾರ್ಗ ಮತ್ತು ಬಸ್ ಮಾರ್ಗದ ನಡುವಿನ ಅಂತರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ಇದೇ ಮೊದಲ ಬಾರಿಗೆ ನಿರ್ಮಾಣಗೊಳ್ಳುತ್ತಿರುವ 'ಡಬಲ್ ಡೆಕ್ಕರ್' ಮೇಲ್ಸೇತುವೆ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಮಾರ್ಚ್‌ನಲ್ಲಿ ಲೋಕಾರ್ಪಣೆಯಾಗಲಿದೆ ಎಂದು ಬಿಎಂಆರ್‌ಸಿಎಲ್(ಬೆಂಗಳೂರು ಮೆಟ್ರೊ ರೈಲು ನಿಗಮ) ಅಂದಾಜಿಸಿದೆ.

ನಮ್ಮ ಮೆಟ್ರೊ ಮುಂದೇನು? 6

ಎರಡನೇ ಹಂತದ ಮೆಟ್ರೊ ರೈಲು ಯೋಜನೆಯಲ್ಲಿ ಆರ್.ವಿ. ರಸ್ತೆ-ಬೊಮ್ಮಸಂದ್ರ ಮಾರ್ಗದಲ್ಲಿ ಬಸ್ ಹಾಗೂ ಮೆಟ್ರೊ ರೈಲು ಸಂಚರಿಸುವ ರೀತಿಯಲ್ಲಿ ಈ ಮೇಲ್ಸೇತುವೆ ನಿರ್ಮಿಸಲಾಗಿದೆ. ಒಂದೇ ಪಿಲ್ಲರ್‌ಗೆ ರೋಡ್ ಕಂ ರೇಲ್(ಡಬಲ್ ಡೆಕ್ಕರ್) ಸೇತುವೆ ನಿರ್ಮಿಸಲಾಗುತ್ತಿದೆ.

ಮೊದಲ ಮಟ್ಟದಲ್ಲಿ ಎರಡೂ ಬದಿಗಳಲ್ಲಿ ಎರಡು ರಸ್ತೆ ಮಾರ್ಗ ನಿರ್ಮಿಸಲಾಗಿದ್ದು, ಇಲ್ಲಿ ಬಸ್, ಕಾರು ಸೇರಿ ಎಲ್ಲಾ ರೀತಿಯ ವಾಹನಗಳು ಸಂಚರಿಸಲಿವೆ. ಎರಡನೇ ಮಟ್ಟದ ಮಾರ್ಗದಲ್ಲಿ ಮೆಟ್ರೊ ರೈಲು ಸಂಚರಿಸಲಿದೆ. ಅಲ್ಲದೆ, ನೆಲದಲ್ಲಿರುವ ರಸ್ತೆಯಲ್ಲಿ ಸದ್ಯ ಇರುವ ತ್ರಿಪಥ ರಸ್ತೆ ಮಾರ್ಗವೂ ಇರಲಿದೆ.

ಮೆಟ್ರೊ ಕಂಬಕ್ಕೆ ಎರಡೂ ಬದಿಯಲ್ಲಿ ರೆಕ್ಕೆಗಳ ರೀತಿಯಲ್ಲಿ ಸೇತುವೆಗಳನ್ನು ಅಳವಡಿಸಲಾಗಿದೆ.



ಸಿಲ್ಕ್‌ಬೋರ್ಡ್ ಮೆಟ್ರೊ ರೈಲು ನಿಲ್ದಾಣದ ಬಳಿ ಡಬಲ್ ಡೆಕ್ಕರ್ ಮಾರ್ಗದ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿರುವುದು –ಪ್ರಜಾವಾಣಿ ಚಿತ್ರ/ಕಿಶೋರ್‌ಕುಮಾರ್ ಬೋಳಾರ್

ಗಟ್ಟಿಮುಟ್ಟಾದ ಸೇತುವೆ: ಭಾರಿ ವಾಹನಗಳಿಗೂ ಅವಕಾಶ

ಐಆರ್‌ಸಿ-6 ದರ್ಜೆಯ ಮೇಲ್ಸೇತುವೆ ನಿರ್ಮಿಸಲಾಗಿದ್ದು, ಲಘು ವಾಹನಗಳಷ್ಟೇ ಅಲ್ಲದೇ ಭಾರಿ ವಾಹನಗಳ ಸಂಚಾರಕ್ಕೂ ಅವಕಾಶ ಇರಲಿದೆ. ನೆಲದಿಂದ 8 ಮೀಟರ್ ಎತ್ತರದಲ್ಲಿ ಸೇತುವೆ ನಿರ್ಮಾಣವಾಗಿದ್ದು, ಅದರ ಮೇಲೆ 5.5 ಮೀಟರ್ ಎತ್ತರದಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಾಣವಾಗಿದೆ.

ಈ ರೀತಿ ಡಬಲ್ ಡೆಕ್ಕರ್ ಮಾರ್ಗವು ದಕ್ಷಿಣ ಭಾರತದಲ್ಲೇ ಮೊದಲು ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಿದೆ. ಮುಂಬೈ, ಜೈಪುರ ಮತ್ತು ನಾಗಪುರದಲ್ಲಿ ಈ ರೀತಿಯ ಮಾರ್ಗಗಳು ಈಗಾಗಲೇ ಇವೆ.

ಆರ್.ವಿ. ರಸ್ತೆಯಿಂದ ಮಾರೇನಹಳ್ಳಿ, ರಾಗಿಗುಡ್ಡ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ 3.3 ಕಿ.ಮೀ. ಉದ್ದ ಈ ಡಬಲ್ ಡೆಕ್ಕರ್ ಮೇಲ್ಸೇತುವೆ ನಿರ್ಮಾಣವಾಗಿದೆ.

ಇಷ್ಟು ಉದ್ದದ ಡಬಲ್ ಡೆಕ್ಕರ್ ಮಾರ್ಗದ ಮೇಲೆ ಬಸ್‌ಗಳು ಅಥವಾ ಬೇರೆ ವಾಹನಗಳು ಒಮ್ಮೆ ಹತ್ತಿದರೆ ಮಧ್ಯದಲ್ಲಿ ಇಳಿಯಲು ಅವಕಾಶ ಇಲ್ಲ. ಈ ರಸ್ತೆಯಲ್ಲಿ ಇರುವ ವಾಹನ ದಟ್ಟಣೆ ಕಡಿಮೆ ಮಾಡಲು ಇದು ನೆರವಾಗಲಿದೆ. ಸಿಗ್ನಲ್‌ರಹಿತ ಸಂಚಾರಕ್ಕೆ ಅನುಕೂಲ ಆಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಪೂರ್ವ ನಿಗದಿಯಂತೆ 2021ರ ಅಕ್ಟೋಬರ್‌ನಲ್ಲೇ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಆದರೆ, ಲೂಪ್‌ಗಳ ನಿರ್ಮಾಣ ಕಾಮಗಾರಿ ಬಾಕಿ ಇದ್ದು, ಈಗಷ್ಟೇ ಆರಂಭವಾಗಿರುವ ಕೆಲಸ ಮೂರು ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ವಿವರಿಸಿದರು.

ಜಯದೇವ ಜಂಕ್ಷನ್‌ನಲ್ಲಿ ನೆಲದ ಅಡಿಯಲ್ಲಿ ಸುರಂಗದಲ್ಲಿ ಪಿಂಕ್ ಮೆಟ್ರೊ ರೈಲು ಮಾರ್ಗ(ಗೊಟ್ಟಿಗೆರೆ-ನಾಗವಾರ), ಅದರ ಮೇಲೆ ರಸ್ತೆ ಮತ್ತು ಹಳದಿ ಮೆಟ್ರೊ ರೈಲು ಮಾರ್ಗ ಹಾದು ಹೋಗುತ್ತಿದೆ. ರಸ್ತೆ, ಮೆಟ್ರೊ ನಿಲ್ದಾಣಗಳನ್ನು ಒಳಗೊಂಡಿರುವ ಮೊದಲ ನಿಲ್ದಾಣ ಇದಾಗಲಿದೆ. ನಮ್ಮ ಮೆಟ್ರೊದ ಬೇರೆ ಯಾವುದೇ ಮಾರ್ಗದಲ್ಲಿ ಹೀಗೆ ಒಂದರ ಮೇಲೊಂದು ಮಾರ್ಗ ನಗರದಲ್ಲಿ ಇಲ್ಲ. ಆದ್ದರಿಂದ ಹಳದಿ ಮಾರ್ಗವು ಹಲವು ವಿಶೇಷಗಳನ್ನು ಒಳಗೊಂಡಿದೆ.

ನುಡಿದಂತೆ ನಡೆದರೆ ಬಸವಣ್ಣನಿಗೆ ಗೌರವ: ಬೇಲಿಮಠಶ್ರೀ

ಬೆಂಗಳೂರು: ಬಸವಣ್ಣನವರ ವಚನ, ತತ್ವಗಳನ್ನು ಓದಿದರೆ ಸಾಲದು, ಅವುಗಳನ್ನು ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ನುಡಿದಂತೆ ನಡೆದರೆ ಅದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಬೇಲಿಮಠ ಮಹಾಸಂಸ್ಥಾನದ ಶಿವರುದ್ರ ಸ್ವಾಮೀಜಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕ ಹಮ್ಮಿಕೊಂಡಿದ್ದ ಲಿಂಗಾಯತ ಧರ್ಮ ಜಾಗೃತಿ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, 'ವಚನ ಜ್ಯೋತಿ ಬಳಗ ಮಕ್ಕಳ ಮೇಳವನ್ನು ಜನವರಿ 10ರಿಂದ 12 ದಿನಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಮಾತನಾಡಿದರು.

2023ನೇ ಸಾಲಿನ ನೂತನ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು. ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಪ್ರೊ.ವೀರಭದ್ರಯ್ಯ ಅಧ್ಯಕ್ಷತೆ ವಹಿಸಿದ್ದರು. ಕನಕಪುರ ತಾಲ್ಲೂಕು ದೊಡ್ಡಮರಳವಾಡಿ ಬಸವ ಗುರುಕುಲ ಶಿವಮಠದ ಪ್ರಭು ಕಿರೀಟ ಸ್ವಾಮೀಜಿ, ರಂಗಕರ್ಮಿ ನಾಗರಾಜ ಮೂರ್ತಿ, ಮಹಾಸಭಾದ ಪ್ರಮುಖರಾದ ಶಿವಕುಮಾರ ಸ್ವಾಮಿ, ಸಂಜೀವ ಕಡಗದ, ಕೃಪಾಶಂಕರ್, ಶಂಭು ಬಣಕಾರ್, ಅಶೋಕ ಲೇಣಿ ಉಪಸ್ಥಿತರಿದ್ದರು.



ಅಲಂಕಾರ ವೈಕುಂಠ ಏಕಾದಶಿ ಮುನ್ನಾದಿನವಾದ ಭಾನುವಾರ ವೈಯಾಲಿಕಾವಲ್‌ನಲ್ಲಿರುವ ತಿರುಮಲ ತಿರುಪತಿ ದೇವಸ್ಥಾನವನ್ನು ಹೂವುಗಳಿಂದ ಅಲಂಕರಿಸಲಾಯಿತು – ಪ್ರಜಾವಾಣಿ ಚಿತ್ರ

ಕೆರೆಯಲ್ಲಿ ಮುಳುಗಿ ಛಾಯಾಗ್ರಾಹಕ ನಾಪತ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಮಾವತ್ತೂರು ಕೆರೆಗೆ ಭಾನುವಾರ ಈಜಲು ತೆರಳಿದ್ದ ಛಾಯಾಗ್ರಾಹಕ ಪ್ರಸನ್ನ ಭಟ್ (25) ನಾಪತ್ತೆ ಆಗಿದ್ದಾರೆ.

ಇವರು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಅವರಿಗೆ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸುತ್ತಿದ್ದರು.

ಕನಕಪುರ ಪೊಲೀಸರು ಪ್ರಸನ್ನ ಅವರಿಗಾಗಿ ಭಾನುವಾರ ರಾತ್ರಿವರೆಗೂ ಹುಡುಕಾಟ ನಡೆಸಿದ್ದರು.

ಮೊದಲ ಹಂತದಲ್ಲಿ ₹87 ಕೋಟಿ ವೆಚ್ಚ

ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಯೋಜನೆ ಕಾಮಗಾರಿ ಪ್ರಾರಂಭ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮೂರು ಪಥದ ಮೇಲ್ಸೇತುವೆ, ಮೂರು ಪಥದ ಅಂಡರ್ ಪಾಸ್
- 12 ತಿಂಗಳಲ್ಲಿ ಕಾಮಗಾರಿ ಪೂರ್ಣ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಯೋಜನೆ ಕಾಮಗಾರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಭಾನುವಾರ ಚಾಲನೆ ನೀಡಿದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ಅತಿಹೆಚ್ಚು ವಾಹನ ದಟ್ಟಣೆ ಉಂಟಾಗುತ್ತಿದ್ದು, ಇದರ ನಿವಾರಣೆಗೆ ಮೇಲ್ಸೇತುವೆ ವಿಸ್ತರಣೆ ಮಾಡಲು ಉದ್ದೇಶಿಸಲಾಗಿತ್ತು. ಈ ಯೋಜನೆಯ ಮೊದಲ ಹಂತದಲ್ಲಿ ಅಂತರರಾಷ್ಟ್ರೀಯ ವಿಮಾನನಿಲ್ದಾಣ ರಸ್ತೆಯಿಂದ ಬೆಂಗಳೂರು ಕಡೆಗೆ ಮೂರು ಪಥದ (715 ಮೀ.) ಮೇಲ್ಸೇತುವೆ ಮತ್ತು ಯಶವಂತಪುರ- ಕೆ.ಆರ್. ಪುರ ಮಾರ್ಗದಲ್ಲಿ ಮೂರು ಪಥದ ಅಂಡರ್ ಪಾಸ್ ನಿರ್ಮಾಣವಾಗಲಿದೆ.

'ನಾನಾ ಕಾರಣಗಳಿಂದ ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಯೋಜನೆ ಒಂದು ದಶಕದಿಂದ ನನೆಗುದಿಗೆ ಬಿದ್ದಿತ್ತು. ವಾಹನ ದಟ್ಟಣೆಯಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಸ್ತರಣೆ ಕಾಮಗಾರಿಗೆ ಚಾಲನೆ ನೀಡಿ ಶೀಘ್ರ ಮುಗಿಸಬೇಕೆಂದು ಸೂಚನೆ ನೀಡಿದ್ದರು' ಎಂದು ವಿಶ್ವನಾಥ್ ತಿಳಿಸಿದರು.

'ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ನೀಡಿದ ಸೂಚನೆ ಹಿನ್ನೆಲೆಯಲ್ಲಿ ಬಿಡಿಎ ಕಾಮಗಾರಿಗೆ ಚಾಲನೆ ನೀಡಿದೆ. ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆಗೆ ಒಟ್ಟು ₹225 ಕೋಟಿ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಹಣವನ್ನೂ ಮಂಜೂರು ಮಾಡಲಾಗಿದೆ. ಈಗ ಮೊದಲ ಹಂತದ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಇದಕ್ಕಾಗಿ ₹87 ಕೋಟಿ ವೆಚ್ಚ ಮಾಡಲಾಗುತ್ತಿದೆ' ಎಂದರು.

'ಈ ಹಿಂದೆ ಕಾಮಗಾರಿಗೆ 26 ತಿಂಗಳ ಕಾಲಮಿತಿಯನ್ನು ಹಾಕಲಾಗಿತ್ತು. ಆದರೆ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕಾಮಗಾರಿಯನ್ನು ಒಂದು ವರ್ಷದಲ್ಲಿ ಮುಗಿಸುವಂತೆ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮೇಲ್ಸೇತುವೆ ವಿಸ್ತರಣೆ ಯೋಜನೆಗೆ ನಮ್ಮ ಮೆಟ್ರೊ ವಿನ್ಯಾಸವನ್ನು ಸಿದ್ಧಗೊಳಿಸುತ್ತಿದೆ. ಇದರಂತೆ ಮುಂದಿನ ತಿಂಗಳಾಂತ್ಯಕ್ಕೆ ಎರಡನೇ ಹಂತದ ಕಾಮಗಾರಿಗೂ ಚಾಲನೆ ನೀಡಲಾಗುತ್ತದೆ' ಎಂದರು.

ಸಂಸದ ಡಿ.ವಿ.ಸದಾನಂದ ಗೌಡ, ಹೆಬ್ಬಾಳ ಶಾಸಕ ಬೈರತಿ ಸುರೇಶ್, ಬಿಡಿಎ ಆಯುಕ್ತ ಕುಮಾರ ನಾಯಕ್, ಕಾರ್ಯದರ್ಶಿ ಶಾಂತರಾಜು, ಎಂಜಿನಿಯರ್ ಸದಸ್ಯ ಶಾಂತರಾಜಣ್ಣ, ಬಿಡಿಎ ಪೊಲೀಸ್ ವರಿಷ್ಠಾಧಿಕಾರಿ ನಂಜುಂಡೇಗೌಡ ಇದ್ದರು.

'ನೊಬೆಲ್ ಪ್ರಶಸ್ತಿಗೆ ಕುವೆಂಪು ಅರ್ಹರಾಗಿದ್ದರು'

ಕುವೆಂಪು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಸಾಹಿತಿ ಹರಿಹರಪ್ರಿಯ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುವೆಂಪು ಅವರ ಕೃತಿಗಳು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿದ್ದರೆ ರವೀಂದ್ರನಾಥ ಟ್ಯಾಗೋರ್ ರೀತಿ ಅವರಿಗೂ ನೊಬೆಲ್ ಪುರಸ್ಕಾರ ದೊರೆಯುತ್ತಿತ್ತು' ಎಂದು ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ತಿಳಿಸಿದರು.

ರಂಗೋತ್ರಿ ಸಂಸ್ಥೆ ನಗರದಲ್ಲಿ ಆಯೋಜಿಸಿದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಕುವೆಂಪು ಅವರು ಕನ್ನಡದ ಧೀಮಂತ ದಾರ್ಶನಿಕ. ಅವರೊಬ್ಬ ವಿಶ್ವಕವಿ. ಈಗ ನಾವು ಹಾಡುತ್ತಿರುವ ನಾಡಗೀತೆಯನ್ನು ಕುವೆಂಪು ಅವರು 1924ರಲ್ಲಿ ತಮ್ಮ 20ನೇ ವಯಸ್ಸಿನಲ್ಲಿಯೇ ಬರೆದಿದ್ದರು. ಕುವೆಂಪು ಅವರು ದುಡಿಯುವವನನ್ನು ಯೋಗಿ ಎಂದು ಕರೆದರು. ಎರಡು ನಾಡಗೀತೆಗಳನ್ನು ನೀಡಿದ ಕವಿ ಜಗತ್ತಿನಲ್ಲಿಯೇ ಇಲ್ಲ. ಅವರ 'ಓ ನನ್ನ ಚೇತನ...' ವಿಶ್ವದ ನಾಡಗೀತೆ' ಎಂದರು.

'ವಿಶ್ವಮಾನವರನ್ನು ಹುಡುಕಬೇಕಾದ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಕುವೆಂಪು ಅವರು ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಎಂದಿದ್ದರು. ಮನುಷ್ಯರಾಗಲು ಕುವೆಂಪು ಅವರ ಸಾಹಿತ್ಯ ಮತ್ತು ಬದುಕನ್ನು ಪ್ರತಿಯೊಬ್ಬರು ತಿಳಿಯಬೇಕು. ಯುವಪೀಳಿಗೆ ಅವಶ್ಯವಾಗಿ ಕುವೆಂಪು ಅವರನ್ನು ಅಧ್ಯಯನ ಮತ್ತು ಮನನ ಮಾಡಿಕೊಳ್ಳಬೇಕು' ಎಂದು ಹೇಳಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, 'ಕುವೆಂಪು ಅವರು ಮಹಾನ್ ದಾರ್ಶನಿಕ ಕವಿಯಾಗಿದ್ದರು. 'ಮನುಜ ಮತ-ವಿಶ್ವಪಥ' ಎಂಬ ಸಂದೇಶವನ್ನು ಜಗತ್ತಿಗೆ ಸಾರಿದರು. ಅವರ ಪರಿಪೂರ್ಣ ದೃಷ್ಟಿ ತತ್ವಗಳು ಇಡೀ ವಿಶ್ವಕ್ಕೆ ಆದರ್ಶನೀಯವಾದದ್ದಾಗಿವೆ. ಅವರೊಬ್ಬ ಮಹಾನ್ ಸ್ವಾಭಿಮಾನಿಯಾಗಿದ್ದರು. ಎಲ್ಲದರಲ್ಲೂ ಮಾನವೀಯತೆ ಕಾಣುತ್ತಿದ್ದರು' ಎಂದರು.

ಇದೇ ವೇಳೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಪ್ರಯುಕ್ತ ಗುಂಡೀಗೆರೆ ವಿಶ್ವನಾಥ್ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಸಾಣೆಹಳ್ಳಿ ಶಿವಸಂಚಾರ ತಂಡದಿಂದ ಕುವೆಂಪು ವಿರಚಿತ 'ಚಂದ್ರಹಾಸ' ನಾಟಕದ ಪ್ರದರ್ಶನ ನಡೆಯಿತು.



ಕಾರ್ಯಕ್ರಮದಲ್ಲಿ ಪುಸ್ತಕಮನೆ ಹರಿಹರಪ್ರಿಯ ಅವರು ಕುವೆಂಪು ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ರಂಗೋತ್ರಿ ಸಂಸ್ಥೆಯ ಅಧ್ಯಕ್ಷ ಕುಮಾರ್ ರಂಗೋತ್ರಿ ಹಾಗೂ ಸಿ.ಸೋಮಶೇಖರ್ ಇದ್ದಾರೆ



ವೀರಲೋಕ ಪುಸ್ತಕ ಪ್ರಕಾಶನ ಸಂಸ್ಥೆ ಹೊಸ ವರ್ಷದ ಅಂಗವಾಗಿ ಶನಿವಾರ ಆಯೋಜಿಸಿದ್ದ 'ಪುಸ್ತಕ ರಾತ್ರಿ' ಕಾರ್ಯಕ್ರಮದಲ್ಲಿ ನೌಶದ್ ಜನ್ನತ್ ಅವರ 'ಫಾರೆಸ್ಟರ್ ಪೊನ್ನಪ್ಪ', ಶಶಿಧರ ಹಾಲಾಡಿ ಅವರ 'ನಾ ಸೆರೆಹಿಡಿದ ಕನ್ಯಾಸ್ತ್ರೀ', ಶ್ರೀನಿವಾಸ ಮೂರ್ತಿ ಎಸ್.ವಿ ಅವರ 'ವಿಶ್ವಯಾನಕ್ಕೆ ಗಣಿತವಾಹನ', ಡಾ. ಶರಣು ಹುಲ್ಲೂರು ಅವರ 'ಮೇರುನಟ', ಗಾಯತ್ರಿ ರಾಜ್ ಅವರ 'ಟ್ರಾಯ್', ಮಂಜುನಾಥ್ ಕುಣಿಗಲ್ ಅವರ 'ಕುಣಿಗಲ್ ಟು ಕಂದಹಾರ್' ಮತ್ತು ಜಯರಾಮಚಾರಿ ಅವರ 'ಲೆಟ್ಸ್ ಮೇಕ್ ಶಾರ್ಟ್ ಫಿಲ್ಮ್' ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ರತನ್ ಟಾಟಾ ಆಪ್ತ ಕೃಷ್ಣಕುಮಾರ್ ನಿಧನ

ಮುಂಬೈ (ಪಿಟಿಐ): ರತನ್ ಟಾಟಾ ಅವರ ಆಪ್ತರಾಗಿದ್ದ ಆರ್.ಕೃಷ್ಣಕುಮಾರ್ (84) ಹೃದಯಾಘಾತದಿಂದ ಭಾನುವಾರ ನಿಧನರಾಗಿದ್ದಾರೆ.

ಕೇರಳದ ತಲಶ್ಶೇರಿಯಲ್ಲಿ ಜನಿಸಿದ್ದ ಕೃಷ್ಣಕುಮಾರ್ ಅವರು ಟಾಟಾ ಸಮೂಹದಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದರು. ಅವರಿಗೆ 2009ರಲ್ಲಿ ಪದ್ಮಶ್ರೀ ಗೌರವವೂ ಒಲಿದಿತ್ತು.

ಟಾಟಾ ಸನ್ಸ್‌ನ ಮಾಜಿ ನಿರ್ದೇಶಕರಾಗಿದ್ದ ಅವರು 2013ರವರೆಗೂ ಇಂಡಿಯನ್ ಹೋಟೆಲ್ಸ್‌ನ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದರು. ನಿವೃತ್ತಿಯ ನಂತರ ಟಾಟಾ ಟ್ರಸ್ಟ್‌ಗಳಲ್ಲಿ ಸಕ್ರಿಯರಾಗಿದ್ದರು.

ಸಂಪಿಗೆ ರಸ್ತೆ ಸಾರ್ವಜನಿಕ ಬಳಕೆಗೆ ಮುಕ್ತ

ಬೆಂಗಳೂರು: ಮಲ್ಲೇಶ್ವರದಲ್ಲಿ ವೈಟ್ ಟಾಪಿಂಗ್ ಮಾಡಿ ಅಭಿವೃದ್ಧಿಪಡಿಸಿರುವ ಸಂಪಿಗೆ ರಸ್ತೆಯನ್ನು ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಭಾನುವಾರ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಿದರು.

ಮಲ್ಲೇಶ್ವರ ವೃತ್ತದಲ್ಲಿ ರಾಷ್ಟ್ರಕವಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಸಚಿವರು, ಯಶವಂತಪುರ ವೃತ್ತದವರೆಗೆ ಒಂದು ಸಾವಿರಕ್ಕೂ ಹೆಚ್ಚು ಉತ್ಸಾಹಿಗಳ ಬೈಕ್ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಸಚಿವರು ಎಲೆಕ್ಟ್ರಿಕ್ ಸ್ಕೂಟರ್ ಚಲಾಯಿಸಿದರು.

ನಂತರ ಮಾತನಾಡಿದ ಅವರು 'ಒಟ್ಟು 7.5 ಕಿ.ಮೀ. ಉದ್ದದ ಈ ದ್ವಿಪಥ ರಸ್ತೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗಿದೆ' ಎಂದರು.

'ಫೀಡರ್ ಲೈನ್, ನೀರು ಪೂರೈಕೆ ಕೊಳವೆ, ಒಳಚರಂಡಿ ಮಾರ್ಗ, ವಿದ್ಯುತ್ ಕೇಬಲ್ ಎಲ್ಲವನ್ನೂ ಈಗ ನೆಲದ ಅಡಿಯಲ್ಲಿ ಅಳವಡಿಸಲಾಗಿದೆ. ಹಾಗೆಯೇ ಪಾದಚಾರಿ ಮಾರ್ಗವನ್ನೂ ಅಭಿವೃದ್ಧಿಪಡಿಸಲಾಗಿದೆ. ಮೂಲಸೌಕರ್ಯ ಅಗತ್ಯಗಳಿಗೆಂದು ಮುಂದಿನ ದಿನಗಳಲ್ಲಿ ರಸ್ತೆ ಅಗೆಯುವ ಅನಿವಾರ್ಯತೆ ಇರುವುದಿಲ್ಲ. ಈ ಭಾಗದಲ್ಲಿ ಆಗುತ್ತಿದ್ದ ನೀರು ವ್ಯರ್ಥವಾಗುವುದನ್ನು ಸಹ ಈಗ ನಿಲ್ಲಿಸಲಾಗಿದೆ' ಎಂದು ಅವರು ವಿವರಿಸಿದರು.

'ಸಂಪಿಗೆ ರಸ್ತೆಯುದ್ದಕ್ಕೂ 20 ಅಡಿಗೆ ಒಂದರಂತೆ ಸುವ್ಯವಸ್ಥಿತ ರೀತಿಯಲ್ಲಿ ಆಳವಾದ ಮ್ಯಾನ್‌ಹೋಲ್‌ಗಳನ್ನು ಕೂಡ ಅಳವಡಿಸಲಾಗಿದೆ' ಎಂದರು.

ಪಾಲಿಕೆ ಮಾಜಿ ಸದಸ್ಯರಾದ ಜಯಪಾಲ್, ಮಂಜುನಾಥ, ಮಂಜುನಾಥ ರಾಜು, ಬಿಜೆಪಿ ಮುಖಂಡರಾದ ಸುರೇಶಗೌಡ, ಡಾ.ವಾಸು ಇದ್ದರು.

ಮಹದೇವಪುರದಲ್ಲಿ ಕಣಕ್ಕಿಳಿಸಲು 'ಕೈ' ಪಡೆ ಚಿಂತನೆ

ಕಾಂಗ್ರೆಸ್‌ನತ್ತ ಮುಳಬಾಗಿಲು ಶಾಸಕ ನಾಗೇಶ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಲಾರ ಜಿಲ್ಲೆಯ ಮುಳಬಾಗಿಲಿನ ಪಕ್ಷೇತರ ಶಾಸಕ ಎಚ್.ನಾಗೇಶ್ ಅವರು ಕಾಂಗ್ರೆಸ್‌ನತ್ತ ಮುಖ ಮಾಡಿದ್ದಾರೆ. ಅವರನ್ನು ಬೆಂಗಳೂರಿನ ಮಹದೇವಪುರ ಕ್ಷೇತ್ರದಲ್ಲಿ ಕಣಕ್ಕೆ ಇಳಿಸಲು 'ಕೈ' ಪಾಳೆಯ ಚಿಂತನೆ ನಡೆಸಿದೆ.

ಈ ಸಂಬಂಧ ನಾಗೇಶ್ ಅವರು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಜತೆಗೆ ಮಾತುಕತೆ ನಡೆಸಿದ್ದಾರೆ. ನಾಗೇಶ್ ಅವರನ್ನು ಸೇರಿಸಿಕೊಳ್ಳಲು ಉಭಯ ನಾಯಕರು ಉತ್ಸುಕತೆ ತೋರಿದ್ದಾರೆ ಎಂದು ಮೂಲಗಳು ಹೇಳಿವೆ.

ನಾಗೇಶ್ ಅವರು ಮಹದೇವಪುರದ ವೈಟ್‌ಫೀಲ್ಡ್‌ನವರು. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನಿಸಿದ್ದರು. ಆದರೆ, ಟಿಕೆಟ್ ಸಿಕ್ಕಿರಲಿಲ್ಲ. ಹಾಗಾಗಿ, ಮುಳಬಾಗಿಲಿನಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದರು. ಮುಳಬಾಗಿಲಿನ ಕಾಂಗ್ರೆಸ್ ಶಾಸಕರಾಗಿದ್ದ ಕೊತ್ತೂರು ಮಂಜುನಾಥ್ ಅವರ ಜಾತಿ ಪ್ರಮಾಣಪತ್ರವನ್ನು ಹೈಕೋರ್ಟ್ 2018ರಲ್ಲಿ ಅಸಿಂಧುಗೊಳಿಸಿತ್ತು. ಹೀಗಾಗಿ, ಅವರಿಗೆ ಸ್ಪರ್ಧೆ ಮಾಡಲು ಆಗಿರಲಿಲ್ಲ. ಚುನಾವಣೆಯಲ್ಲಿ ನಾಗೇಶ್ ಅವರಿಗೆ ಕೊತ್ತೂರು ಬೆಂಬಲ ನೀಡಿದ್ದರು. ನಾಗೇಶ್ ಗೆಲುವು ಸಾಧಿಸಿದ್ದರು.

ಮುಳಬಾಗಿಲಿನಲ್ಲಿ ಈ ಸಲ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಗೆಲುವು ಕಷ್ಟ ಎಂದು ಭಾವಿಸಿರುವ ನಾಗೇಶ್ ಅವರು ಮಹದೇವಪುರದಲ್ಲಿ ಕಣಕ್ಕೆ ಇಳಿಯಲು ಒಲವು ತೋರಿದ್ದಾರೆ. 'ಸದ್ಯ ಯಾವುದೇ ಪಕ್ಷದ ಜತೆಗೆ ಗುರುತಿಸಿಕೊಂಡಿಲ್ಲ. ಸಂಕ್ರಾಂತಿ ನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ. ಮಹದೇವಪುರದಿಂದ ಸ್ಪರ್ಧಿಸಲು ಅಭಿಮಾನಿಗಳಿಂದ ಒತ್ತಡ ಇರುವುದು ನಿಜ' ಎಂದು ನಾಗೇಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಆಕಾಂಕ್ಷಿಗಳ ಅಸಮಾಧಾನ: ಮಹದೇವಪುರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಬಯಸಿ 12 ಮಂದಿ ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಆನಂದ ಕುಮಾರ್, ಕಳೆದ ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಲ್ಲೂರಹಳ್ಳಿ ನಾಗೇಶ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾವು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷೆ ಕಮಲಾಕ್ಷಿ ರಾಜಣ್ಣ ಸೇರಿದ್ದಾರೆ.

ಆನಂದ ಕುಮಾರ್ ಅವರು ದೇವನಹಳ್ಳಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಈ ಕ್ಷೇತ್ರದಲ್ಲಿ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಸ್ಪರ್ಧಿಸುವ ಸಾಧ್ಯತೆ ಇದೆ. ಹೀಗಾಗಿ, ಮಹದೇವಪುರ ಕ್ಷೇತ್ರಕ್ಕೆ ಅರ್ಜಿ ಸಲ್ಲಿಸುವಂತೆ ಆನಂದ ಕುಮಾರ್ ಅವರಿಗೆ ಸಂಸದ ಡಿ.ಕೆ. ಸುರೇಶ್ ಸೂಚಿಸಿದ್ದರು. ಆನಂದ ಕುಮಾರ್ ಅರ್ಜಿ ಸಲ್ಲಿಸಿ ಕಣಕ್ಕೆ ಇಳಿಯಲು ಸಿದ್ಧತೆ ನಡೆಸಿದ್ದರು.

ನಾಗೇಶ್ ಅವರ ಸೇರ್ಪಡೆ ಸಿದ್ಧತೆ ವಿಚಾರ ಗೊತ್ತಾಗುತ್ತಿದ್ದಂತೆ ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಹಾಗೂ ಆನಂದ ಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ಶನಿವಾರ ಭೇಟಿ ನೀಡಿ ಸಮಾಲೋಚಿಸಿದರು. 'ಮಹದೇವಪುರ ದೊಡ್ಡ ಕ್ಷೇತ್ರ. ನಾಗೇಶ್ ಬಂದರೆ ಅವರಿಗೆ ಟಿಕೆಟ್ ಕೊಡಲಾಗುವುದು. ಅವರು ಬರದಿದ್ದರೆ ನಿಮ್ಮನ್ನು ಪರಿಗಣಿಸಲಾಗುವುದು' ಎಂಬುದಾಗಿ ಆನಂದ ಕುಮಾರ್ ಅವರಿಗೆ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಕೆಪಿಸಿಸಿ ನಿಗದಿಪಡಿಸಿದಷ್ಟು ಶುಲ್ಕ ಕಟ್ಟಿ ಅರ್ಜಿ ಸಲ್ಲಿಸಿದ್ದೇವೆ. ನಮ್ಮ ಪೈಕಿ ಯಾರಿಗಾದರೂ ಟಿಕೆಟ್ ನೀಡಲಿ. ಹೊರಗಿನವರಿಗೆ ಟಿಕೆಟ್ ನೀಡುವುದಾದರೆ ಅರ್ಜಿ ಆಹ್ವಾನಿಸುವ ಅಗತ್ಯ ಏನಿತ್ತು' ಎಂದು ಆಕಾಂಕ್ಷಿಯೊಬ್ಬರು ಪ್ರಶ್ನಿಸಿದರು.

ವೈಕುಂಠ ಏಕಾದಶಿ: ಅಧ್ಯಾತ್ಮ ಸಾಧನೆಯ ಪರ್ವಕಾಲ

• ನವೀನ ಗಂಗೋತ್ರಿ



ಇಂದು ವೈಕುಂಠ ಏಕಾದಶಿ

ಏಕಾದಶಿ ಎನ್ನುವ ಹೆಸರೇ ಸೂಚಿಸುವಂತೆ ಇದು ಮಾಸವೊಂದರ ಪಕ್ಷದಲ್ಲಿನ ಹನ್ನೊಂದನೆಯ ದಿನಕ್ಕಿರುವ ಹೆಸರು. ವರ್ಷದ ಹನ್ನೆರಡು ಮಾಸಗಳಲ್ಲಿ ಒಟ್ಟು ಇಪ್ಪತ್ನಾಲ್ಕು ಏಕಾದಶೀ ತಿಥಿಗಳು ಸಂಭವಿಸುತ್ತವೆ; ಅವುಗಳಲ್ಲಿ ಪುಷ್ಯಮಾಸದ ಶುಕ್ಲಪಕ್ಷದ ಏಕಾದಶೀ ತಿಥಿಯನ್ನು ವೈಕುಂಠ ಏಕಾದಶಿ ಎನ್ನಲಾಗುತ್ತದೆ, ಮತ್ತು ಅದಕ್ಕೆ ಹೆಚ್ಚಿನ ಮಹತ್ತು ಇದೆ. ಸೌರಮಾನದ ಪ್ರಕಾರವಾದರೆ ಇದು ಧನುರ್ಮಾಸದ ಏಕಾದಶೀ. ಈ ಏಕಾದಶಿಯನ್ನು ಪುತ್ರದಾ (ಮಗನನ್ನು ಕೊಡುವಂಥ), ಮೋಕ್ಷದಾ (ಮೋಕ್ಷವನ್ನು ಕೊಡುವಂಥ) ಏಕಾದಶೀ ಎಂದೂ ಪರಂಪರೆಯಲ್ಲಿ ಗುರುತಿಸಲಾಗುತ್ತದೆ. ವೈಷ್ಣವ ಪರಂಪರೆಯಲ್ಲಂತೂ ವೈಕುಂಠ ಏಕಾದಶಿಗೆ ವರ್ಷದ ಎಲ್ಲ ಏಕಾದಶಿಗಳ ನಡುವೆ ಅಗ್ರಸ್ಥಾನ. ಇದಲ್ಲದೆ ಈ ಏಕಾದಶಿಯನ್ನು 'ತ್ರಿಕೋಟಿ' ಅಥವಾ 'ಮುಕ್ಕೋಟಿ ಏಕಾದಶಿ' ಎಂದು ಕರೆಯುವುದುಂಟು.

ವಿಷ್ಣುವಿನ ಮಹಿಮೆ ಮತ್ತು ಲೋಕೋದ್ಧಾರಕವಾದ ಅನುಗ್ರಹಗಳ ಕುರಿತಾಗಿ ಭಾಗವತಾದಿ ಪುರಾಣಗಳಲ್ಲಿ ಮತ್ತು ಮಹಾಭಾರತದಲ್ಲಿ ಸಾಕಷ್ಟು ಚಿಂತನೆಗಳು ಸಿಗುತ್ತವೆ. ವೈಕುಂಠವೆನ್ನುವುದು ವಿಷ್ಣುವಿನ ಧಾಮ, ಅಲ್ಲಿ ಕುಂಠತೆಗೆ (ವಿಕಲತೆ, ಜಾಡ್ಯ, ಕೊರತೆ) ಅವಕಾಶವೇ ಇಲ್ಲ. ಹಾಗಾಗಿಯೇ ಅದು ವೈಕುಂಠ (ವಿಗತಾ ಕುಂಠತಾ ಯಸ್ಮಾತ್). ಅದೇನಿದ್ದರೂ ಪೂರ್ಣತೆ, ನೈರ್ಮಲ್ಯ, ಸಮೃದ್ಧಿ ಮತ್ತು ಆನಂದದ ಬೀಡು. ಆ ಧಾಮದ ಅಧಿಪತಿಯೇ ಶ್ರೀಹರಿ ವಿಷ್ಣು. ವೈಕುಂಠ ಏಕಾದಶಿಯಾದರೋ ಪಾಪಗಳನ್ನೆಲ್ಲ ಕಳೆಯುವ ಮೂಲಕ ಮಾನವಾತ್ಮಕ್ಕೆ ವಿಷ್ಣುವಿನ ಈ ಧಾಮವನ್ನು ಸೇರುವುದಕ್ಕೆ ನೆರವಾಗುವ ದಿವಸವೆನ್ನುವುದು ಪರಂಪರೆಯ ಶ್ರದ್ಧೆ. ನಾರಾಯಣನ ಪರಂಧಾಮವಾದ ವೈಕುಂಠವನ್ನು ಸೇರಬೇಕೆನ್ನುವುದು ಪ್ರತಿಯೊಂದು ಜೀವದ ಗುರಿ ಮತ್ತು ಬಯಕೆ. ಅಲ್ಲಿ ಸೇರಿದ ಬಳಿಕ ಪುನರ್ಜನ್ಮವಾಗಲೀ, ಸಂಸಾರವಾಗಲೀ ಇರಲಾರದು. ಹಾಗಾಗಿ ವೈಕುಂಠದ ಹೆಸರಿನಲ್ಲಿಯೇ ಪ್ರಸಿದ್ಧವಾಗಿರುವ ಪೌಷಮಾಸದ ಶುಕ್ಲ ಏಕಾದಶಿಗೆ ಎಲ್ಲಿಲ್ಲದ ಮಹತ್ತು; ಮತ್ತಿದನ್ನು 'ಮೋಕ್ಷದಾ' ಎಂಬುದಾಗಿ ಕರೆದಿದ್ದೂ ಈ ಹಿನ್ನೆಲೆಯಲ್ಲಿಯೇ.

ಪರಮಕರುಣಾಮಯಿಯಾದ ಭಗವಾನ್ನಾರಾಯಣನು ಇಬ್ಬರು ಅಸುರರಿಗಾಗಿ ಈ ದಿನವೇ ತನ್ನ ವೈಕುಂಠದ ದ್ವಾರವನ್ನು ತೆರೆದನು. ಇದರ ಹಿನ್ನೆಲೆಯಲ್ಲಿ ವೈಕುಂಠ ಏಕಾದಶಿಯಂದು ಬಹುತೇಕ ವಿಷ್ಣುದೇವಾಲಯಗಳಲ್ಲಿ ವೈಕುಂಠದ್ವಾರವನ್ನು ನಿರ್ಮಿಸಲಾಗುತ್ತದೆ. ಈ ದಿನದಂದು ಭಕ್ತರು ದೇವರ ದರ್ಶನ ಮಾಡಿ ಈ ದ್ವಾರದ ಮೂಲಕ ಹಾಯ್ದುಬರುವ ಕ್ರಮ ರೂಢಿಯಲ್ಲಿದೆ. ಎಲ್ಲ ಏಕಾದಶಿಗಳಂದು ಉಪವಾಸವು ಪ್ರಶಸ್ತವಾಗಿದ್ದರೂ ವೈಕುಂಠ ಏಕಾದಶಿಯಂದು ನಡೆಸುವ ಉಪವಾಸವ್ರತವು ಇನ್ನುಳಿದ ಯಾವುದಕ್ಕೂ ಸಮನಾಗದು.

ಉಪವಾಸ ಎನ್ನುವುದು ಆಹಾರ ಸ್ವೀಕರಿಸದಿರುವ ಪ್ರಕ್ರಿಯೆ ಮಾತ್ರವಲ್ಲ, ಬದಲಾಗಿ ದಿವ್ಯಕ್ಕೆ ಹತ್ತಿರವಾಗಿ (ಉಪ – ಸಮೀಪ, ವಾಸ – ಇರುವಿಕೆ) ಇರುವ ಒಂದು ಆಧ್ಯಾತ್ಮಿಕ ಆಚರಣೆಯಾಗಿದೆ. ನಿರಾಹಾರರಾಗಿ ಉಳಿದು ಭಗವಚ್ಚಿಂತನೆಯಲ್ಲಿ ಮನಸನ್ನು ದಿನವಿಡೀ ನೆಲೆಗೊಳಿಸುವುದು ಮನೋದೈಹಿಕ ಶುದ್ಧಿಯನ್ನು ಕೊಡುತ್ತದೆ.

ಇನ್ನು ತಿರುಪತಿಯ ವೇಂಕಟಾದ್ರಿಯನ್ನು ಕಲಿಯುಗದಲ್ಲಿ ಭೂಮಿಯ ಮೇಲೆ ಇರುವ ವೈಕುಂಠವೆಂದೇ ಪರಿಗಣಿಸಲಾಗುತ್ತದೆ. ಏಕೆಂದರೆ ಪಾಪಗಳನ್ನೆಲ್ಲ ನಾಶಮಾಡುವ ವೆಂಕಟೇಶ್ವರನು ಸಾಕ್ಷಾತ್ತಾಗಿ ಅಲ್ಲಿ ನೆಲೆಸಿದ್ದಾನೆ. ಶ್ರೀಮನ್ನಾರಾಯಣನ ದಶಾವತಾರಗಳಿಗೆ ಒಂದೊಂದು ಕಥೆ ಇರುವಂತೆಯೇ ವೆಂಕಟೇಶ್ವರನಾಗಿ ಆತ ತಿರುಮಲೆಯಲ್ಲಿ ನಿಂತಿರುವುದಕ್ಕೂ ಕಥೆಗಳಿವೆ. ಕಾರಣಾಂತರಗಳಿಂದ ಭೂಮಿಗೆ ಬಂದು ನೆಲೆಸಿದ ಮಹಾಲಕ್ಷ್ಮೀಯನ್ನು ಅರಸುತ್ತ ಶ್ರೀಮನ್ನಾರಾಯಣನು ಭೂಮಿಗೆ ಬಂದು ಶೇಷಾಚಲದಲ್ಲಿ ನೆಲೆನಿಂತನೆಂದು ತಿಳಿಯುತ್ತದೆ. ಶ್ರೀನಿವಾಸ ಪದ್ಮಾವತೀ ಕಲ್ಯಾಣಕ್ಕಾಗಿ ಕುಬೇರನಲ್ಲಿ ಮಾಡಿದ ಸಾಲ ಮತ್ತು ಕಲಿ ಯುಗ ಮುಗಿಯುವುದರೊಳಗೆ ಅದನ್ನು ತೀರಿಸಬೇಕಾದ ಷರತ್ತು ಇತ್ಯಾದಿ ಕಥೆಗಳೂ ಪ್ರಸಿದ್ಧವಿವೆ. ಅದೇ ಕಾರಣಕ್ಕೆ ತಿರುಪತಿಯ ವೆಂಕಟೇಶ್ವರನಿಗೆ ಭಕ್ತಕೋಟಿಯಿಂದ ಸಂಪತ್ತಿನ ಹೊಳೆಯೇ ನಿರಂತರವಾಗಿ ಹರಿದುಬರುತ್ತದೆ. ಪ್ರಸ್ತುತ ತಿರುಪತಿಯಲ್ಲಿ ಮಾತ್ರವಲ್ಲದೆ ಜಗತ್ತಿನ ನಾನಾ ಭಾಗಗಳಲ್ಲಿ ವೇಂಕಟೇಶ್ವರನ ದೇವಾಲಯಗಳು ಸ್ಥಾಪಿತವಾಗಿವೆ, ಮತ್ತು ಅಲ್ಲೆಲ್ಲ ವೈಕುಂಠ ಏಕಾದಶೀ ದಿನದಂದು ವಿಶೇಷವಾದ ಪೂಜೆ ಹಾಗೂ ಭಕ್ತಸ್ತೋಮಕ್ಕೆ ಅನುಕೂಲವಾಗುವ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತದೆ. ❖

ಮರಣ ಪತ್ರ: ಲಿಂಬಾವಳಿ ಸೇರಿ 6 ಹೆಸರು

ಕಾರಿನಲ್ಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಗ್ಗಲೀಪುರ ಸಮೀಪದ ನೆಟ್ಟಗೆರೆ ಬಳಿ ಕಾರಿನಲ್ಲೇ ತಲೆಗೆ ಗುಂಡು ಹಾರಿಸಿಕೊಂಡು ಪ್ರದೀಪ್ (47) ಎಂಬುವರು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪ್ರದೀಪ್ ಬರೆದಿದ್ದಾರೆ ಎನ್ನಲಾದ 8 ಪುಟಗಳ ಮರಣ ಪತ್ರ ಕಾರಿನಲ್ಲಿ ಸಿಕ್ಕಿದೆ. ಶಾಸಕ ಅರವಿಂದ ಲಿಂಬಾವಳಿ, ಉದ್ಯಮಿಗಳಾದ ಕೆ. ಗೋಪಿ, ಸೋಮಯ್ಯ, ರಮೇಶ್ ರೆಡ್ಡಿ, ಜಯರಾಮ್ ರೆಡ್ಡಿ ಹಾಗೂ ರಾಘವ ಭಟ್ ಎಂಬುವರ ಹೆಸರುಗಳನ್ನು ಮೊಬೈಲ್ ಸಂಖ್ಯೆ ಸಹಿತವಾಗಿ ಉಲ್ಲೇಖಿಸಲಾಗಿದೆ.

'ಆರು ಜನರಿಂದ ನನಗೆ ಅನ್ಯಾಯವಾಗಿದೆ. ಇವರಿಗೆ ಶಿಕ್ಷೆ ಕೊಟ್ಟು, ನನಗೆ ನ್ಯಾಯ ಒದಗಿಸಬೇಕು' ಎಂಬುದು ಪತ್ರದಲ್ಲಿದೆ. ಇದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್ ಬಳಿಯ ಅಮಲೀಪುರದ ನಿವಾಸಿ ಪ್ರದೀಪ್, ಹೊಸ ವರ್ಷಾಚರಣೆ ಅಂಗವಾಗಿ ನೆಟ್ಟಗೆರೆ ಬಳಿಯ ರೆಸಾರ್ಟ್‌ಗೆ ಶನಿವಾರ ರಾತ್ರಿ ಕುಟುಂಬದೊಂದಿಗೆ ಬಂದಿದ್ದರು. ಭಾನುವಾರ ಸಂಜೆ ಆತ್ಮಹತ್ಯೆ ಮಾಡಿಕೊಂಡಿದ್ದು, ಕುಟುಂಬದವರ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಹಣ ಪಡೆದು ವಂಚನೆ: 'ಎಚ್‌ಎಸ್‌ಆರ್ ಲೇಔಟ್ ಬಳಿ ರೆಸಾರ್ಟ್‌ವೊಂದನ್ನು ನಿರ್ಮಿಸಲಾಗುತ್ತಿತ್ತು. ನನ್ನನ್ನು ಪಾಲುದಾರರರಾಗಿ ಮಾಡಿಕೊಳ್ಳುವುದಾಗಿ ಹೇಳಿದ್ದ ಉದ್ಯಮಿಗಳು, ₹ 1.5 ಕೋಟಿ ಪಡೆದಿದ್ದರು. ಮನೆ ಮಾರಿ, ಸಾಲ ಮಾಡಿ ಹಣ ಕೊಟ್ಟಿದ್ದೆ. ಆದರೆ, ಪಾಲುದಾರಿಕೆ ಹೆಸರಿನಲ್ಲಿ ವಂಚನೆ ಮಾಡಿದ್ದು, ನನಗೆ ಒಟ್ಟು ₹ 2.25 ಕೋಟಿ ಬರಬೇಕಿದೆ' ಎಂಬುದಾಗಿ ಪ್ರದೀಪ್ ಮರಣಪತ್ರದಲ್ಲಿ ಬರೆದಿರುವುದಾಗಿ ಮೂಲಗಳು ಹೇಳಿವೆ.

'ಅರವಿಂದ ಲಿಂಬಾವಳಿ ಉದ್ಯಮಿಗಳ ಪರವಾಗಿ ಸಂಧಾನಕ್ಕೆ ಪ್ರಯತ್ನ ಮಾಡಿದ್ದರು. ತಿಂಗಳಿಗೆ ಇಂತಿಷ್ಟು ಹಣ ನೀಡುವಂತೆ ಮಾತುಕತೆ ಆಗಿತ್ತು. ಆದರೆ, ನಂತರದಲ್ಲಿ ಒಂದಿಷ್ಟು ಹಣ ಮಾತ್ರ ಬಂತು. ಉಳಿದ ಹಣ ಬರಲಿಲ್ಲ. ಯಾರೂ ನನಗೆ ಸಹಾಯ ಮಾಡಲಿಲ್ಲ' ಎಂದೂ ಪತ್ರದಲ್ಲಿ ಪ್ರದೀಪ್ ಬರೆದಿದ್ದಾರೆಂದು ಗೊತ್ತಾಗಿದೆ.

ಹೊಸ ವರ್ಷಾಚರಣೆಗೆ ಬಂದಿದ್ದ ಪ್ರದೀಪ್: 'ಕಗ್ಗಲೀಪುರ ಸಮೀಪವಿರುವ ನೆಟ್ಟಗೆರೆ ಬಳಿ ಇರುವ ರೆಸಾರ್ಟ್‌ಗೆ ಶನಿವಾರ ರಾತ್ರಿ ಕುಟುಂಬದೊಂದಿಗೆ ಪ್ರದೀಪ್ ಬಂದಿದ್ದರು. ಬೆಳಿಗ್ಗೆ ಶಿರಾಗೆ ಹೋಗಬೇಕು ಎಂದು ರೆಸಾರ್ಟ್‌ನಿಂದ ಹೊರಹೋಗಿದ್ದ ಅವರು ಮನೆಯಲ್ಲಿ ಡೆತ್‌ನೋಟ್ ಬರೆದುಕೊಂಡಿದ್ದರು. ಪುನಃ ರೆಸಾರ್ಟ್‌ಗೆ ಬಂದು, ಭಾನುವಾರ ಸಂಜೆ ಮನೆಗೆ ವಾಪಸ್ ಆಗುವಾಗ ಚಲಿಸುತ್ತಿದ್ದ ಕಾರಿನಲ್ಲೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರು ರಸ್ತೆ ಬದಿಯ ಆವರಣದ ಗೋಡೆಗೆ ತಾಗಿ ನಿಂತಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿದ್ಧೇಶ್ವರ ಶ್ರೀ ಆರೋಗ್ಯದಲ್ಲಿ ಏರುಪೇರು: ಭಕ್ತರಲ್ಲಿ ಆತಂಕ

ಒಂದನೇ ಪುಟದಿಂದ

ಹರಕೆ, ಪೂಜೆ: 'ಶ್ರೀಗಳು ಬೇಗ ಗುಣಮುಖವಾಗಲಿ, ಮತ್ತೆ ಪ್ರವಚನ ನೀಡಲಿ' ಎಂದು ಭಕ್ತರು ಹರಕೆ ಹೊತ್ತು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀಗಳೊಂದಿಗೆ ಮೋದಿ ಮಾತು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ಗೋವಿಂದ ಕಾರಜೋಳ ಅವರು ಶನಿವಾರ ರಾತ್ರಿ ಆಶ್ರಮಕ್ಕೆ ಭೇಟಿ ನೀಡಿ ಶ್ರೀಗಳ ದರ್ಶನ ಪಡೆದು, ಆರೋಗ್ಯ ವಿಚಾರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, 'ಪ್ರಲ್ಹಾದ ಜೋಶಿ ಅವರು ಪ್ರಧಾನಿಗೆ ಕರೆ ಮಾಡಿ ಸ್ವಾಮೀಜಿಗಳೊಂದಿಗೆ ಮಾತನಾಡಿಸಿದರು. ಈ ಸಂದರ್ಭದಲ್ಲಿ ಪ್ರಧಾನಿ ಅವರು ಹೆಚ್ಚಿನ ಚಿಕಿತ್ಸೆ ಒದಗಿಸುವ ಬಗ್ಗೆ ತಿಳಿಸಿದಾಗ ಶ್ರೀಗಳು ಕೈಮುಗಿದು ಚಿಕಿತ್ಸೆ ನಿರಾಕರಿಸಿದರು' ಎಂದು ಹೇಳಿದರು.

'ರಾಜ್ಯ ಸರ್ಕಾರ ಶ್ರೀಗಳಿಗೆ ಅಗತ್ಯ ಚಿಕಿತ್ಸೆ ಒದಗಿಸಲು ವ್ಯವಸ್ಥೆ ಮಾಡಲು ಸಿದ್ಧವಿದೆ. ಆದರೆ, ಶ್ರೀಗಳು ಯಾವುದೇ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪುತ್ತಿಲ್ಲ' ಎಂದು ತಿಳಿಸಿದರು.

ಪ್ರಮುಖರ ಭೇಟಿ: ಆಶ್ರಮಕ್ಕೆ ಭಾನುವಾರ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೊಲ್ಲಾಪುರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಮಂಡ್ಯ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಯಶವಂತರಾಯಗೌಡ ಪಾಟೀಲ, ಶಿವಾನಂದ ಪಾಟೀಲ, ದೇವಾನಂದ ಚವ್ಹಾಣ, ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಸೇರಿದಂತೆ ಅನೇಕ ಗಣ್ಯರು ಭೇಟಿ ನೀಡಿ ಶ್ರೀಗಳ ಯೋಗಕ್ಷೇಮ ವಿಚಾರಿಸಿದರು.



ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ ಅವರ ಆರೋಗ್ಯದಲ್ಲಿ ಭಾನುವಾರ ತೀವ್ರ ಏರುಪೇರಾದ ಸುದ್ದಿ ತಿಳಿದು ಆಶ್ರಮಕ್ಕೆ ಧಾವಿಸಿದ್ದ ಅಪಾರ ಸಂಖ್ಯೆಯ ಭಕ್ತರು –ಪ್ರಜಾವಾಣಿ ಚಿತ್ರ

'ಬೌದ್ಧಧರ್ಮದತ್ತ ಚೀನಾದಲ್ಲಿ ಆಸಕ್ತಿ'

ಬೋಧಗಯಾ, ಬಿಹಾರ (ಪಿಟಿಐ): ಬೌದ್ಧ ಧರ್ಮ ಮತ್ತು ಅದರ ಅನುಯಾಯಿಗಳ ಮೇಲೆ ಹಲವು ವರ್ಷ ನಿಗ್ರಹ ಮತ್ತು ದಬ್ಬಾಳಿಕೆ ನಡೆದ ನಂತರವು ಚೀನಾದಲ್ಲಿ ಬೌದ್ಧ ಧರ್ಮ ಕುರಿತ ಆಸಕ್ತಿ ಹೆಚ್ಚುತ್ತಿದೆ ಎಂದು ಟಿಬೆಟಿಯನ್ ಧರ್ಮಗುರು ದಲೈಲಾಮಾ ಹೇಳಿದರು.

ಬೋಧಗಯಾದಲ್ಲಿ ನಡೆದ ಬೌದ್ಧರ ಸಾಂಪ್ರದಾಯಿಕ ಪ್ರಾರ್ಥನೆ ಸಂದರ್ಭದಲ್ಲಿ ಬೌದ್ಧ ಧರ್ಮೀಯರು, ಬೆಂಬಲಿಗರನ್ನು ಉದ್ದೇಶಿಸಿ 87 ವರ್ಷ ವಯಸ್ಸಿನ ದಲೈಲಾಮಾ ಅವರು ಮಾತನಾಡಿದರು.

ಟಿಬೆಟ್‌ನಲ್ಲಿ ಬೌದ್ಧ ಸಂಪ್ರದಾಯ ಈಶಾನ್ಯದ ಜನರ ಗಮನಸೆಳೆಯುತ್ತಿದೆ. ಇಂದು ಸಿದ್ಧಾಂತ ಮತ್ತು ಚಿಂತನೆಗಳು ಜಗತ್ತಿನೆಲ್ಲೆಡೆ ಹರಡಿವೆ ಎಂದರು.

ಬಸ್‌ಗೆ ಕಾರು ಡಿಕ್ಕಿ: ನಾಲ್ವರ ಸಾವು

ಅಂಕೋಲಾ (ಉತ್ತರ ಕನ್ನಡ): ತಾಲ್ಲೂಕಿನ ಬಾಳೆಗುಳಿ ಕ್ರಾಸ್ ಬಳಿ ಭಾನುವಾರ ಸಂಜೆ ಸಾರಿಗೆ ಸಂಸ್ಥೆಯ ಬಸ್‌ಗೆ ಕಾರು ಡಿಕ್ಕಿಯಾಗಿ ಕಾರಿನಲ್ಲಿದ್ದ ನಾಲ್ವರು ಪ್ರವಾಸಿಗರು ಮೃತಪಟ್ಟಿದ್ದಾರೆ.

ಮೃತರು ತಮಿಳುನಾಡು ಮೂಲದವರಾಗಿದ್ದಾರೆ. ಅವರನ್ನು ಅರುಣ್ ಪಾಂಡ್ಯನ್, ನಿಪುಲ್, ಮಹ್ಮದ್ ಬಿಲ್ಲಾಲ್ ಮತ್ತು ಶೇಖರನ್ ಎಂದು ಗುರುತಿಸಲಾಗಿದೆ. ಕಾರಿನಲ್ಲಿದ್ದ ಮತ್ತೊಬ್ಬ ಪ್ರವಾಸಿಗ ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಹೊಸ ವರ್ಷಾಚರಣೆ ನಿಮಿತ್ತ ಗೋವಾಕ್ಕೆ ತೆರಳಿದ್ದ ಈ ಪ್ರವಾಸಿಗರು ಅಲ್ಲಿಂದ ಗೋಕರ್ಣಕ್ಕೆ ತೆರಳುತ್ತಿದ್ದರು. ಹೆದ್ದಾರಿ ಮಧ್ಯದ ವಿಭಜಕಕ್ಕೆ ಬಡಿದು ತದಡಿಯಿಂದ ಹುಬ್ಬಳ್ಳಿಯತ್ತ ಸಂಚರಿಸುತ್ತಿದ್ದ ಬಸ್‌ಗೆ ಡಿಕ್ಕಿಯಾಗಿದೆ' ಎಂದು ಅಂಕೋಲಾ ಪೊಲೀಸರು ತಿಳಿಸಿದ್ದಾರೆ.



ವಿಜಯೋತ್ಸವ

ಕಳಸಾ–ಬಂಡೂರಿ ಯೋಜನೆ ಡಿಪಿಆರ್‌ಗೆ ಅನುಮೋದನೆ ಸಿಕ್ಕಿದ್ದರಿಂದ, ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಭಾನುವಾರ ಬಿಜೆಪಿಯಿಂದ ವಿಜಯೋತ್ಸವ ಆಚರಿಸಲಾಯಿತು -ಪ್ರಜಾವಾಣಿ ಚಿತ್ರ

'ಕನ್ನಡ ಮಸೂದೆ: ಸುಗ್ರೀವಾಜ್ಞೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿಯಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ-2022'ರ ಕುರಿತು ಚರ್ಚೆಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಸುಗ್ರೀವಾಜ್ಞೆಯ ಮೂಲಕ ಈ ಮಸೂದೆಯನ್ನು ಕಾನೂನು ಮಾಡಲು ಪ್ರಯತ್ನಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಭಾನುವಾರ ಇಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರಿಂದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆ ಸ್ವೀಕರಿಸಿ, ಮಾತನಾಡಿದರು.

'ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ನಾಡಿನ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚೆಗಳು ನಡೆದಿವೆ. ಕನ್ನಡ ಮಸೂದೆಯ ಚರ್ಚೆ ಸಾಧ್ಯವಾಗಲಿಲ್ಲ' ಎಂದ ಅವರು, 'ಸಾಹಿತ್ಯ ಸಮ್ಮೇಳನವು ಕನ್ನಡದ ಹಾಗೂ ಕನ್ನಡಿಗರ ಅಸ್ಮಿತೆಯ ಹಬ್ಬವಾಗಬೇಕು. ಈ ಸಂಬಂಧ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರಾಜ್ಯ ಸರ್ಕಾರ ಅವಿರತವಾಗಿ ಕೆಲಸ ಮಾಡುತ್ತಿದೆ. ನಾಡಿನ ಎಲ್ಲ ಕನ್ನಡಿಗರು ಅಕ್ಷರ ಜಾತ್ರೆಯಲ್ಲಿ ಭಾಗವಹಿಸಿ, ಸಮ್ಮೇಳನದ ರಂಗನ್ನು ಹೆಚ್ಚಿಸಬೇಕು' ಎಂದು ಮನವಿ ಮಾಡಿಕೊಂಡರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ನಾಡಿನ ಸಾಹಿತಿಗಳು, ಲೇಖಕರು, ಹೋರಾಟಗಾರರು, ಸಂಘಟಕರು, ಜನಪದ ಹಾಗೂ ಸಾಂಸ್ಕೃತಿಕ ಲೋಕದ ದಿಗ್ಗಜರು, ಜನಪ್ರತಿನಿಧಿಗಳು ಹಾಗೂ ಎಲ್ಲಾ ಸಮಾಜದ ಮುಖಂಡರಿಗೆ ಪರಿಷತ್ತು ಗೌರವ ಪೂರ್ವಕವಾಗಿ ಆಹ್ವಾನ ನೀಡುತ್ತಿದೆ. ಹಾವೇರಿಯ ಸಮ್ಮೇಳನಕ್ಕೆ ಈಗಾಗಲೇ ದಿನಗಣನೆ ಆರಂಭವಾಗಿದ್ದು, ಎಲ್ಲಾ ಸಿದ್ಧತೆಗಳು ಪೂರ್ಣಗೊಳ್ಳುತ್ತಿದೆ' ಎಂದು ತಿಳಿಸಿದರು.

ಕಳಸಾ ತಿರುವು: ಅರಣ್ಯ ಇಲಾಖೆ ಒಪ್ಪಿಗೆ

ಒಂದನೇ ಪುಟದಿಂದ

ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ 2 ಅಡಿಯಲ್ಲಿ ಈ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ಉಪ ಮಹಾನಿರ್ದೇಶಕರಿಗೆ (ಕೇಂದ್ರ) ಶುಕ್ರವಾರವೇ ಪ್ರಸ್ತಾವನೆ ಸಲ್ಲಿಸಿದ್ದಾರೆ.

40 ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಪರಿಸರ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯಿಂದ ಅನುಮತಿ ಪಡೆದರೆ ಸಾಕು. ಹೀಗಾಗಿ, ಕಳಸಾ ಹಾಗೂ ಬಂಡೂರಿ ಯೋಜನೆಗೆ ಪ್ರತ್ಯೇಕವಾಗಿ ಪ್ರಸ್ತಾವಗಳನ್ನು ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ಬಂಡೂರಿ ಯೋಜನೆಯ ಪ್ರಸ್ತಾವವನ್ನು ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾಗುವುದು. ಪ್ರಾದೇಶಿಕ ಕಚೇರಿಯಿಂದ ತಿಂಗಳೊಳಗೆ ಒಪ್ಪಿಗೆ ಸಿಗುವ ವಿಶ್ವಾಸ ಇದೆ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

33 ಹೆಕ್ಟೇರ್‌ನಲ್ಲಿ 11,240 ಮರಗಳು

ಯೋಜನೆಗೆ ಬಳಸಿಕೊಳ್ಳಲು ಉದ್ದೇಶಿಸಿರುವ ಮೀಸಲು ಅರಣ್ಯದಲ್ಲಿ ವಿವಿಧ ಜಾತಿಯ 11,240 ಮರಗಳಿವೆ ಎಂದು ಡಿಸಿಎಫ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

- ಈ ಅರಣ್ಯದ ಸುತ್ತಮುತ್ತ ಹುಲಿ, ಚಿರತೆ, ಕರಡಿ, ಜಿಂಕೆ ಸೇರಿದಂತೆ ಹಲವು ಪ್ರಾಣಿಗಳಿವೆ. ಇಲ್ಲಿ ಅಪರೂಪದ ಹಾಗೂ ಅಳಿವಿನಂಚಿನಲ್ಲಿರುವ ಮರ ಗಿಡಗಳು ಇವೆ.
- ಈ ಅರಣ್ಯವು ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಧಾಮ, ಹುಲಿ ಸಂರಕ್ಷಿತ ಪ್ರದೇಶ, ಆನೆ ಕಾರಿಡಾರ್, ವನ್ಯಜೀವಿ ವಲಸೆ ಕಾರಿಡಾರ್‌ನ ಭಾಗ ಅಲ್ಲ.
- ಈ ಯೋಜನೆಯು ಭೀಮಘಡ ವನ್ಯಜೀವಿ ಧಾಮದಿಂದ 5–6 ಕಿ.ಮೀ. ದೂರದಲ್ಲಿದೆ.
- ಅರಣ್ಯ ಸಂರಕ್ಷಣಾ ಕಾಯ್ದೆ 1980 ಅಡಿಯಲ್ಲಿ ಯಾವುದೇ ಉಲ್ಲಂಘನೆ ಆಗಿಲ್ಲ.
- ಇಲ್ಲಿ ರಕ್ಷಣಾ ಭೂಮಿ, ಪುರಾತತ್ವ ಹಾಗೂ ಪಾರಂಪರಿಕ ತಾಣ ಇಲ್ಲ.
- ಈ ಯೋಜನೆಗಾಗಿ ಬೇಕಿರುವ ಅರಣ್ಯ ಭೂಮಿ ಕನಿಷ್ಠ ಪ್ರಮಾಣದ್ದು.

ನುಡಿಜಾತ್ರೆಗೆ ಏಲಕ್ಕಿ ಮಾಲೆ ಕಂಪು

ಒಂದನೇ ಪುಟದಿಂದ...

ತಮಿಳುನಾಡಿನಿಂದ ಏಲಕ್ಕಿ ರವಾನೆ: ತಮಿಳುನಾಡು ಮತ್ತು ಸಕಲೇಶಪುರ, ಮೂಡಿಗೆರೆಯಿಂದ ಗುಣಮಟ್ಟದ ಏಲಕ್ಕಿ ತರಿಸಿ, 8 ದಿನಗಳವರೆಗೆ ಬ್ಲೀಚಿಂಗ್ ಪೌಡರ್ ಬೆರಸಿದ ಲವಣಯುಕ್ತ ನೀರಿನಲ್ಲಿ ತೊಳೆಯಲಾಗುತ್ತದೆ. ಏಲಕ್ಕಿ ಕಾಳುಗಳನ್ನು 24 ಗಂಟೆ ಹೊಗೆಯಾಡಿಸಲಾಗುತ್ತದೆ. ನಂತರ ತೊಳೆದು ಒಣಗಿಸಲಾಗುತ್ತದೆ. ಇದರಿಂದ ಏಲಕ್ಕಿಗಳು ಬಿಳುಪಾಗಿ ಹೊಳೆಯುತ್ತವೆ. ರೇಷ್ಮೆ ದಾರ, ಉಣ್ಣೆಯ ಅಲಂಕಾರಿಕ ಸಾಮಗ್ರಿ, ಬಂಗಾರ ವರ್ಣದ ಮಣಿಗಳು ಮುಂತಾದ ಸಾಮಗ್ರಿ ಬಳಸಿ ಚೆಂದನೆಯ ಏಲಕ್ಕಿ ಮಾಲೆ ತಯಾರಿಸುತ್ತೇವೆ' ಎಂದು ವ್ಯಾಪಾರಿ ಜಹೀರ್ ಸಾಹೇಬ್ ಪಟವೇಗಾರ್ ವಿವರಿಸಿದರು.

ಮಹದಾಯಿ: ಕಾಂಗ್ರೆಸ್ ಆರೋಪಕ್ಕೆ ಬೊಮ್ಮಾಯಿ ತಿರುಗೇಟು

ಹುಬ್ಬಳ್ಳಿ: 'ಮಹದಾಯಿ ಯೋಜನೆಯ ಡಿಪಿಆರ್‌ಗೆ ಕೇಂದ್ರ ಸರ್ಕಾರ ಅನುಮತಿ ನೀಡಿರುವ ಪ್ರತಿಯ ಕೊನೆಯಲ್ಲಿ ಸಹಿ ಮತ್ತು ದಿನಾಂಕವಿದೆ. ಕಾಂಗ್ರೆಸ್ ಮುಖಂಡರು ಅದನ್ನು ಪೂರ್ಣ ಓದಿಲ್ಲ ಎನ್ನುವುದು ಸ್ಪಷ್ಟ' ಎಂದು 'ದಿನಾಂಕವಿಲ್ಲದ ಡಿಪಿಆರ್' ಎಂದು ಟೀಕಿಸಿದ ಕಾಂಗ್ರೆಸ್ ಮುಖಂಡರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

'ಮಹದಾಯಿ ವಿಷಯಕ್ಕಾಗಿ ನಾವು ಮತ್ತು ಕಾಂಗ್ರೆಸ್ 25 ವರ್ಷಗಳಿಂದ ಹೋರಾಟ ನಡೆಸುತ್ತ ಬಂದಿದ್ದೇವೆ. ಅಷ್ಟು ವರ್ಷಗಳ ಹೋರಾಟಕ್ಕೆ ಇದೀಗ ಜಯ ಸಿಕ್ಕಿದೆ. ಪ್ರತಿಯೊಂದರಲ್ಲೂ ಲೋಪ ಹುಡುಕುವುದು ಅವರ ಮನಸ್ಥಿತಿಯ ದ್ಯೋತಕ. ಅವರ ಟೀಕೆ, ಟಿಪ್ಪಣಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಮ್ಮದಾರಿ ಸ್ಪಷ್ಟವಾಗಿದ್ದು, ಶೀಘ್ರ ಟೆಂಡರ್ ಕರೆದು ಕಾಮಗಾರಿ ಆರಂಭಿಸುತ್ತೇವೆ' ಎಂದರು.

'ರಾತ್ರೋರಾತ್ರಿ ಡಿಪಿಆರ್‌ಗೆ ಅನುಮತಿ'

ಹುಬ್ಬಳ್ಳಿ: 'ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿಯೇ ಮಹದಾಯಿ ಡಿಪಿಆರ್ ಸಿದ್ಧವಾಗಿತ್ತು. ನಾವು ಹೋರಾಟ ಮಾಡುತ್ತೇವೆ ಎಂದಾಗ, ತರಾತುರಿಯಲ್ಲಿ ಪರಿಷ್ಕೃತ ಡಿಪಿಆರ್‌ಗೆ ಅನುಮತಿ ಪಡೆದಿದ್ದೇವೆ ಎಂದು ಹೇಳುತ್ತಿದ್ದಾರೆ. ಅರಣ್ಯ ಮತ್ತು ಪರಿಸರ ಇಲಾಖೆಯ ಅನುಮತಿ ಇನ್ನೂ ಪಡೆದಿಲ್ಲ. ಮೊದಲು ಆ ಕೆಲಸ ಪೂರ್ಣಗೊಳಿಸಿ, ಯೋಜನೆ ಅನುಷ್ಠಾನಕ್ಕೆ ಟೆಂಡರ್ ಕರೆದು ಕಾಮಗಾರಿ ನಡೆಸಲಿ' ಎಂದು ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಸವಾಲು ಹಾಕಿದರು. ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜನರು ತಮ್ಮ ವಿರುದ್ಧ ನಿಲ್ಲುತ್ತಾರೆ ಎಂದು ಭಯಗೊಂಡು, ಬಿಜೆಪಿ ರಾತ್ರೋರಾತ್ರಿ ಮಹದಾಯಿ ಯೋಜನೆಯ ಪರಿಷ್ಕೃತ ಡಿಪಿಆರ್‌ಗೆ ಅನುಮತಿ ಪಡೆದಿದ್ದೇವೆ ಎನ್ನುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

ಒಳನೋಟ – ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3WEVI7F

ಸಮತಾ ಸೈನಿಕ ದಳದಿಂದ 205ನೇ ಭೀಮಾ– ಕೋರೆಗಾಂವ್ ವಿಜಯೋತ್ಸವ

‘ಶೂದ್ರರ ಪ್ರಗತಿಗೆ ಕೋರೆಗಾಂವ್ ಯುದ್ಧವೇ ಬುನಾದಿ’

ಪ್ರಜಾವಾಣಿ ವಾರ್ತೆ



‘205ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಹಾಗೂ ಧ್ವಜವಂದನಾ ಕಾರ್ಯಕ್ರಮ’ದಲ್ಲಿ (ಎಡದಿಂದ) ಎಸ್‌.ಸಿ/ಎಸ್‌.ಟಿ ಸರ್ಕಾರಿ ನೌಕರರ ಸಮನ್ವಯ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಡಿ. ಶಿವಶಂಕರ್, ಬಹುಜನ ದ್ರಾವಿಡ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೀವನ್ ಕುಮಾರ್ ಮಲ್ಲ, ಸಂವಿಧಾನ ಸಂರಕ್ಷಣಾ ಮಹಾಒಕ್ಕೂಟದ ಮುಖಂಡ ಬಿ. ಗೋಪಾಲ್, ಧಮ್ಮ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಬಂತೆ ಬೋಧಿ ಪ್ರಜ್ಞಾನಂದ ಅವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ-ಕರ್ನಾಟಕ ಮತ್ತು ಸಮತಾ ಸೈನಿಕ ದಳದಿಂದ 205ನೇ ಭೀಮಾ– ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ನಡೆಯಿತು.

‘ದೇಶದಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗೆ ಮತ್ತು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಶೂದ್ರ ಸಮುದಾಯಗಳು ಪ್ರಗತಿ ಸಾಧಿಸಲು ಭೀಮಾ– ಕೋರೆಗಾಂವ್ ಯುದ್ಧವೇ ಬುನಾದಿಯಾಗಿದೆ’ ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ-ಕರ್ನಾಟಕದ ಮುಖಂಡ ಬಿ. ಗೋಪಾಲ್ ಹೇಳಿದರು.

‘ಭೀಮಾ ಕೋರೆಗಾಂವ್ ಯುದ್ಧ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವ ಘಟನೆ. 1818 ಜನವರಿ 1ರಂದು ಮನುವಾದಿ ಪೇಶ್ವೆ ಬಾಜಿರಾಯನ 28 ಸಾವಿರ ಸೈನಿಕರನ್ನು ಕೇವಲ 500 ಮಹರ್ ಸೈನಿಕರು 12 ಗಂಟೆಯಲ್ಲಿ ಸೋಲಿಸಿ ಶೋಷಿತರ ಪರ ಧ್ವನಿ ಎತ್ತಿದ್ದರು. ಹುತಾತ್ಮರಾಗಿದ್ದ ಸೈನಿಕರ ನೆನಪಿಗಾಗಿ ಬ್ರಿಟಿಷರು ಕೋರೆಗಾಂವ್‌ನಲ್ಲಿ ಸ್ಮಾರಕ ನಿರ್ಮಿಸಿದ್ದರು.

1927ರಿಂದ ಪ್ರತಿವರ್ಷ ಅಂಬೇಡ್ಕರ್ ಜ.1ರಂದು ಅಲ್ಲಿಗೆ ಹೋಗಿ ನಮನ ಸಲ್ಲಿಸುತ್ತಿದ್ದರು’ ಎಂದು ಮಾಹಿತಿ ನೀಡಿದರು.

‘ಭಾರತದ ಮೂಲ ನಿವಾಸಿ ಸಮುದಾಯಗಳಲ್ಲಿ ಹೊಸ ಭರವಸೆ ಮತ್ತು ಉತ್ಸಾಹ ತುಂಬಲು ಈ ವಿಜಯೋತ್ಸವವೇ ಸ್ಫೂರ್ತಿ. ಇದರ ಸಂಕೇತವಾಗಿ ಅಸ್ಪೃಶ್ಯರು ಸೇರಿ ದೇಶದ ಎಲ್ಲಾ ವರ್ಗದ ಜನ ಸ್ವಾಭಿಮಾನದಿಂದ ಜೀವನ ನಡೆಸುತ್ತಿದ್ದಾರೆ. ನಾವು ಆಳುವ ಸಮಾಜವಾಗಿ ದೌರ್ಜನ್ಯ ದಬ್ಬಾಳಿಕೆಯನ್ನು ಪ್ರತಿಭಟಿಸಬೇಕಿದೆ’ ಎಂದು ಹೇಳಿದರು.

ಭೀಮಾ– ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಪಥಸಂಚಲನ ನಡೆಯಿತು.

ನಂತರ ಧ್ವಜವಂದನೆ ಸೇರಿ ಪ್ರತಿಜ್ಞಾ ವಿಧಿ ಮತ್ತು ಭೀಮ ಸಂದೇಶ ಕಾರ್ಯಕ್ರಮ ನಡೆಯಿತು.



ಬಾತುಕೋಳಿ ಶಿಸ್ತು ಬಸವನಗುಡಿ ರಸ್ತೆ ಮಾರ್ಗದಲ್ಲಿ ಬಾತುಕೋಳಿ ಮರಿಗಳು ಗುಂಪಾಗಿ ಶಿಸ್ತಿನಿಂದ ಸಾಗುತ್ತಿದ್ದುದು ಭಾನುವಾರ ಕಂಡು ಬಂತು -ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಸಿನ್ಹಾ ಐಎಎಫ್ ಪಶ್ಚಿಮ ಕಮಾಂಡ್ ಮುಖ್ಯಸ್ಥ

ನವದೆಹಲಿ (ಪಿಟಿಐ): ಏರ್ ಮಾರ್ಷಲ್ ಪಂಕಜ್ ಮೋಹನ್ ಸಿನ್ಹಾ ಅವರು ಭಾರತೀಯ ವಾಯುಪಡೆಯ (ಐಎಎಫ್) ಪಶ್ಚಿಮ ಏರ್ ಕಮಾಂಡ್‌ನ ಕಮಾಂಡರ್ ಇನ್ ಚೀಫ್ ಆಗಿ ಭಾನುವಾರ ಅಧಿಕಾರ ಸ್ವೀಕರಿಸಿದರು

ಏರ್ ಮಾರ್ಷಲ್ ಎಸ್.ಪ್ರಭಾಕರನ್ ಅವರ ನಿವೃತ್ತಿಯಿಂದ ತೆರವಾಗಿದ್ದ ಸ್ಥಾನಕ್ಕೆ ಪಂಕಜ್ ನೇಮಕವಾಗಿದ್ದಾರೆ. ಪುಣೆಯ ಎನ್‌ಡಿಎ ಪದವೀಧರರಾಗಿರುವ ಪಂಕಜ್ ಅವರು 37 ವರ್ಷಗಳ ವೃತ್ತಿಯಲ್ಲಿ ಹಲವು ಪ್ರಮುಖ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ.

ಸಾಂಸ್ಕೃತಿಕ ಚಿಂತಕ ಕೊನ್ರಾಡ್ ಎಲ್ಸ್ಟ್ ಬೇಸರ

‘ಹಿಂದೂ ಧರ್ಮದ ಮೇಲೆ ಆಕ್ರಮಣ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಜಿ.ಬಿ. ಹರೀಶ್ ಅವರ ‘ಬೌದ್ಧಿಕ ಕ್ಷತ್ರಿಯರು’ ಕೃತಿಯನ್ನು ಪ್ರೊ. ಎಂ.ಕೊಟ್ರೇಶ್ ಲೋಕಾರ್ಪಣೆ ಮಾಡಿದರು. ಕೊನ್ರಾಡ್ ಎಲ್ಸ್ಟ್ ಹಾಗೂ ಅಂಕಣಕಾರ ರೋಹಿತ್ ಚಕ್ರತೀರ್ಥ ಇದ್ದಾರೆ. –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಸನಾತನ ಹಿಂದೂ ಧರ್ಮವು ಮೌಲಿಕ ತತ್ವಗಳ ಆಗರವಾಗಿದೆ. ಈ ಧರ್ಮದ ಮೇಲೆ ನಿರಂತರ ಸಾಂಸ್ಕೃತಿಕ ಆಕ್ರಮಣ ನಡೆಯುತ್ತಿದೆ’ ಎಂದು ಸಾಂಸ್ಕೃತಿಕ ಚಿಂತಕ ಕೊನ್ರಾಡ್ ಎಲ್ಸ್ಟ್ ಬೇಸರ ವ್ಯಕ್ತಪಡಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಪ್ರೊ.ಎಂ.ವಿ. ಕೃಷ್ಣರಾವ್ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ‘ಹಿಂದೂ ಧರ್ಮ ಮತ್ತು ಸಾಂಸ್ಕೃತಿಕ ಯುದ್ಧಗಳು’ ಎಂಬ ವಿಷಯದ ಬಗ್ಗೆ ಮಾತನಾಡಿದರು.

‘ನೈತಿಕ ಮೌಲ್ಯಗಳು ಸದಾಕಾಲ ಧರ್ಮದ ಅಡಿಪಾಯವಾಗಿರಬೇಕು. ಹಿಂದೂ ಧರ್ಮದ ಮೇಲೆ ಅನೇಕ ಶತಮಾನಗಳಿಂದ ಸಾಂಸ್ಕೃತಿಕ ಮತ್ತು ಬೌದ್ಧಿಕ ದಾಳಿಗಳು ನಡೆಯುತ್ತಿವೆ. ಈ ದಾಳಿಗಳನ್ನು ಸಮರ್ಥವಾಗಿ ಹಿಂದೂ ಧರ್ಮ ಎದುರಿಸಿದೆ. ಭಾರತೀಯ ಸಮಾಜದಲ್ಲಿ ಕಾಲಕಾಲಕ್ಕೆ ಪ್ರಚಲಿತವಿರುವ ಆಚರಣೆಗಳು ಆಯಾ ಕಾಲಘಟ್ಟಕ್ಕೆ ಪ್ರಸ್ತುತವಾಗಿದ್ದರೂ, ಅವುಗಳನ್ನು ಪ್ರಶ್ನಿಸುವ ಅಧಿಕಾರವನ್ನು ಭಾರತೀಯ ಸಮಾಜ ಮತ್ತು ಹಿಂದೂ ಧರ್ಮ ಜಗತ್ತಿಗೆ ನೀಡಿವೆ’ ಎಂದು ಹೇಳಿದರು.

‘ಸಮಕಾಲೀನ ಜಗತ್ತಿನಲ್ಲಿರುವ ಅನೇಕ ಧರ್ಮಗಳು ಈ ಪ್ರಶ್ನಿಸುವ ಅಧಿಕಾರವನ್ನು ಜನರಿಗೆ ನೀಡಿಲ್ಲ. ಈ ಕಾರಣ ಆ ಧರ್ಮಗಳಲ್ಲಿ ಹೆಚ್ಚು ಜಟಿಲತೆ ಕಂಡುಬರುತ್ತಿದೆ. ಈ ಮೂಲಕ ಅವುಗಳಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಸಹ ಕ್ರಮೇಣ ನಾಶವಾಗುತ್ತಿವೆ. ಇದು ಕಳವಳಕಾರಿ ಬೆಳವಣಿಗೆ ಆಗಿದೆ. ಆದ್ದರಿಂದ, ಇಂದಿನ ಕಾಲದಲ್ಲಿ ನಮ್ಮ ಸಾಂಸ್ಕೃತಿಕ ಆಚರಣೆಗಳನ್ನು ಮರುವ್ಯಾಖ್ಯಾನಿಸುವ ಅವಶ್ಯಕತೆ ಇದೆ’ ಎಂದರು.

ಇತಿಹಾಸಕಾರ ಜಿ.ಬಿ. ಹರೀಶ್ ಅವರ ‘ಬೌದ್ಧಿಕ ಕ್ಷತ್ರಿಯರು’ ಪುಸ್ತಕವನ್ನು ದಿ ಮಿಥಿಕ್ ಸೊಸೈಟಿಯ ಉಪಾಧ್ಯಕ್ಷ ಪ್ರೊ. ಎಂ.ಕೊಟ್ರೇಶ್ ಲೋಕಾರ್ಪಣೆ ಮಾಡಿದರು. ಮಿಥಿಕ್ ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರಾದ ಪಿ.ಎಂ. ಗಿರಿಧರ್ ಉಪಾಧ್ಯಾಯ, ಎಸ್. ರವಿ, ಎಂ.ಆರ್. ಪ್ರಸನ್ನಕುಮಾರ್ ಉಪಸ್ಥಿತರಿದ್ದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್
(**9606038256**)
ಸಹ ಮಾಡಬಹುದು.

‘ರಸ್ತೆ ಗುಂಡಿ ಮುಚ್ಚಿ’

119ನೇ ವಾರ್ಡ್‌ನ ಕಬ್ಬನ್ ಪೇಟೆಯ ಮುಖ್ಯರಸ್ತೆ ಸಂಪೂರ್ಣ ಹದಗೆಟ್ಟಿದೆ. ಆಸ್ಪತ್ರೆ ರಸ್ತೆ ಹಾಗೂ ಅವೆನ್ಯೂ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಗಳಿಂದ ಕೂಡಿದೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಾದ ಪರಿಸ್ಥಿತಿ ಇದೆ. ಈ ಕುರಿತು ಹಲವು ಬಾರಿ ದೂರುಗಳನ್ನು ನೀಡಿದ್ದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ರಸ್ತೆಯ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

–**ಶಿವಪ್ರಸಾದ್,** ಸ್ಥಳೀಯ ನಿವಾಸಿ



ಕಬ್ಬನ್ ಪೇಟೆಯ ರಸ್ತೆಯ ಸ್ಥಿತಿ ಇದು.

‘ಪಾದಚಾರಿ ಮಾರ್ಗ ಸರಿಪಡಿಸಿ

ಮೂಡಲಪಾಳ್ಯ ಬಸ್ ನಿಲ್ದಾಣದ ಪಕ್ಕದ ಪಾದಚಾರಿ ಮಾರ್ಗದಲ್ಲಿ ಅಳವಡಿಸಿದ್ದ ಕಲ್ಲುಗಳು ಕಿತ್ತು ಹೋಗಿವೆ. ಇದರಿಂದ ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದು ಕಷ್ಟವಾಗಿದೆ. ನಿರಂತರ ಸುರಿದ ಮಳೆಯಿಂದಾಗಿ ಮಣ್ಣು ಕೊಚ್ಚಿಕೊಂಡು ಹೋಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು.

ಶ್ರೀನಿವಾಸ್, ಮೂಡಲಪಾಳ್ಯ ನಿವಾಸಿ



ಮೂಡಲಪಾಳ್ಯದ ಪಾದಚಾರಿ ಮಾರ್ಗ.



ಮತ್ತಿಕೆರೆ ಎಂ.ಎಸ್‌.ಆರ್ ನಗರದ 2ನೇ ಅಡ್ಡ ರಸ್ತೆ.

‘ರಸ್ತೆ ದುರಸ್ತಿಗೊಳಿಸಿ’

ಮತ್ತಿಕೆರೆ ಎಂ.ಎಸ್.ಆರ್. ನಗರದ 2ನೇ ಕ್ರಾಸ್‌ನ ರಸ್ತೆ ಸಂಪೂರ್ಣ ಹಾಳಾಗಿದೆ. ಜಲಮಂಡಳಿ ಪೈಪ್ ಅಳವಡಿಸಲು ರಸ್ತೆಯನ್ನು ಅಗೆದು ಸರಿಪಡಿಸಿಲ್ಲ. ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮಕೈಗೊಂಡಿಲ್ಲ. ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಹಾರಿಕೆ ಉತ್ತರವನ್ನು ಬಿಬಿಎಂಪಿ ಅಧಿಕಾರಿಗಳು ನೀಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದ್ದು, ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಕೃಷ್ಣಮೂರ್ತಿ ಎಂ.ಎಸ್., ಎಂ.ಎಸ್‌.ಆರ್ ನಗರದ ನಿವಾಸಿ

ಹೊಸ ವರ್ಷಾಚರಣೆ: ಸ್ನೇಹಿತನಿಗೆ ಚಾಕು ಇರಿತ

ಪ್ರತ್ಯೇಕ ಘಟನೆಯಲ್ಲಿ ಮೂವರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೊಸ ವರ್ಷಾಚರಣೆ ವೇಳೆ ಪ್ರತ್ಯೇಕ ಘಟನೆಗಳಲ್ಲಿ ಮೂವರು ಮೃತಪಟ್ಟಿದ್ದು, ಒಬ್ಬರಿಗೆ ಸ್ನೇಹಿತನೇ ಚಾಕುವಿನಿಂದ ಇರಿದಿದ್ದಾನೆ.

‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಕಟ್ಟಡದಿಂದ ಬಿದ್ದು ಕಾರ್ಮಿಕ ಬಾಪಿ (29) ಮೃತಪಟ್ಟಿದ್ದಾರೆ. ಮೈಸೂರು ರಸ್ತೆಯಲ್ಲಿ ಅಪಘಾತ ಸಂಭವಿಸಿ ಬೈಕ್ ಸವಾರ ದೇವರಾಜ್ (21) ಹಾಗೂ ಹಿಂಬದಿ ಸವಾರ ದೇವೇಂದ್ರಪ್ಪ (19) ಅಸುನೀಗಿದ್ದಾರೆ. ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ಪ್ರಶಾಂತ್ (30) ಎಂಬುವರಿಗೆ ಚಾಕುವಿನಿಂದ ಇರಿದು ಹಲ್ಲೆ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಮದ್ಯದ ಅಮಲಿನಲ್ಲಿ ಆಯತಪ್ಪಿ ಬಿದ್ದು ಸಾವು: ‘ಮೃತ ಕಾರ್ಮಿಕ ಬಾಪಿ, ಒಡಿಶಾದವರು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಕಾಮಾಕ್ಷಿಪಾಳ್ಯದ ಕೊಟ್ಟಿಗೆಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು’ ಎಂದು ಪೊಲೀಸರು ಹೇಳಿದರು.

‘ಕಟ್ಟಡದ ಮೂರನೇ ಮಹಡಿಯಲ್ಲಿ ಬಾಪಿ ಹಾಗೂ ಸ್ನೇಹಿತರು, ಶನಿವಾರ ರಾತ್ರಿ ಹೊಸ ವರ್ಷಾಚರಣೆ ಪಾರ್ಟಿ ಮಾಡಿದ್ದರು. ಎಲ್ಲರೂ ಮದ್ಯ ಕುಡಿದಿದ್ದರು. ಕಾರ್ಮಿಕ ಬಾಪಿ ಮದ್ಯದ ಅಮಲಿನಲ್ಲಿ ಮಹಡಿಯಲ್ಲೆಲ್ಲ ಓಡಾಡುತ್ತಿದ್ದರು. ಇದೇ ಸಂದರ್ಭದಲ್ಲೇ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.


ಬಾಪಿ

ಬೈಕ್‌ಗೆ ಡಿಕ್ಕಿ ಹೊಡೆದ ಟಿಪ್ಪರ್: ‘ಮೈಸೂರು ರಸ್ತೆಯ ಗೋಪಾಲನ್ ಲೆಗಸಿ ಮಾಲ್ ಎದುರು ಬೈಕ್ ಹಾಗೂ ಟಿಪ್ಪರ್ ನಡುವೆ ಭಾನುವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಬೈಕ್‌ನಲ್ಲಿದ್ದ ದೇವರಾಜ್ ಹಾಗೂ ದೇವೇಂದ್ರಪ್ಪ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಯಾದಗಿರಿಯ ದೇವರಾಜ್, ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತರ ಜೊತೆ ಹೊಸಕೆರೆಹಳ್ಳಿಯಲ್ಲಿ ವಾಸವಿದ್ದರು. ಶನಿವಾರ ರಾತ್ರಿ ಹೊಸ ವರ್ಷಾಚರಣೆ ಪಾರ್ಟಿ ಮಾಡಿದ್ದ ಸ್ನೇಹಿತರು, ನಗರದ ಹಲವೆಡೆ ಸುತ್ತಾಡಿ ತಡರಾತ್ರಿ ಮನೆಗೆ ವಾಪಸು ಬಂದಿದ್ದರು’. ‘ನಸುಕಿನ 5 ಗಂಟೆ ಸುಮಾರಿಗೆ ಪುನಃ ಮನೆಯಿಂದ ಹೊರಬಂದಿದ್ದ ದೇವರಾಜ್ ಹಾಗೂ ದೇವೇಂದ್ರಪ್ಪ, ನಗರದಲ್ಲಿ ಸುತ್ತಾಡೋಣವೆಂದು ಬೈಕ್‌ನಲ್ಲಿ ಮೈಸೂರು ರಸ್ತೆಯಲ್ಲಿ ಹೊರಟಿದ್ದರು. ಇನ್ನೊಬ್ಬ ಸ್ನೇಹಿತ ಮತ್ತೊಂದು ಬೈಕ್‌ನಲ್ಲಿ ಹಿಂಬಾಲಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಅಪಘಾತ: ಆಟೊಗೆ ಕಾರು ಡಿಕ್ಕಿ

ಆನಂದರಾವ್ ವೃತ್ತದಲ್ಲಿ ಆಟೊಗೆ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಹೈಗ್ರೌಂಡ್ಸ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪಾನಮತ್ತನಾಗಿದ್ದ ಚಾಲಕ, ಶನಿವಾರ ರಾತ್ರಿ ತನ್ನ ಕಾರನ್ನು ಏಕಮುಖ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ಚಲಾಯಿಸಿದ್ದ. ಎದುರಿಗೆ ಬರುತ್ತಿದ್ದ ಆಟೊಗೆ ಕಾರು ಡಿಕ್ಕಿ ಹೊಡೆದಿತ್ತು. ಆಟೊ ಜಖಂಗೊಂಡಿತ್ತು. ಕಾರು ತಡೆದ ಸ್ಥಳೀಯರು, ಚಾಲಕನನ್ನು ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಬಂದ ಪೊಲೀಸರು, ಚಾಲಕನನ್ನು ವಶಕ್ಕೆ ಪಡೆದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಪಾನಮತ್ತ ಚಾಲನೆ: 78 ಪ್ರಕರಣ’

‘ಶನಿವಾರ ರಾತ್ರಿ ಪಾನಮತ್ತರಾಗಿ ವಾಹನ ಚಲಾಯಿಸಿದ್ದ 78 ಚಾಲಕರನ್ನು ಪತ್ತೆ ಮಾಡಿ, ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಾಹನಗಳನ್ನು ಜಪ್ತಿ ಮಾಡಿ, ನೋಟಿಸ್ ನೀಡಲಾಗಿದೆ. ನ್ಯಾಯಾಲಯದಲ್ಲಿ ದಂಡ ಪಾವತಿಸಿದ ನಂತರವೇ ವಾಹನ ವಾಪಸು ನೀಡಲಾಗುವುದು’ ಎಂದು ಪೊಲೀಸರು ಹೇಳಿದರು.

‘ಮಾರ್ಗಮಧ್ಯೆ ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದಿತ್ತು. ತೀವ್ರ ಗಾಯಗೊಂಡಿದ್ದ ದೇವರಾಜ್ ಹಾಗೂ ದೇವೇಂದ್ರಪ್ಪ ಅವರನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಾಗ ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ದೇವೇಂದ್ರಪ್ಪ ಆಸ್ಪತ್ರೆಯಲ್ಲಿ ಭಾನುವಾರ ಸಂಜೆ ಅಸುನೀಗಿದರು’ ಎಂದು ಹೇಳಿದರು.

ಸ್ನೇಹಿತನಿಂದ ಚಾಕು ಇರಿತ: ‘ಪೀಣ್ಯ 4ನೇ ಹಂತದ ಮನೆಯೊಂದರಲ್ಲಿ ಸ್ನೇಹಿತರು ವರ್ಷಾಚರಣೆ ಪಾರ್ಟಿ ಹಮ್ಮಿಕೊಂಡಿದ್ದರು. ಮದ್ಯದ ಅಮಲಿನಲ್ಲಿ ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ಜಗಳವಾಗಿದೆ. ಎ. ಪ್ರಶಾಂತ್ ಎಂಬುವರಿಗೆ ಸ್ನೇಹಿತ ಪ್ರದೀಪ್ ಚಾಕುವಿನಿಂದ ಇರಿದಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಗಾಯಾಳು ಎ. ಪ್ರಶಾಂತ್ ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರದೀಪ್‌ನನ್ನು ಬಂಧಿಸಲಾಗಿದೆ. ಇಬ್ಬರೂ ಸ್ಥಳೀಯ ನಿವಾಸಿಗಳು’ ಎಂದು ಹೇಳಿದರು.


ಯಲಹಂಕದ ರಿಯಾನ್ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಇತ್ತೀಚೆಗೆ ನಡೆದ ‘3ನೇ ಮುಕ್ತ ಅಂತರರಾಷ್ಟ್ರೀಯ ಟೇಕ್ವಾಂಡೊ ಚಾಂಪಿಯನ್‌ಷಿಪ್’ನಲ್ಲಿ ನಂದಿನಿ ಬಡಾವಣೆಯ 'ಶ್ರೀರಕ್ಷಾ ಟೇಕ್ವಾಂಡೊ ಸೆಂಟರ್’ನ ರಿತೇಶ್ ಬೆಟಗೇರಿ ಚಿನ್ನದ ಪದಕ ಪಡೆದಿದ್ದಾರೆ. ರಿತೇಶ್ ಹೆಬ್ಬಾಳದ ಕೇಂದ್ರೀಯ ವಿದ್ಯಾಲಯದ 6ನೇ ತರಗತಿ ವಿದ್ಯಾರ್ಥಿ.

ಪಿಒಎಸ್ ವಂಚನೆ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್, ರೆಸ್ಟೋರೆಂಟ್ ಹಾಗೂ ಇತರೆ ವ್ಯಾಪಾರಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನಿಂದ ಪಿಒಎಸ್ (ಪಾಯಿಂಟ್ ಆಫ್ ಸೇಲ್) ಸ್ವೈಪಿಂಗ್ ಉಪಕರಣ ಪಡೆದುಕೊಂಡು ವಂಚಿಸುತ್ತಿದ್ದ ಆರೋಪಿ ನವನೀತ್ ಪಾಂಡೆ (34)ಯನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬನಶಂಕರಿ 2ನೇ ಹಂತದಲ್ಲಿರುವ ‘ಕಿಡಂಬೀಸ್ ಕಿಚನ್’ ರೆಸ್ಟೋರೆಂಟ್ ಮಾಲೀಕ ವಿವೇಕ ಅವರು ವಂಚನೆ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ನವನೀತ್ ಪಾಂಡೆಯನ್ನು ಇತ್ತೀಚೆಗೆ ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ 14 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉತ್ತರ ಪ್ರದೇಶದ ನವನೀತ್, ಖರಗ್‌ಪುರದ ಐಐಟಿಯಲ್ಲಿ (ಭಾರತೀಯ ತಂತ್ರಜ್ಞಾನ ಸಂಸ್ಥೆ) ಎಂಜಿನಿಯರಿಂಗ್ ವ್ಯಾಸಂಗಕ್ಕೆ ಸೇರಿದ್ದ. ಆದರೆ, ವ್ಯಾಸಂಗವನ್ನು ಅರ್ಧಕ್ಕೆ ಬಿಟ್ಟು ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ‘ಬಂಧಿತನಿಂದ 110 ಡೆಬಿಟ್ ಕಾರ್ಡ್, 110 ಕ್ರೆಡಿಟ್ ಕಾರ್ಡ್, 3 ಲ್ಯಾಪ್‌ಟಾಪ್, 6 ಮೊಬೈಲ್, 16 ಪಿಒಎಸ್ ಉಪಕರಣ, ರೆಸ್ಟೋರೆಂಟ್ ನಕಲಿ ದಾಖಲೆಗಳು, ಹಲವು ಬ್ಯಾಂಕ್ ಖಾತೆಗಳ ಪಾಸ್ ಪುಸ್ತಕ ಹಾಗೂ ಚೆಕ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.



ನವನೀತ್ ಪಾಂಡೆ

ಪರಿಶೀಲನೆಯಿಂದ ಕೃತ್ಯ ಬಯಲು: ‘ಜಯನಗರ ಜೆಎಸ್‌ಎಸ್ ವೃತ್ತದ ಯೆಸ್ ಬ್ಯಾಂಕ್ ಶಾಖೆ ಸಿಬ್ಬಂದಿಯೊಬ್ಬರು ಡಿ. 26ರಂದು ಕಿಡಂಬೀಸ್ ಕಿಚನ್ ರೆಸ್ಟೋರೆಂಟ್‌ಗೆ ಬಂದಿದ್ದರು. ಪಿಒಎಸ್ ಸ್ವೈಪಿಂಗ್ ಉಪಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು, ದಾಖಲೆಗಳ ಪರಿಶೀಲಿಸಬೇಕೆಂದು ಹೇಳಿದ್ದರು. ತಾವು ಯಾವುದೇ ಅರ್ಜಿ ಸಲ್ಲಿಸಿಲ್ಲವೆಂದು ಮಾಲೀಕರು ಹೇಳಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಬ್ಯಾಂಕ್‌ಗೆ ಸಲ್ಲಿಕೆಯಾಗಿದ್ದ ದಾಖಲೆಗಳನ್ನು ಸಿಬ್ಬಂದಿ, ಮಾಲೀಕರಿಗೆ ತೋರಿಸಿದ್ದರು. ಪರಿಶೀಲಿಸಿದಾಗ, ಎಲ್ಲ ದಾಖಲೆಗಳು ನಕಲಿ ಎಂಬುದು ಗೊತ್ತಾಗಿತ್ತು. ಅವಾಗಲೇ ಮಾಲೀಕ ವಿವೇಕ, ಠಾಣೆಗೆ ದೂರು ನೀಡಿದ್ದರು’ ಎಂದು ಹೇಳಿದರು.

ಸರ್ಕಾರಕ್ಕೂ ವಂಚನೆ: ‘ಹೋಟೆಲ್, ರೆಸ್ಟೋರೆಂಟ್ ಹೆಸರಿನಲ್ಲಿ ಪಿಒಎಸ್ ಉಪಕರಣ ಪಡೆಯುತ್ತಿದ್ದ ಆರೋಪಿ, ಅದಕ್ಕೆ ತನ್ನ ಬ್ಯಾಂಕ್ ಖಾತೆ ಸಂಖ್ಯೆ ಜೋಡಿಸುತ್ತಿದ್ದ. ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳನ್ನು ಉಜ್ಜಿ ತನ್ನ ಖಾತೆಗೆ ಹಣ ಹಾಕಿಕೊಳ್ಳುತ್ತಿದ್ದ. ಇಂಥ ಹಣ ವರ್ಗಾವಣೆಗೆ ಜಿಎಸ್‌ಟಿ ಪಾವತಿಸುತ್ತಿರಲಿಲ್ಲ. ಈ ಮೂಲಕ ಸರ್ಕಾರಕ್ಕೂ ವಂಚಿಸುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

ಆರೋಪಿ ಹೆಸರಿನಲ್ಲಿ 28 ಕಾರ್ಡ್: ‘ಆರೋಪಿ ನವನೀತ್, ತನ್ನ ಹೆಸರಿನಲ್ಲಿ ವಿವಿಧ ಬ್ಯಾಂಕ್‌ಗಳಿಂದ 28 ಕಾರ್ಡ್‌ಗಳನ್ನು ಪಡೆದಿದ್ದ. ತಂದೆ–ತಾಯಿ, ಸಂಬಂಧಿಕರು, ಸ್ನೇಹಿತರು ಹಾಗೂ ಇತರರ ಹೆಸರಿನಲ್ಲೂ ಕಾರ್ಡ್ ಮಾಡಿಸಿ ತನ್ನ ಬಳಿಯೇ ಇಟ್ಟುಕೊಂಡಿದ್ದ. ಇಂಥ ಕಾರ್ಡ್ ಬಳಸಿ ಅಕ್ರಮ ಹಣ ವರ್ಗಾವಣೆ ಮಾಡಿರುವ ಮಾಹಿತಿ ಇದೆ’ ಎಂದು ಪೊಲೀಸರು ಹೇಳಿದರು.

‘ನಕಲಿ ದಾಖಲೆ ಸೃಷ್ಟಿಸಿದ್ದಕ್ಕಾಗಿ ಸದ್ಯ ಆರೋಪಿಯನ್ನು ಬಂಧಿಸಲಾಗಿದೆ. ಆದರೆ, ಕಾರ್ಡ್ ಬಳಸಿಕೊಂಡು ಆರೋಪಿ ಯಾವ ರೀತಿಯಲ್ಲಿ ವಂಚನೆ ಮಾಡುತ್ತಿದ್ದನೆಂಬ ಮಾಹಿತಿ ನಿಖರವಾಗಿ ಗೊತ್ತಾಗಿಲ್ಲ. ಇದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದರು.

ಕಾಲ್ತುಳಿತ: 3 ಸಾವು

ಅಮರಾವತಿ (ಪಿಟಿಐ): ‘ತೆಲುಗು ದೇಶಂ ಪಕ್ಷ (ಟಿಡಿಪಿ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಡುಗೊರೆ ಸ್ವೀಕರಿಸಲು ಭಾನುವಾರ ನೂಕುನುಗ್ಗಲು ಏರ್ಪಟ್ಟಿದ್ದು, ಕಾಲ್ತುಳಿತದಲ್ಲಿ ಮೂವರು ಮಹಿಳೆಯರು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ’ ಎಂದು ಆಂಧ್ರಪ್ರದೇಶ ಸರ್ಕಾರ ತಿಳಿಸಿದೆ.

‘ಮಹಿಳೆಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಅಸುನೀಗಿದ್ದಾರೆ’ ಎಂದು ಆರೋಗ್ಯ ಸಚಿವೆ ವಿ.ರಜಿನಿ ಹೇಳಿದ್ದಾರೆ.

‘ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಅವರು ಸಾರ್ವಜನಿಕ ಭಾಷಣ ಮುಗಿಸಿ ಹೊರಟಾಗ ಸಂಘಟಕರು ಸೀರೆ ಸೇರಿದಂತೆ ಇತರೆ ಉಡುಗೊರೆಗಳನ್ನು ಹಂಚಲು ಮುಂದಾದರು. ಆಗ ಅಲ್ಲಿ ನೆರೆದಿದ್ದವರು ಬ್ಯಾರಿಕೇಡ್‌ಗಳನ್ನು ಪಕ್ಕಕ್ಕೆ ತಳ್ಳಿ ಉಡುಗೊರೆ ಪಡೆಯಲು ಧಾವಿಸಿದರು. ಆಗ ಕಾಲ್ತುಳಿತ ಉಂಟಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸರ್ಕಾರವು ಮೃತರ ಕುಟುಂಬದವರಿಗೆ ತಲಾ ₹2 ಲಕ್ಷ ಪರಿಹಾರ ಹಾಗೂ ಗಾಯಗೊಂಡವರಿಗೆ ತಲಾ ₹50 ಸಾವಿರ ನೆರವು ಪ್ರಕಟಿಸಿದೆ’ ಎಂದು ಮುಖ್ಯಮಂತ್ರಿಯವರ ಕಾರ್ಯಾಲಯದ ಪ್ರಕಟಣೆ ಹೇಳಿದೆ.

ಸಂಸದ ಮುನಿಸ್ವಾಮಿಗೆ ವರ್ತೂರು ಪ್ರಕಾಶ್ ಕಿಸ್ !


ಕೋಲಾರದಲ್ಲಿ ಭಾನುವಾರ ಸಂಸದ ಎಸ್‌.ಮುನಿಸ್ವಾಮಿ ಕೆನ್ನೆಗೆ ಮುತ್ತು ನೀಡಿದ ಬಿಜೆಪಿ ಮುಖಂಡ ವರ್ತೂರು ಪ್ರಕಾಶ್

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಕೋಲಾರಮ್ಮ ದೇಗುಲ ಬಳಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಸಂಸದ ಎಸ್.ಮುನಿಸ್ವಾಮಿ ಅವರ ಕೆನ್ನೆಗೆ ಮಾಜಿ ಸಚಿವ, ಬಿಜೆಪಿ ಮುಖಂಡ ವರ್ತೂರು ಪ್ರಕಾಶ್ ಮುತ್ತು ನೀಡಿದರು.

ಒಮ್ಮೆಲೇ ಗಾಬರಿಯಾದ ಮುನಿಸ್ವಾಮಿ ಕೊನೆಗೆ ನಗು ಬೀರಿ ಹಣೆ ಮೇಲೆ ಕೈಇಟ್ಟುಕೊಂಡರು.

ಜಿಲ್ಲಾ ಬಿಜೆಪಿಯಲ್ಲಿ ಗೊಂದಲವಿದೆಯಲ್ಲಾ ಎಂಬ ಪ್ರಶ್ನೆಗೆ ಅವರು ಎಡಕೆನ್ನೆಗೆ ಮುತ್ತು ಕೊಡುವ ಮೂಲಕ ಉತ್ತರ ನೀಡಿದರು.

‘ಹೊಸ ವರ್ಷದಲ್ಲಿ ಜಿಲ್ಲೆಯಲ್ಲಿ ಎಲ್ಲರೂ ಜೊತೆಗೂಡಿ ಪಕ್ಷ ಕಟ್ಟಲು ಕೋಲಾರಮ್ಮನ ಮುಂದೆ ಪ್ರಮಾಣ ಮಾಡಿದ್ದೇವೆ. ನಮ್ಮ ನಾಯಕ ಮುನಿಸ್ವಾಮಿ ಜೊತೆಗೂಡಿ ಚುನಾವಣೆ ನಡೆಸುತ್ತೇವೆ. ಉಸ್ತುವಾರಿ ಸಚಿವ ಮುನಿರತ್ನ ನಮ್ಮೊಂದಿಗೆ ಇರುತ್ತಾರೆ’ ಎಂದರು.

ವರ್ಷಾಚರಣೆಗೆ ಸಂಗ್ರಹಿಸಿದ್ದ ₹10 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಗ್ರಾಹಕರಿಗೆ ಡ್ರಗ್ಸ್ ಮಾರಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೋಲಾರ ಜಿಲ್ಲೆಯ ಸೀನಪ್ಪ (40) ಹಾಗೂ ಬೆಂಗಳೂರು ಜಾಲಹಳ್ಳಿಯ ಜಿ. ನಾಗೇಶ್ (55) ಬಂಧಿತರು. ಇವರಿಂದ ₹ 10 ಲಕ್ಷ ಮೌಲ್ಯದ 10 ಕೆ.ಜಿ. ಗಾಂಜಾ, 1 ಕೆ.ಜಿ ಹಶೀಷ್, ಕಾರು, ದ್ವಿಚಕ್ರ ವಾಹನ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ’. ‘ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಅಪಾರ ಪ್ರಮಾಣದ ಡ್ರಗ್ಸ್ ತರುತ್ತಿದ್ದ ಆರೋಪಿಗಳು, ಅದನ್ನು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದರು.

ಹೊಸ ವರ್ಷಾಚರಣೆ ಪಾರ್ಟಿಗಳು ಹಾಗೂ ಇತರೆ ಸ್ಥಳಗಳಲ್ಲಿ ಡ್ರಗ್ಸ್ ಮಾರುವ ಸಲುವಾಗಿ ಹೆಚ್ಚಿನ ಪ್ರಮಾಣದಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡಿದ್ದರು’ ಎಂದು ತಿಳಿಸಿದರು.

‘ಆರೋಪಿಗಳ ಕೃತ್ಯದ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಬಂಧಿತ ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದರು

ನಗರದಲ್ಲಿ ಇಂದು

ವೈಕುಂಠ ಏಕಾದಶಿ: ಬೆಳಿಗ್ಗೆ 5ಕ್ಕೆ ಭಜನಾ ಕಾರ್ಯಕ್ರಮ, 7ಕ್ಕೆ ಸಂಗೀತ ಕಾರ್ಯಕ್ರಮ: ಸುಧಾಕರ್, ದತ್ತಶ್ರೀ ಮತ್ತು ತಂಡ, 9ಕ್ಕೆ ವಿಷ್ಣು ಸಹಸ್ರನಾಮ ಪಾರಾಯಣ ಮತ್ತ ಭಜನೆ, 10.30ಕ್ಕೆ ಭರತನಾಟ್ಯ: ಸುಮಾ ಕಂಠಿ ಮತ್ತು ತಂಡ, ಮಧ್ಯಾಹ್ನ 12.30ಕ್ಕೆ ಸಂಗೀತ ಕಾರ್ಯಕ್ರಮ: ರಾಧ ಮತ್ತು ತಂಡ, ವಿವಿಧ ಕಾರ್ಯಕ್ರಮಗಳು ರಾತ್ರಿ 8.30ರ ವರೆಗೆ, ಆಯೋಜನೆ ಹಾಗೂ ಸ್ಥಳ: ವಿನಾಯಕ ವೆಂಕಟೇಶ್ವರಸ್ವಾಮಿ ದೇವಸ್ಥಾನ, ಎಂ.ಜಿ. ಕಾಲೊನಿ, ಮಾಗಡಿ ರಸ್ತೆ

ವೈಕುಂಠ ಏಕಾದಶಿ: ಬೆಳಿಗ್ಗೆ 6ಕ್ಕೆ ವೇದ ಪಾರಾಯಣ: ಸತೀಶ್ ಶರ್ಮಾ, 7ಕ್ಕೆ ನಾದಸ್ವರ: ಬಾಲಾಜಿ ಗೋಪಿನಾಥ್, ಯೋಗಮೂರ್ತಿ ಬಿ., 8ಕ್ಕೆ ವಿಷ್ಣು ಸಹಸ್ರನಾಮ ಪಾರಾಯಣ: ವಾಸವಿ ಮಹಿಳಾ ಮಂಡಳಿ, 9ಕ್ಕೆ ಪಿಟೀಲು ವಾದನ: ಮೈಸೂರು ಸಂಜೀವ್ ಕುಮಾರ್ ಮತ್ತು ತಂಡ, 10.30ಕ್ಕೆ ಭಜನೆ: ಅಕ್ಷಯ ಡಿವೈನ್ ಗ್ರೂಪ್, ಮಧ್ಯಾಹ್ನ 12ಕ್ಕೆ ಭರತನಾಟ್ಯ: ಸೃಷ್ಟಿಕಲಾ ಸ್ಕೂಲ್ ಆಫ್ ಆರ್ಟ್ಸ್, ಸಂಜೆ 7ರ ವರೆಗೆ ವಿವಿಧ ಕಾರ್ಯಕ್ರಮಗಳು, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಮತ್ತು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ,


ರಾಧಿಕಾ ಜೋಶಿ

ಭಜನಾಮೃತ: ಹರಿದಾಸ ಕೀರ್ತನೆಗಳು ಗಾಯನ: ಪೇಜಾವರ ಭಜನಾ ಮಂಡಳಿಯ ರಾಧಿಕಾ ಜೋಶಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 5.30

‘ಮೀಸಲಾತಿ ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ?’ ದುಂಡು ಮೇಜಿನ ಸಭೆ: ಭಾಗವಹಿಸುವವರು: ಹೈಕೋರ್ಟ್ ನಿವೃತ್ತ ನ್ಯಾ. ಎಚ್.ಎನ್. ನಾಗಮೋಹನದಾಸ್, ಬಾಬು, ಕೆ.ಎನ್. ಲಿಂಗಪ್ಪ, ಎಂ.ಸಿ. ವೇಣುಗೋಪಾಲ್, ರಾಮಚಂದ್ರಪ್ಪ, ಜಿ.ಡಿ. ಗೋಪಾಲ್, ಮುಕುಂದರಾಜ್, ಗೋಪಾಲ ಕೃಷ್ಣ ಹರಳಹಳ್ಳಿ, ಶ್ರೀಪಾದ್ ಭಟ್, ಎಸ್.ವೈ. ಗುರುಶಾಂತ್, ಅಶ್ವಿನಿ ಓಬಳೇಶ್, ಇಂದಿರಾ ಕೃಷ್ಣಪ್ಪ, ಎಣ್ಣೆಗೆರೆ ವೆಂಕಟೇಶ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ದಲಿತ ಹಕ್ಕುಗಳ ಸಮಿತಿ ಕರ್ನಾಟಕ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ, ಸ್ಥಳ: ಗಾಂಧಿ ಭವನ, ಶೇಷಾದ್ರಿ ರಸ್ತೆ, ಕುಮಾರ ಪಾರ್ಕ್, ಬೆಳಿಗ್ಗೆ 11

ಯುವಜನೋತ್ಸವ: ಉದ್ಘಾಟನೆ: ಪ್ರಕಾಶ್ ಯೋಗಿ ಗುರೂಜಿ, ಅಧ್ಯಕ್ಷತೆ: ಜಯಕರ ಎಂ.ಎಸ್., ಅತಿಥಿಗಳು: ಎನ್. ಮಹೇಶ್ ಬಾಬು, ಅಜಿತ್ ಕುಮಾರ್ ಹೆಗಡೆ ಎಸ್., ಆಯೋಜನೆ ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಎಚ್.ಎನ್. ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

‘ಬಯೊಡೈವರ್ಸಿಟಿ ಇನ್ ಮೈಕ್ರೊಹ್ಯಾಬಿಟಟ್ಸ್– ಪ್ಲಾಂಟ್ಸ್, ಪ್ರಿಡೇಟರ್ಸ್ ಆ್ಯಂಡ್ ಪ್ರೆ ಆಫ್ ಆರೋಗ್ಯಾಶ್ರಮ್’ ಪುಸ್ತಕ ಬಿಡುಗಡೆ: ಅತಿಥಿಗಳು: ಅಹಲ್ಯಾ ಶರ್ಮಾ, ಕಾರ್ತಿಕೇಯನ್ ಶ್ರೀನಿವಾಸನ್, ಡಾ. ಎಂ.ಡಿ. ಮಧುಸೂದನ್, ಸುರೇಶ್ ಹೆಬ್ಳೀಕರ್, ಆಯೋಜನೆ: ಧನ್ವಂತರಿ ಆರೋಗ್ಯಾಶ್ರಮ ಟ್ರಸ್ಟ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸಂಜೆ 6.15

ಐದು ದಿನಗಳ ಸಾಮಾಜಿಕ ನಾಟಕೋತ್ಸವ: ಸಂಜೆ 6 ಕ್ಕೆ ಉದ್ಘಾಟನೆ- ಕಾಂತರಾಜ್, ಅತಿಥಿಗಳು- ಚಂದ್ರಶೇಖರ್ ಆರ್., ಡಾ. ಜಯಸಿಂಹ ಆರ್., ಕುವೆಂಪು ಪ್ರಕಾಶ್, ಬಿಪಿಒ ಚಂದ್ರು,ಅಧ್ಯಕ್ಷತೆ-ಎಂ. ಪ್ರಕಾಶ ಮೂರ್ತಿ, ಸಂಜೆ 7ಕ್ಕೆ ಫೂಲನ್ ದೇವಿ ನಾಟಕ ಪ್ರದರ್ಶನ, ಆಯೋಜನೆ- ಏಕಲವ್ಯ ಫೌಂಡೇಷನ್, ಸ್ಥಳ-ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ.

ಶಿಕ್ಷಣ



ಯುಪಿಎಸ್‌ಸಿ ಪರೀಕ್ಷೆಯ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

5. ನಾನು ಬಿಎ ವ್ಯಾಸಂಗ ಮಾಡುತ್ತಿದ್ದು, ಮುಂದೆ ರಾಷ್ಟ್ರ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತೇನೆ. ಈಗ ಸದ್ಯಕ್ಕೆ ಪೊಲೀಸ್ ಕಾನ್‌ಸ್ಟೆಬಲ್ ಪರೀಕ್ಷೆಗೆ ತಯಾರಿ ಹೇಗೆ ಮಾಡಬೇಕು ಮತ್ತು ಅದರ ಜೊತೆ ಮುಂದಿನ ತಯಾರಿ ಹೇಗಿರಬೇಕು?

ಅಂಕಿತ್ ಎ.ಎಸ್, ಊರು ತಿಳಿಸಿಲ್ಲ.

ರಾಷ್ಟ್ರ ಮಟ್ಟದಲ್ಲಿ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿವೆ. ಆಯಾ ಪರೀಕ್ಷೆಗಳ ಮಾದರಿ, ಪಠ್ಯಕ್ರಮ, ಐಚ್ಛಿಕ ವಿಷಯಗಳು, ನಿಯಮಾವಳಿಗಳನ್ನು ಅರ್ಥಮಾಡಿಕೊಂಡು, ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯತಂತ್ರವನ್ನು ರೂಪಿಸಬೇಕು. ಕರ್ನಾಟಕ ಪೊಲೀಸ್ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ, ದೈಹಿಕ ಮಾನದಂಡಗಳು ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

1. ಸರ್, ನಾನು ಬಿಇ ಪದವಿಯನ್ನು ಮುಗಿಸಿ, ಐಪಿಎಸ್ ಅಧಿಕಾರಿಯಾಗಿ ಸೇವೆ ಮಾಡಬೇಕೆಂದು ಇಚ್ಛಿಸುತ್ತೇನೆ. ಈಗ, ನನಗೆ ಕೆಲಸದ ಅನಿವಾರ್ಯವಿರುವುದರಿಂದ ಯಾವ ಕೆಲಸವನ್ನು ಮಾಡಿದರೆ ಸೂಕ್ತ? ಯುಪಿಎಸ್‌ಸಿ ಪರೀಕ್ಷೆಯ ತಯಾರಿ ಹೇಗೆ?

ಊರು, ಹೆಸರು ತಿಳಿಸಿಲ್ಲ.

2. ನಾನು ಈ ವರ್ಷ ಬಿಕಾಂ ಪದವಿಯನ್ನು ಮುಗಿಸಿದ್ದೇನೆ. ನನಗೆ ಐಪಿಎಸ್ ಅಧಿಕಾರಿಯಾಗುವ ಆಸೆಯಿದೆ. ಕರ್ನಾಟಕದಲ್ಲಿ ಕನ್ನಡ ಮಾಧ್ಯಮದಲ್ಲಿ ಕೋಚಿಂಗ್ ನೀಡುವ ಸೆಂಟರ್‌ಗಳ ಮಾಹಿತಿಯನ್ನು ತಿಳಿಸುವಿರಾ? ಮತ್ತು ಕನ್ನಡದಲ್ಲಿ ಯುಪಿಎಸ್‌ಸಿ ತಯಾರಿ ಬಗ್ಗೆ ತಿಳಿಸಿ.

ಪ್ರದೀಪ್, ಕೊಪ್ಪಳ.


ಐಪಿಎಸ್ ಅಧಿಕಾರಿಯಾಗಬೇಕೆನ್ನುವ ನಿಮ್ಮ ಆಕಾಂಕ್ಷೆಗೆ ಅಭಿನಂದನೆಗಳು ಮತ್ತು ಶುಭಹಾರೈಕೆಗಳು. ಯುಪಿಎಸ್‌ಸಿ ಆಯೋಜಿಸುವ ಪರೀಕ್ಷೆಯ ಪ್ರಕ್ರಿಯೆಯಲ್ಲಿ ಮೂರು ಹಂತಗಳಿವೆ.

1. ಪೂರ್ವಭಾವಿ (ಬಹು ಆಯ್ಕೆ ಮಾದರಿ- ಇಂಗ್ಲಿಷ್/ಹಿಂದಿ)
2. ಮುಖ್ಯ ಪರೀಕ್ಷೆ (ಕನ್ನಡದಲ್ಲಿ ಬರೆಯಬಹುದು).
3. ಸಂದರ್ಶನ/ವ್ಯಕ್ತಿತ್ವ ಪರೀಕ್ಷೆ (ಕನ್ನಡದಲ್ಲಿ ನೀಡಬಹುದು)

ಅಗತ್ಯವಾದ ಪುಸ್ತಕಗಳನ್ನು ಖರೀದಿಸಿ ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು. ಯೂಟ್ಯೂಬಿನಲ್ಲಿ ತಯಾರಿ ಕುರಿತ ಮಾಹಿತಿಯುಳ್ಳ ಉಪಯುಕ್ತ ವಿಡಿಯೊಗಳನ್ನು ವೀಕ್ಷಿಸಿ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಮಗ್ರವಾದ ಮತ್ತು ಆಳವಾದ ಓದುವಿಕೆ, ಏಕಾಗ್ರತೆಯ ಜತೆಗೆ ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ. ಕೆಲಸದ ಅನಿವಾರ್ಯತೆಯಿದ್ದರೆ ಸುಲಭವಾಗಿ ನಿಭಾಯಿಸಬಹುದಾದ ಮತ್ತು ನಿಮ್ಮ ವಿದ್ಯಾರ್ಹತೆಗೆ ಅನುಗುಣವಾದ ವೃತ್ತಿಯನ್ನು ಅರಸಬಹುದು. ಹಾಗೂ, ವೃತ್ತಿಯ ಜೊತೆಗೆ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ಮಾಡಬಹುದೇ ಎಂದು ಪರಿಶೀಲಿಸಿ. ಕನ್ನಡದಲ್ಲಿ ಯುಪಿಎಸ್‌ಸಿ ಪರೀಕ್ಷೆಯನ್ನು ಬರೆಯುವ ನಿಮ್ಮ ಆಲೋಚನೆ ಶ್ಲಾಘನೀಯ. ಕನ್ನಡ ಮಾಧ್ಯಮದಲ್ಲಿ ತರಬೇತಿ ನೀಡುವ ಹಲವಾರು ಕೋಚಿಂಗ್ ಸೆಂಟರ್‌ಗಳಿವೆ; ಯಾವ ಸೆಂಟರ್ ಸೇರಬೇಕೆನ್ನುವ ನಿರ್ಧಾರ ನಿಮ್ಮದು. ಈ ಸಲಹೆಗಳು ನಿಮ್ಮ ಗಮನದಲ್ಲಿರಲಿ:

- ಅಧ್ಯಯನದ ಮಾಹಿತಿಯನ್ನು (ಸ್ಟಡಿ ಮೆಟೀರಿಯಲ್) ಆದಷ್ಟು ಕನ್ನಡದಲ್ಲಿ ಸಂಗ್ರಹಿಸಿ; ಇಂಗ್ಲಿಷ್ ಮಾಹಿತಿಯಿದ್ದರೆ ಕನ್ನಡಕ್ಕೆ ಅನುವಾದಿಸಿಕೊಂಡು ಓದಬೇಕು.
- ವಿಷಯಾನುಸಾರ ಕನ್ನಡದಲ್ಲಿಯೇ ಅಧ್ಯಯನ ಮಾಡಬೇಕು.
- ಕನ್ನಡದಲ್ಲಿ ಬರೆಯುವ ವೇಗವನ್ನು ಹೆಚ್ಚಿಸಿಕೊಳ್ಳಿ; ಬರವಣಿಗೆ ಸುಲಭವಾಗಿ ಅರ್ಥವಾಗುವಂತಿರಲಿ. ಪರಿಣಾಮಕಾರಿ ಓದುವಿಕೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

3. ನಾನು ಬಿಎ ಅಂತಿಮ ವರ್ಷದ ವಿದ್ಯಾರ್ಥಿನಿ. ನನಗೆ ಕೆಎಎಸ್ ಮಾಡುವ ಆಸೆಯಿದೆ. ಆದರೆ, ಎಲ್ಲರೂ ಮೊದಲು ಒಂದು ಕೆಲಸ ನೋಡಿಕೋ; ನಂತರ ಏನಾದರೂ ಮಾಡಬಹುದು ಎನ್ನುತ್ತಿದ್ದಾರೆ. ನಾನು ಈಗಾಗಲೇ ಅಭ್ಯಾಸವನ್ನು ಪ್ರಾರಂಭಿಸಿದ್ದೇನೆ. ನನಗೆ ಮನೆಯವರು ಮದುವೆ ಮಾಡಲು ನಿರ್ಧರಿಸಿದ್ದಾರೆ. ಏನು ಮಾಡಬೇಕು ಎಂದು ತಿಳಿಯುತ್ತಿಲ್ಲ ಸಲಹೆ ನೀಡಿ.



ಊರು, ಹೆಸರು ತಿಳಿಸಿಲ್ಲ.

ಬದುಕಿನ ನಿಮ್ಮ ಕನಸುಗಳು, ವೃತ್ತಿಯ ಆಯ್ಕೆ ಮತ್ತು ನಿಮ್ಮ ಸನ್ನದ್ಧತೆಯ ಬಗ್ಗೆ ಮನೆಯವರಿಗೆ ಮನವರಿಕೆ ಮಾಡಿ, ಒಮ್ಮತದ ನಿರ್ಧಾರಕ್ಕೆ ಬರಲು ಪ್ರಯತ್ನಿಸಿ. ಸಾಧನೆಯ ಹಾದಿಯಲ್ಲಿ, ಆಂತರಿಕ ಮತ್ತು ಬಾಹ್ಯ ಪರಿಸರದ ಅಡಚಣೆಗಳು, ತೊಂದರೆಗಳು ಸರ್ವೇಸಾಮಾನ್ಯ. ನಿಮ್ಮ ಕನಸುಗಳು ಸಾಕಾರವಾಗಬೇಕಾದರೆ, ಸ್ವಯಂಪ್ರೇರಣೆಯೇ ನಿಮ್ಮ ಸಾಧನೆಗೆ ಸಂಜೀವಿನಿಯಾಗಬೇಕು. ಸವಾಲುಗಳನ್ನು ನಿರೀಕ್ಷಿಸಿ, ಮನಸ್ಸು ಸ್ಥಿತಪ್ರಜ್ಞೆಯಿಂದಿದ್ದರೆ ಸೃಜನಶೀಲ ಚಿಂತನೆ ಸಾಧ್ಯವಾಗಿ, ಸಾಧನೆಯ ಹಾದಿ ಸುಗಮವಾಗುತ್ತದೆ. ಹಾಗಾಗಿ, ಇನ್ನೂ ಹೆಚ್ಚಿನ ಏಕಾಗ್ರತೆ, ದೃಢತೆ ಮತ್ತು ಸಮಯದ ನಿರ್ವಹಣೆಯಿಂದ ತಯಾರಾಗಿ, ಕೆಎಎಸ್ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಗಳಿಸಲು ಪ್ರಯತ್ನಿಸಿ.

ನಿಮಗೆ ಸಾಧ್ಯವೆನಿಸಿದರೆ, ಕೆಎಎಸ್ ಪರೀಕ್ಷೆಯ ತಯಾರಿಯ ಜೊತೆ ಸೂಕ್ತವಾದ ಅರೆಕಾಲಿಕ/ಪೂರ್ಣಕಾಲಿಕ ಉದ್ಯೋಗವನ್ನು ಮಾಡಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಗಮನಿಸಿ: http://www.vpradeepkumar.com/self-motivation/

4. ನಾನು ಬಿಕಾಂ ಪೂರ್ಣಗೊಳಿಸಿದ್ದೇನೆ. ನನಗೆ ಕನ್ನಡ ಶಿಕ್ಷಕಿ ಅಥವಾ ಪ್ರಾಧ್ಯಾಪಕಿ ಆಗಬೇಕೆಂಬ ಆಸೆ ಇದೆ. ನಾನು ಈಗ ಎಂಎ (ಕನ್ನಡ ಸಾಹಿತ್ಯ) ಮಾಡಬೇಕೆಂದು ಅಂದುಕೊಂಡಿದ್ದೇನೆ. ಎಂಎ ನಂತರ ಉದ್ಯೋಗಾವಕಾಶಗಳು ಇವೆಯೇ?

ಸಂಧ್ಯಾ, ಬೆಂಗಳೂರು.

ಎಂ.ಎ (ಕನ್ನಡ) ಪದವಿಯ ನಂತರ ಅನೇಕ ಉದ್ಯೋಗಾವಕಾಶಗಳಿವೆ. ಉದಾಹರಣೆಗೆ, ಸಹಾಯಕ ಪ್ರಾಧ್ಯಾಪಕರು/ಉಪನ್ಯಾಸಕರು, ಸಂಶೋಧಕರು, ವಿಷಯ ಬರಹಗಾರರು, ಮಾಡರೇಟರ್/ಅನುವಾದಕರು, ಕನ್ನಡ ಚಿತ್ರಕಥೆಗಾರರು, ಭಾಷಾತಜ್ಞರು, ಸುದ್ದಿ ಸಂಪಾದಕರು/ಪತ್ರಕರ್ತರು, ಪ್ರವಾಸ ಮಾರ್ಗದರ್ಶಿಗಳು, ಧ್ವನಿ- ಕಲಾವಿದರು, ಲೇಖಕರು ಇತ್ಯಾದಿ. ಆಯಾ ವೃತ್ತಿಗೆ ಸಂಬಂಧಿಸಿದಂತೆ, ಹೆಚ್ಚಿನ ತಜ್ಞತೆಗಾಗಿ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಆನ್‌ಲೈನ್/ದೂರಶಿಕ್ಷಣದ ಮೂಲಕ ಮಾಡುವುದು ಸೂಕ್ತ. ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕಿಯಾಗಲು ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಾವಳಿಯಂತೆ ಪಿಎಚ್.ಡಿ ಮಾಡಿರಬೇಕು. ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ, ಅಭಿರುಚಿಯಂತೆ ವೃತ್ತಿಯೋಜನೆಯನ್ನು ಮಾಡಿದರೆ, ಬಿಕಾಂ ನಂತರ ಯಾವ ಕೋರ್ಸ್ ಮಾಡಬಹುದು ಎಂದು ಸ್ಪಷ್ಟವಾಗುತ್ತದೆ. ವೃತ್ತಿಯೋಜನೆ ಮಾಡುವ ಪ್ರಕ್ರಿಯೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಡಿಬಿಎಸ್ ಸ್ಕಾಲರ್‌ಶಿಪ್ ಪ್ರೋಗ್ರಾಂ

ವಿವರ: ಪ್ರಸ್ತುತ 9 ಅಥವಾ 10ನೇ ತರಗತಿಗೆ ದಾಖಲಾದ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸುವುದನ್ನು ಬೆಂಬಲಿಸಲು ಡಿಬಿಎಸ್ ಬ್ಯಾಂಕ್ ಅರ್ಜಿಗಳನ್ನು ಆಹ್ವಾನಿಸುತ್ತದೆ. ಈ ವಿದ್ಯಾರ್ಥಿವೇತನವು ಪೊಲೀಸ್ ಸಿಬ್ಬಂದಿಯ (ಸಬ್-ಇನ್‌ಸ್ಪೆಕ್ಟರ್ ಮತ್ತು ಕೆಳಗಿನ ಶ್ರೇಣಿ) ಮಕ್ಕಳಿಗೆ ಮೀಸಲಾಗಿದೆ.

ಅರ್ಹತೆ: ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಅಥವಾ ಪುದುಚೆರಿಯಲ್ಲಿ ನೆಲೆಸಿರುವ ಪೊಲೀಸ್ ಸಿಬ್ಬಂದಿಯ (ಸಬ್-ಇನ್‌ಸ್ಪೆಕ್ಟರ್ ಮತ್ತು ಕೆಳಗಿನ ಶ್ರೇಣಿ) ಮಕ್ಕಳಿಗಾಗಿ ಮುಕ್ತವಾಗಿದೆ. ಅರ್ಜಿದಾರರು ಪ್ರಸ್ತುತ 9 ಅಥವಾ 10ನೇ ತರಗತಿಗೆ ದಾಖಲಾಗಿರಬೇಕು.

ಆರ್ಥಿಕ ಸಹಾಯ

ವಾರ್ಷಿಕ ₹20,000 (3 ವರ್ಷಗಳ ವರೆಗೆ)

ಅರ್ಜಿ ಸಲ್ಲಿಸಲು ಕೊನೆ ದಿನ

5-2-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಮಾಹಿತಿಗೆ: Short Url: www.b4s.in/praja/DBSDS11

ನರೋತಮ್ ಸೆಖ್ಸಾರಿಯಾ ಸ್ಕಾಲರ್‌ಶಿಪ್ ಪ್ರೋಗ್ರಾಂ 2023

ವಿವರ: ಭಾರತ ಮತ್ತು ವಿದೇಶಗಳಲ್ಲಿನ ಉನ್ನತ-ಶ್ರೇಣಿಯ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಕಾರ್ಯಕ್ರಮವನ್ನು ಮುಂದುವರಿಸಲು ಸಿದ್ಧರಿರುವ ಪ್ರತಿಭಾನ್ವಿತ ಭಾರತೀಯ ವಿದ್ಯಾರ್ಥಿಗಳಿಗೆ ನರೋತಮ್ ಸೆಖ್ಸಾರಿಯಾ ಫೌಂಡೇಶನ್ ನೀಡುವ ಅವಕಾಶವಾಗಿದೆ.

ಅರ್ಹತೆ: ಭಾರತೀಯ ಪ್ರಜೆಗಳಾಗಿದ್ದು, 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮತ್ತು ಮಾನ್ಯತೆ ಪಡೆದ ಭಾರತೀಯ ವಿಶ್ವವಿದ್ಯಾಲಯದಿಂದ ಪದವಿ ಪಡೆದವರಿಗೆ ಮುಕ್ತವಾಗಿದೆ. ಅರ್ಜಿದಾರರು ಮುಂಬರುವ ಸೆಮಿಸ್ಟರ್ ಅನ್ನು ಪ್ರಾರಂಭಿಸಲು ಉನ್ನತ ಶ್ರೇಣಿಯ ಸಂಸ್ಥೆಗಳಲ್ಲಿ ಸ್ನಾತಕೋತ್ತರ, ಪಿಎಚ್.ಡಿ ಪದವಿಯನ್ನು ಮುಂದುವರಿಸಲು ಯೋಜಿಸುತ್ತಿರಬೇಕು.

ಆರ್ಥಿಕ ಸಹಾಯ: ಬಡ್ಡಿರಹಿತ ಸಾಲ, ಸ್ಕಾಲರ್‌ಶಿಪ್‌ಗಳು

ಅರ್ಜಿ ಸಲ್ಲಿಸಲು ಕೊನೆ ದಿನ: 16-03-2023

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಮಾಹಿತಿಗೆ: Short Url:www.b4s.in/praja/NSSP4

ಪಿಯುಸಿ ಪರೀಕ್ಷೆ ದಿಕ್ಸೂಚಿ

ಭೌತವಿಜ್ಞಾನ

37) ಬಹುಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ

1)……………..ದ್ಯುತಿಕೋಶವು ಅವೆಕೆಂಪು ಕಿರಣಗಳಿಗೆ ಸಂವೇದಿಯಾಗಿರುವುದರಿಂದ ಅದನ್ನು ಜ್ವಲನ ಮಂಡಲದಲ್ಲಿ ಬಳಸುತ್ತೇವೆ.

ಎ) ಸೀಸದ ಸಲ್ಫೈಡ್ ಬಿ) ಕಬ್ಬಿಣ ಸಲ್ಫೇಡ್
ಸಿ) ತಾಮ್ರದ ಸಲ್ಫೈಡ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಸೀಸದ ಸಲ್ಫೈಡ್

2) ಯಾವ ಕನಿಷ್ಠ ಶಕ್ತಿಗೆ ಎಲೆಕ್ಟ್ರಾನುಗಳು ಲೋಹದ ಮೇಲ್ಮೈಯಿಂದ ಹೊರ ಬರುತ್ತವೆಯೋ ಆ ಚೈತನ್ಯವನ್ನು ……………ಎಂದು ಕರೆಯುತ್ತಾರೆ. ಅದನ್ನು 0ಸಂಕೇತದಿಂದ ಸೂಚಿಸಲಾಗುತ್ತದೆ ಮತ್ತು ಅದನ್ನು eVನಲ್ಲಿ (ಎಲೆಕ್ಟ್ರೋನ್ ವೋಲ್ಟ್) ಅಳತೆ ಮಾಡಲಾಗುತ್ತದೆ.

ಎ) ಅಕರ್ಯಫಲನ ಬಿ) ಸಕಾರ್ಯ ಫಲನ
ಸಿ) ಕರ್ಯಫಲನ ಡಿ) ಚದುರುವಿಕೆಯ ಧ್ರುವೀಕರಣ

ಉತ್ತರ:- (ಸಿ) ಕರ್ಯಫಲನ

3) ಬದಲಾಗುವ ಕಾಂತಕ್ಷೇತ್ರಗಳು ಹತ್ತಿರವಿರುವ ಲೋಹದ ತುಂಡುಗಳಲ್ಲಿ ವಿದ್ಯುತ್‌ಪ್ರವಾಹದ ಸುಳಿಗಳನ್ನುಂಟು ಮಾಡುತ್ತದೆ, ನಂತರದಲ್ಲಿ ಶಾಖವಾಗಿ ಚದುರಿ ಹೋಗುತ್ತದೆ. ಇಂತಹ ವಿದ್ಯುತ್ ಪ್ರವಾಹವನ್ನು ……………ಎನ್ನುವರು.

ಎ) ರಾಮನ್ ಪರಿಣಾಮ ಬಿ) ಎಡ್ಡಿ ವಿದ್ಯುತ್ ಪ್ರವಾಹ
ಸಿ) ದ್ಯುತಿ ಎಲೆಕ್ಟ್ರಾನುಗಳು ಡಿ) ಆಂಶಿಕ ಧ್ರುವೀಕೃತ ಬೆಳಕು

ಉತ್ತರ:- (ಬಿ) ಎಡ್ಡಿ ವಿದ್ಯುತ್ ಪ್ರವಾಹ

4) ಮಾನವನ ಕಣ್ಣುಗ್ರಹಿಸುವ ಬೆಳಕನ್ನು ಅಳೆಯುವ ವಿಭಾಗವನ್ನು ……………….ಎನ್ನುತ್ತೇವೆ.

ಎ) ದೃಷ್ಟಿ ಕೋಶ ಬಿ) ಪ್ರಭಾ ಮಾಪನ ((Photometry)
ಸಿ) ದೃಷ್ಟಿ ಗೋಚರ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಬಿ) ಪ್ರಭಾ ಮಾಪನ ((Photometry)

5) ಚದುರುವಿಕೆಯ ಪ್ರಮಾಣವು ತರಂಗಾಂತರದ ನಾಲ್ಕನೇ ಘಾತಕ್ಕೆ ವಿಲೋಮ ಅನುಪಾತದಲ್ಲಿ ಇರುತ್ತದೆ. ಇದನ್ನು …………………….. ಎನ್ನುತ್ತಾರೆ.

ಎ) ರ‍್ಯಾಲಿಯ ಚದುರುವಿಕೆ ಬಿ) ಬೆಳಕಿನ ಚದುರುವಿಕೆ
ಸಿ) ಸೈಕ್ಲೋಟ್ರಾನ್ ಡಿ) ಅಧ್ರುವೀಕೃತ ಬೆಳಕಿನ ಕಿರಣ

ಉತ್ತರ:- (ಎ) ರ‍್ಯಾಲಿಯ ಚದುರುವಿಕೆ

ಕೆಳಗಿನ ಹೇಳಿಕೆಗಳನ್ನು ಗಮನಿಸಿ

38)ಹಾಲ್‌ವಾಕ್ ಮತ್ತು ಲಿನಾರ್ಡ್ನ ಅವಲೋಕನಗಳ ಬಗ್ಗೆ ಬರೆಯಿರಿ

ಉತ್ತರ:-ಹಾಲ್‌ವಾಕ್ ವಿಲ್‌ಹೆಲ್ಮ್ ಮತ್ತು ಫಿಲಿಫ್ ಲಿನಾರ್ಡ್ ಇವರು 1886-1902ರ ಅವಧಿಯಲ್ಲಿ ದ್ಯುತಿ ವಿದ್ಯುತ್ ಪರಿಣಾಮವನ್ನು ವಿಸ್ತೃತವಾಗಿ ಸಂಶೋಧಿಸಿದರು. ಎರಡು ಎಲೆಕ್ಟ್ರೋಡ್‌ಗಳಿರುವ ನಿರ್ವಾತ ಗಾಜಿನ ಕೊಳವೆಯಲ್ಲಿರುವ ಉತ್ಸರ್ಜಕ ತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಮಂಡಲದಲ್ಲಿ ವಿದ್ಯುತ್ ಸಂಚಾರ ಉಂಟಾಗುತ್ತದೆ ಎಂದು ಲಿನಾರ್ಡ್(1862- 1947)ನು ಅವಲೋಕಿಸಿದನು. ನೇರಳಾತೀತ ಕಿರಣಗಳ ಪತನಗೊಳ್ಳುವಿಕೆ ನಿಂತ ತಕ್ಷಣ ವಿದ್ಯುತ್ ಸಂಚಾರ ಕೂಡ ನಿಲ್ಲುತ್ತದೆ. ಯಾವಾಗ ನೇರಳಾತೀತ ವಿಕಿರಣಗಳು ಉತ್ಸರ್ಜಕ ತಟ್ಟೆಯ ಮೇಲೆ ಪತನಗೊಂಡಾಗ ಎಲೆಕ್ಟ್ರಾನುಗಳು ಹೊರಸೂಸಲ್ಪಟ್ಟು ವಿದ್ಯುತ್ ಕ್ಷೇತ್ರವಿರುವುದರಿಂದ ಧನ ಆವೇಶದ ಸಂಗ್ರಹ ತಟ್ಟೆಯಿಂದ ಆಕರ್ಷಿಸಲ್ಪಡುತ್ತವೆ ಎಂದು ಈ ಅವಲೋಕನದ ಮೂಲಕ ಸೂಚಿಸಿದನು. ನಿರ್ವಾತ ಗಾಜಿನ ಕೊಳವೆಯಲ್ಲಿ ಹರಿಯುವ ಎಲೆಕ್ಟ್ರಾನುಗಳು ವಿದ್ಯುತ್ ಪ್ರವಾಹಕ್ಕೆ ಕಾರಣವಾಗಿವೆ. ಹೀಗೆ ಉತ್ಸರ್ಜಕದ ಮೇಲೆ ಪತನವಾಗುವ ಬೆಳಕು ಬಾಹ್ಯ ತಟ್ಟೆಯ ವಿಭವ ಮತ್ತು ಆವೃತ್ತಿ ತೀವ್ರತೆಗಳು ಹೇಗೆ ಬದಲಾಗುತ್ತವೆ ಎಂದು ಅಧ್ಯಯನ ತಿಳಿಸಿತು.1888ರಲ್ಲಿ ಹಾಲ್‌ವಾಕ್‌ನು ನಿರಂತರ ಅಧ್ಯಯನದೊಂದಿಗೆ ಋಣ ವಿದ್ಯುದಾವೇಶದ ಸತುವಿನ ತಟ್ಟೆಯೊಂದಿಗೆ ವಿದ್ಯುತ್ ಧಾರಕವನ್ನು ಜೋಡಿಸಿದನು. ಸತುವಿನತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ತಟ್ಟೆಯು ಆವೇಶವನ್ನು ಕಳೆದುಕೊಳ್ಳುವುದನ್ನು ಅವಲೋಕಿಸಿದನು. ಅಂತೆಯೇ ತಟಸ್ಥಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳು ಪತನಗೊಂಡಾಗ ಅವುಗಳ ಧನಾತ್ಮಕ ವಿದ್ಯುದಾವೇಶ ಹೊಂದುವುದನ್ನು ಗಮನಿಸಿದನು. ಅದರಂತೆ ಧನ ವಿದ್ಯುದಾವೇಶದ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳೂ ಪತನಗೊಂಡಾಗ ಧನ ವಿದ್ಯುದಾವೇಶದ ವರ್ಧನೆಯನ್ನು ಗಮನಿಸಿದನು. ಸತುವಿನ ತಟ್ಟೆಯಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಋಣ ಆವೇಶಗಳು ಹೊರಸೂಸುವುದನ್ನು ಅವಲೋಕಿಸಿದನು. 1897ರಲ್ಲಿ ಎಲೆಕ್ಟ್ರಾನ್‌ನ ಆವಿಷ್ಕಾರದ ನಂತರ, ಉತ್ಸರ್ಜಕ ತಟ್ಟೆಯ ಮೇಲೆ ಬೆಳಕು ಬಿದ್ದಾಗ ಎಲೆಕ್ಟ್ರಾನುಗಳು ಹೊರಬರುತ್ತವೆ ಎಂಬ ವಿಚಾರವು ಸ್ಫುಟವಾಯಿತು. ಎಲೆಕ್ಟ್ರಾನುಗಳು ಋಣ ವಿದ್ಯುದಾವೇಶ ಹೊಂದಿರುವುದರಿಂದ ಅವುಗಳು ವಿದ್ಯುತ್ ಕ್ಷೇತ್ರದಲ್ಲಿ ಸಂಗ್ರಾಹಕ ತಟ್ಟೆಯ ಕಡೆಗೆ ತಳ್ಳಲ್ಪಡುತ್ತವೆ. ನೇರಳಾತೀತ ಕಿರಣಗಳು ಉತ್ಸರ್ಜಕ ಫಲಕದ ಮೇಲೆ ಬಿದ್ದಾಗ ಕಿರಣಗಳ ಆವೃತ್ತಿಯು ನಿರ್ದಿಷ್ಟವಾದ ಕನಿಷ್ಠ ಮೌಲ್ಯಕ್ಕಿಂತ ಕಡಿಮೆಯಿದ್ದರೆ ಎಲೆಕ್ಟ್ರಾನುಗಳು ಹೊರಬರಲಾರವು ಎಂದು ಹಾಲ್‌ವಾಕ್ ಮತ್ತು ಲಿನಾರ್ಡ್ರವರು ಅವಲೋಕಿಸಿದರು. ಈ ಕನಿಷ್ಠ ಆವೃತ್ತಿಯನ್ನು ನಿರ್ಣಾಯಕ ಆವೃತ್ತಿ ಎನ್ನುತ್ತಾರೆ. ಈ ಕನಿಷ್ಠ ಉತ್ಸರ್ಜಕ ಫಲಕದ ಸ್ವಭಾವದ ಮೇಲೆ ಅವಲಂಬಿತವಾಗಿದೆ. ಕೆಲವು ಲೋಹಗಳಾದ ಸತು, ಕ್ಯಾಡ್ಮಿಯಂ, ಮೆಗ್ನೀಷಿಯಂ ಇವುಗಳು ತಮ್ಮ ಮೇಲ್ಮೈಯಿಂದ ಎಲೆಕ್ಟ್ರಾನ್ ಉತ್ಸರ್ಜನ ಮಾಡಲು ಕಿರು ತರಂಗಾಂತರವುಳ್ಳ ನೇರಳಾತೀತ ಕಿರಣಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತವೆ ಎಂದು ತಿಳಿದು ಬಂದಿತು. ಆದಾಗ್ಯೂ ಕೆಲವು ಆಲ್ಕಲೀ ಲೋಹಗಳಾದ ಲೀಥಿಯಂ, ಸೋಡಿಯಂ, ಪೊಟಾಷಿಯಂ, ಸೀಸಿಯಂ ಮತ್ತು ರುಬಿಡಿಯಮ್‌ಗಳು ಗೋಚರ ಬೆಳಕಿಗೆ ಸ್ಪಂದಿಸುತ್ತವೆ.

39) ಬೆಳಕಿನ ಚದುರುವಿಕೆಯ ಧ್ರುವೀಕರಣ ಬಗ್ಗೆ ಬರೆಯಿರಿ

ಉತ್ತರ:- 1920ರಲ್ಲಿ ಸಿ.ವಿ.ರಾಮನ್ ಮತ್ತು ಅವರ ಸಹೋದ್ಯೋಗಿಗಳು ಅಣುಗಳಿಂದಾಗುವ ಬೆಳಕಿನ ಚದುರುವಿಕೆಯ ಬಗ್ಗೆ ಆಳವಾದ ಅಧ್ಯಯನ ನಡೆಸಿದರು. ಈ ಕಾರ್ಯಕ್ಕಾಗಿ ರಾಮನ್ ಅವರಿಗೆ 1930ರಲ್ಲಿ ನೊಬೆಲ್ ಪುರಸ್ಕಾರ ನೀಡಲಾಯಿತು. ಶುಭ್ರನೀಲಿ ಆಕಾಶದ ಭಾಗದಿಂದ ಬಂದ ಬೆಳಕನ್ನು ತಿರುಗುತ್ತಿರುವ ಪೋಲರಾಯಿಡ್ ಮೂಲಕ ನೋಡಿದಾಗ ತೀವ್ರತೆಯ ಏರಿಕೆ ಮತ್ತು ಇಳಿಕೆ ಕಂಡುಬರುತ್ತದೆ. ಭೂಮಿಯ ವಾತಾವರಣದಲ್ಲಿರುವ ಅಣುಗಳ ಜೊತೆಗೆ ಬೆಳಕು ಸಂಧಿಸಿ ಅದರ ದಿಕ್ಕು (ಚದುರುವಿಕೆಯಿಂದ) ಬದಲಿಸುವುದರಿಂದ ಮಾತ್ರ ಹೀಗಾಗುತ್ತದೆ. ಚಿತ್ರದಲ್ಲಿ ತೋರಿಸುವಂತೆ ಆಪಾತ ಸೂರ್ಯನ ಬೆಳಕು ಅಧ್ರುವೀಕೃತವಾಗಿರುತ್ತದೆ. ಚುಕ್ಕಿಗಳು ಚಿತ್ರದ ಸಮತಲಕ್ಕೆ ಲಂಬವಾಗಿರುವ ಧ್ರುವೀಕರಣವನ್ನು ಸೂಚಿಸುತ್ತದೆ.

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ–


28) ಭೌತ ಮತ್ತು ರಾಸಾಯನಿಕ ಗುಣಗಳ ಆಧಾರದ ಮೇಲೆ ಎಥನಾಲ್ ಮತ್ತು ಎಥನೋಯಿಕ್ ಆಮ್ಲಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ

ಉತ್ತರ

ಎಥನಾಲ್	ಎಥನೋಯಿಕ್ ಆಮ್ಲ
ಭೌತ ಗುಣ	
* ಕೊಠಡಿ ಉಷ್ಣತೆಯಲ್ಲಿ ದ್ರವರೂಪದಲ್ಲಿರುತ್ತದೆ. ಮತ್ತು ಸುವಾಸನೆಯಿಂದ ಕೂಡಿರುತ್ತದೆ.	ಇದು ಕೂಡಾ ಕೊಠಡಿಯ ಉಷ್ಣತೆಯಲ್ಲಿ ದ್ರವರೂಪದಲ್ಲಿದ್ದು ಘಾಟು ವಾಸನೆಯಿಂದ ಕೂಡಿರುತ್ತದೆ.
ಇದು ಉತ್ತಮ ದ್ರಾವಕ	ಇದನ್ನು ಉತ್ತಮ ಸಂಗ್ರಾಹಕವಾಗಿ ಬಳಸುವರು.
ರಾಸಾಯನಿಕ ಗುಣ	
ಎಥನಾಲ್ ಸೋಡಿಯಂ ನೊಂದಿಗೆ ವರ್ತಿಸಿ ಸೋಡಿಯಂ ಎಥಕ್ಸೈಡ್ ಉಂಟು ಮಾಡುತ್ತದೆ.	ಎಥನೋಯಿಕ್ ಆಮ್ಲವು ಸೋಡಿಯಂನೊಂದಿಗೆ ವರ್ತಿಸಿ ಸೋಡಿಯಂ ಎಥನೋಯೇಟ್ ಅನ್ನು ಉಂಟು ಮಾಡುತ್ತದೆ.
ಎಥನಾಲ್ ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋೇಟ್‌ಗಳೊಂದಿಗೆ ವರ್ತಿಸುವುದಿಲ್ಲ	ಎಥನೋಯಿಕ್ ಆಮ್ಲವು ಕಾರ್ಬೋನೇಟ್ ಮತ್ತು ಹೈಡ್ರೋಜನ್ ಕಾರ್ಬೋನೇಟ್ ಗಳೊಂದಿಗೆ ವರ್ತಿಸಿ ಕಾರ್ಬನ್ ಡೈ ಆಕ್ಸೈಡ್ ಅನ್ನು ಬಿಡುಗಡೆ ಮಾಡುತ್ತದೆ

29) ಒಂದು ಹೂವಿನ ನೀಳಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



30) ಉತ್ತಮ ಇಂಧನ ಯಾವುದು?

ಉತ್ತರ:–

* ಹೆಚ್ಚು ಉಷ್ಣ ಬಿಡುಗಡೆ ಮಾಡುವ ಇಂಧನ
* ಕಡಿಮೆ ಹೊಗೆ ಉಂಟು ಮಾಡುವ ಇಂಧನ
* ಸುಲಭವಾಗಿ ದೊರೆಯುವಂಥಹುದು
* ಸುಲಭವಾಗಿ ನಿರ್ವಹಣೆ ಮತ್ತು ಸಾಗಿಸಲು ಸಾಧ್ಯವಾಗುವಂತಹುದು

31) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕ್ಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:–* ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.

* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದುಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ
* ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.
* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿವೆ.

31) ಒಂದು ಆಟೋಮೊಬೈಲ್ ವಾಹನದಲ್ಲಿ ಹಿನ್ನೋಟವನ್ನು ಪಡೆಯಲು ಉಪಯೋಗಿಸಿದ ಪೀನ ದರ್ಪಣದ ವಕ್ರತಾ ತ್ರಿಜ್ಯವು 3.00 m ಇದೆ. ಒಂದು ವೇಳೆ ಬಸ್ಸು ದರ್ಪಣದಿಂದ 5.00 m ದೂರದಲ್ಲಿ ಇದ್ದರೆ ಪ್ರತಿಬಿಂಬದ ಸ್ಥಾನ, ಸ್ವಭಾವ ಮತ್ತು ಗಾತ್ರವನ್ನು ಕಂಡುಹಿಡಿಯಿರಿ

ಪರಿಹಾರ :

ವಕ್ರತಾ ತ್ರಿಜ್ಯ $R = +3.00$ m

ವಸ್ತು ದೂರ $u = -5.00$ m

ಪ್ರತಿಬಿಂಬ ದೂರ $v = ?$

ಪ್ರತಿಬಿಂಬದ ಎತ್ತರ $h' = ?$

ಸಂಗಮ ದೂರ

$$f = \frac{R}{2} = \frac{3.00}{2} = +1.50\text{m}$$

$\frac{1}{v} + \frac{1}{u} = \frac{1}{f}$ ಆಗಿರುವುದರಿಂದ

ಅಥವಾ,

$$\frac{1}{v} = \frac{1}{f} - \frac{1}{u} = \frac{1}{1.50} - \frac{1}{(-5.00)} = \frac{1}{1.50} + \frac{1}{5.00}$$

$$= \frac{5.00+1.50}{7.50}$$

$$v = \frac{+7.50}{6.50} +1.15\text{m}$$

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿಯ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

32) ಮಿಶ್ರ ಲೋಹದ ಬಗ್ಗೆ ಬರೆಯಿರಿ

ಉತ್ತರ:– ಮಿಶ್ರಲೋಹವು ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವಾಗಿದೆ. ಇದನ್ನು ಮೊದಲು ಪ್ರಾಥಮಿಕ ಲೋಹವನ್ನು ಕರಗಿಸಿ ನಂತರ ನಿರ್ದಿಷ್ಟ ಅನುಪಾತದಲ್ಲಿ ಬೇರೆ ಧಾತುಗಳನ್ನು ವಿಲೀನಗೊಳಿಸಿ ತಯಾರಿಸಲಾಗುತ್ತದೆ.

ಮಿಶ್ರಲೋಹಗೊಳಿಸುವಿಕೆಯು ಲೋಹದ ಗುಣಗಳನ್ನು ಹೆಚ್ಚಿಸಬಲ್ಲ ಒಂದು ಉತ್ತಮ ವಿಧಾನವಾಗಿದೆ. ಇದರಿಂದ ನಮಗೆ ಬೇಕಾದ ಗುಣಗಳನ್ನು ಪಡೆಯಬಹುದು. ಉದಾಹರಣೆಗೆ, ಕಬ್ಬಿಣವು ಅತ್ಯಂತ ವ್ಯಾಪಕವಾಗಿ ಬಳಸುವ ಲೋಹ. ಆದರೆ ಇದನ್ನು ಶುದ್ಧರೂಪದಲ್ಲಿ ಎಂದಿಗೂ ಉಪಯೋಗಿಸಲು ಸಾಧ್ಯವಿಲ್ಲ. ಕಾರಣ ಶುದ್ಧ ಕಬ್ಬಿಣವು ತುಂಬಾ ಮೃದುವಾಗಿರುತ್ತದೆ ಮತ್ತು ಉಷ್ಣತೆ ನೀಡಿದಾಗ ಸುಲಭವಾಗಿ ಹಿಗ್ಗುತ್ತದೆ. ಆದರೆ ಇದಕ್ಕೆ ಸ್ವಲ್ಪ ಕಾರ್ಬನ್‌ಅನ್ನು (0.05%) ಸೇರಿಸಿದರೆ ಗಟ್ಟಿ ಮತ್ತು ಬಲಯುತವಾಗುತ್ತದೆ. ಕಬ್ಬಿಣಕ್ಕೆ ನಿಕ್ಕಲ್ ಮತ್ತು ಕ್ರೋಮಿಯಂ ಅನ್ನು ಸೇರಿಸಿದರೆ ಕಲೆರಹಿತ ಉಕ್ಕನ್ನು ಪಡೆಯಬಹುದು. ಇದು ಗಟ್ಟಿಯಾಗಿರುತ್ತದೆ ಮತ್ತು ತುಕ್ಕು ಹಿಡಿಯುವುದಿಲ್ಲ. ಹಾಗೆಯೇ ಕಬ್ಬಿಣವನ್ನು ಬೇರೆ ವಸ್ತುಗಳ ಜೊತೆ ಮಿಶ್ರಗೊಳಿಸಿದರೆ ಅದರ ಗುಣದಲ್ಲಿ ಬದಲಾವಣೆಯಾಗುತ್ತದೆ. ವಾಸ್ತವವಾಗಿ, ಕೆಲವು ವಸ್ತುಗಳ ಮಿಶ್ರಣದಿಂದ ಯಾವುದೇ ಲೋಹದ ಗುಣಗಳನ್ನು ಬದಲಾಯಿಸಬಹುದು. ಸೇರಿಸುವ ವಸ್ತುವು ಲೋಹ ಅಥವಾ ಅಲೋಹವಾಗಿರಬಹುದು.

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸುಖದಲ್ಲೂ ಭಯ, ಅಪಾಯ ಇದೆ.
ಕಷ್ಟದಲ್ಲೂ ಹಿತ, ಭರವಸೆ ಇದೆ.

– ಫ್ರಾನ್ಸಿಸ್ ಬೇಕನ್

ಮಹದಾಯಿ ಯೋಜನೆ: ಶೀಘ್ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಿ

ಹುಬ್ಬಳ್ಳಿ-ಧಾರವಾಡ, ಗದಗ, ನರಗುಂದ, ನವಲಗುಂದ ಸೇರಿದಂತೆ ಕಿತ್ತೂರು ಕರ್ನಾಟಕದ ಹದಿಮೂರು ಪಟ್ಟಣ ಪ್ರದೇಶಗಳು ಹಾಗೂ ನೂರಕ್ಕೂ ಅಧಿಕ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದ ಮಹದಾಯಿ (ಕಳಸಾ-ಬಂಡೂರಿ ನಾಲಾ) ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗವು ಕೊನೆಗೂ ಅನುಮೋದನೆಯನ್ನು ನೀಡಿದೆ. ಯೋಜನೆಗೆ ಶಾಸನಬದ್ಧ ಅನುಮತಿಗಳನ್ನು ಪಡೆಯಲು ಇದ್ದ ರಹದಾರಿ. ಈ ಮಧ್ಯೆ, ಯೋಜನೆಯ ಅನುಷ್ಠಾನಕ್ಕಾಗಿ ಬೇಕಾದ 33 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಲು ರಾಜ್ಯ ಅರಣ್ಯ ಇಲಾಖೆಯಿಂದಲೂ ಒಪ್ಪಿಗೆ ದೊರೆತಿದ್ದು, ಆ ಪ್ರಸ್ತಾವ ಕೂಡ ಅನುಮೋದನೆಗಾಗಿ ಕೇಂದ್ರ ಅರಣ್ಯ ಇಲಾಖೆಗೆ ಸಲ್ಲಿಕೆಯಾಗಿದೆ. ಕುಡಿಯುವ ನೀರಿನ ಯೋಜನೆ ಇದಾಗಿದ್ದರಿಂದ ಪರಿಸರ ಇಲಾಖೆಯಿಂದ ಒಪ್ಪಿಗೆ ಪಡೆಯುವ ಪ್ರಮೇಯ ಬರುವುದಿಲ್ಲ. ಹೀಗಾಗಿ ಯೋಜನೆಯ ಅನುಷ್ಠಾನದ ಹಾದಿಯಲ್ಲಿದ್ದ ಬಹುತೇಕ ಅಡೆತಡೆಗಳು ಈಗ ನಿವಾರಣೆ ಆದಂತಾಗಿದೆ. ಇನ್ನು ಯಾವುದೇ ವಿಳಂಬವಿಲ್ಲದೆ ಯೋಜನೆಯನ್ನು ಕಾರ್ಯಗತಗೊಳಿಸುವತ್ತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಪ್ರವೃತ್ತರಾಗಬೇಕು. ಮಹದಾಯಿ ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಅವರಿಗೆ ಇದರ ಅವಸರ, ನರಗುಂದ ಭಾಗದಲ್ಲಿರುವ ನೀರಿನ ಬೇಡಿಕೆ ಎಂತಹದ್ದು ಎಂಬುದು ಚೆನ್ನಾಗಿ ಗೊತ್ತಿರಬೇಕು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ಬಿಜೆಪಿಯ ಹಲವು ನಾಯಕರು ಮಹದಾಯಿ ಹೋರಾಟವನ್ನು ರಾಜಕೀಯದ ಏಣಿಯಾಗಿ ಮಾಡಿಕೊಂಡವರು. ಯೋಜನೆಯ ಶೀಘ್ರ ಅನುಷ್ಠಾನದ ಹೊಣೆ ಅವರ ಮೇಲೂ ಇದೆ. ಕೇಂದ್ರದಿಂದ ಸಿಗಬೇಕಾದ ಇತರ ಅನುಮೋದನೆಗಳನ್ನು ಶೀಘ್ರವಾಗಿ ಕೊಡಿಸಲು ಅವರು ಪ್ರಯತ್ನಿಸಬೇಕು. ಕಿತ್ತೂರು ಕರ್ನಾಟಕದ ಜನ ಈ ಯೋಜನೆಯ ಅನುಷ್ಠಾನದಿಂದ ಸಿಗುವ ನೀರಿಗಾಗಿ ನಾಲ್ಕೂವರೆ ದಶಕಗಳಿಂದ ಕಾದಿದ್ದಾರೆ ಎನ್ನುವುದನ್ನು ಎಲ್ಲರೂ ನೆನಪಿಡಬೇಕು. ಎಲ್ಲ ಪಕ್ಷಗಳೂ ಮಹದಾಯಿ ಯೋಜನೆಯ ಹೆಸರಿನಲ್ಲಿ ರಾಜಕೀಯ ಮಾಡಿ, ಜನರ ಆಸೆಗೆ ತಣ್ಣೀರು ಎರಚುತ್ತಾ ಬಂದಿರುವುದು ಸುಳ್ಳಲ್ಲ. ಅಧಿಕಾರಸ್ಥರ ಮೈಮರೆವಿನಿಂದ ಆ ಭಾಗದ ಜನರ ಸಹನೆಯ ಕಟ್ಟೆ ಒಡೆದು, ಅವರು ವರ್ಷಗಟ್ಟಲೆ ಹೋರಾಟ ನಡೆಸಿದ್ದನ್ನೂ ಮರೆಯುವಂತಿಲ್ಲ.



ಕುಡಿಯುವ ನೀರಿನ ಈ ಯೋಜನೆಯನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಬದ್ಧತೆ ತೋರಬೇಕು

ಮಹದಾಯಿ ಜಲ ವಿವಾದಗಳ ನ್ಯಾಯಮಂಡಳಿಯು ಕಳಸಾ-ಬಂಡೂರಿ ನಾಲಾ ಯೋಜನೆಗೆ 3.90 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ 2018ರ ಆಗಸ್ಟ್ 14ರಂದೇ ಆದೇಶ ಹೊರಡಿಸಿದೆ. ಯೋಜನೆಗೆ ಸಂಬಂಧಿಸಿದ ಕಡತವು ವರ್ಷಗಳವರೆಗೆ ಒಂದಿಂಚೂ ಕದಲಿರಲಿಲ್ಲ. ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ನಾಲ್ಕು ತಿಂಗಳಷ್ಟೇ ಬಾಕಿ ಇರುವಾಗ ಜಲ ಆಯೋಗವು ಡಿಪಿಆರ್‌ಗೆ ಅನುಮೋದನೆ ನೀಡಿದೆ. ಇದರ ಹಿಂದೆ ರಾಜಕೀಯ ಲೆಕ್ಕಾಚಾರ ಇದೆ ಎನ್ನುವುದರಲ್ಲಿ ಯಾವುದೇ ಅನುಮಾನ ಇಲ್ಲ. ಹುಬ್ಬಳ್ಳಿಯಲ್ಲಿ ಸೋಮವಾರ (ಜ. 2) ಕಾಂಗ್ರೆಸ್ ಆಯೋಜಿಸಿರುವ ಮಹದಾಯಿ ಜನಾಂದೋಲನವೂ ಚುನಾವಣೆಯನ್ನು ಗುರಿಯಾಗಿಸಿಕೊಂಡಿರುವಂತಹದ್ದೇ. ಜಲ ಆಯೋಗದ ಅನುಮೋದನೆ, ಹುಬ್ಬಳ್ಳಿಯಲ್ಲಿ ಆಯೋಜಿಸಿರುವ ಜನಾಂದೋಲನ - ಎರಡರ ಹಿಂದಿನ ರಾಜಕೀಯ ಏನೇ ಇರಲಿ, ಮಹದಾಯಿ ಯೋಜನೆ ಕಾಲಮಿತಿಯಲ್ಲಿ ಅನುಷ್ಠಾನಗೊಳ್ಳಬೇಕು ಎನ್ನುವುದು ಎಲ್ಲರೂ ಒಪ್ಪುವಂತಹ ವಿಚಾರ. ಟೆಂಡರ್ ಪ್ರಕ್ರಿಯೆಯನ್ನು ಆದಷ್ಟು ಬೇಗ ಶುರು ಮಾಡುವುದಾಗಿ ಮುಖ್ಯಮಂತ್ರಿಯವರೇನೋ ಪ್ರಕಟಿಸಿದ್ದಾರೆ. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಹೇಗೂ ₹ 500 ಕೋಟಿಯನ್ನು ಎತ್ತಿಟ್ಟಿದೆ. ಚುನಾವಣೆಯ ಕಾವು ಇನ್ನಷ್ಟು ಏರುವುದರ ಒಳಗಾಗಿ ಎಷ್ಟು ಸಾಧ್ಯವೋ ಅಷ್ಟು ಬೇಗ ಕಾಮಗಾರಿಯನ್ನು ಆರಂಭಿಸಬೇಕು. ಹಾಗೆಯೇ ಕೇಂದ್ರದಲ್ಲಿ ಮತ್ತು ಕರ್ನಾಟಕ, ಗೋವಾ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರಗಳೇ ಇವೆ. ಮಹಾರಾಷ್ಟ್ರ ಸರ್ಕಾರದಲ್ಲೂ ಬಿಜೆಪಿ ಪಾಲುದಾರ ಪಕ್ಷ. ಈ ಸನ್ನಿವೇಶವನ್ನು ಬಳಸಿಕೊಂಡು ಮಹದಾಯಿ ಯೋಜನೆಗೆ ಸಂಬಂಧಿಸಿದ ಎಲ್ಲ ಕೋರ್ಟ್ ಪ್ರಕರಣಗಳನ್ನು ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಬೊಮ್ಮಾಯಿ ಹಾಗೂ ಜೋಶಿ ಅವರು ಪ್ರಯತ್ನಿಸಬೇಕು. ಮಹದಾಯಿ ಯೋಜನೆಗೆ 2002ರಲ್ಲಿಯೇ ಒಪ್ಪಿಗೆ ಸಿಕ್ಕಿತ್ತು. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಆ ವೇಳೆಗೆ ಯೋಜನಾ ಪ್ರದೇಶದ ಜನರಿಗೆ ನೀರಿನ ಸೌಲಭ್ಯವೂ ಸಿಕ್ಕಿರುತ್ತಿತ್ತು. ಗೋವಾ ಸರ್ಕಾರ ತಕರಾರು ಎತ್ತಿದ್ದರಿಂದ ಬಿಜೆಪಿ ನೇತೃತ್ವದ ಆಗಿನ ಎನ್‌ಡಿಎ ಸರ್ಕಾರವು ಕೊಟ್ಟ ಅನುಮತಿಯನ್ನು ಹಿಂದಕ್ಕೆ ಪಡೆದಿತ್ತು. ನೀರು ವ್ಯರ್ಥವಾಗಿ ಹರಿದು ಸಮುದ್ರ ಪಾಲಾದರೂ ಪರವಾಗಿಲ್ಲ, ಪಕ್ಕದ ರಾಜ್ಯಕ್ಕೆ ಮಾತ್ರ ಸಿಗಬಾರದು ಎನ್ನುವ ಗೋವಾ ಸರ್ಕಾರದ ಧೋರಣೆ ಒಪ್ಪುವಂತಹದ್ದಲ್ಲ. ಅದನ್ನು ಶಾಸನಬದ್ಧವಾದ ಎಲ್ಲ ವೇದಿಕೆಗಳಲ್ಲೂ ಮನವರಿಕೆ ಮಾಡಿಕೊಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಒಂದೊಂದು ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾದಾಗಲೂ ಯೋಜನಾ ವೆಚ್ಚ ಹಲವು ಪಟ್ಟು ಹೆಚ್ಚಿ ಸಾರ್ವಜನಿಕ ಹಣ ಪೋಲಾಗುತ್ತದೆ ಎಂಬುದನ್ನು ನೆನಪಿಡಬೇಕು. ಮಹದಾಯಿ ಯೋಜನೆಯೂ ಅದಕ್ಕೊಂದು ಜ್ವಲಂತ ಸಾಕ್ಷಿಯಾಗಿದೆ.

ಹೊಸ ಭಾಷೆ, ಹೊಸ ನುಡಿಗಟ್ಟು, ಹೊಸ ಕ್ರಿಯೆಗಳ ಸೃಷ್ಟಿಯ ಹೊಣೆ ಎಲ್ಲರಲ್ಲಿರಲಿ

ಹೊಸ ವರ್ಷ: ಹೊಸ ಅರ್ಥಗಳ ಧ್ಯಾನ



ವಿಶ್ಲೇಷಣೆ

ನಟರಾಜ್ ಹುಳಿಯಾರ್

ಹಳೆ ವರ್ಷ ಕಳೆದು, ಹೊಸ ವರ್ಷ ಬರುವ ದಿನ ಇದ್ದಕ್ಕಿದ್ದಂತೆ ಟಿ.ಎಸ್. ಎಲಿಯಟ್ ಕವಿತೆಯ ಸಾಲುಗಳು ನೆನಪಾಗುತ್ತವೆ:

ಕಳೆದ ವರ್ಷದ ಶಬ್ದಗಳು
ಕಳೆದ ವರ್ಷಕ್ಕೆ ಸೇರುವುವು

ಕಳೆದ ವರ್ಷ ಸಾರ್ವಜನಿಕ ವಲಯದಲ್ಲಿ ಮತ್ತೆ ಮತ್ತೆ ಕೇಳಿಬಂದ ದ್ವೇಷದ, ಒಡಕಿನ, ದುರಹಂಕಾರದ ಅಸಹ್ಯಕರ ಶಬ್ದಗಳು ನೆನಪಾದಾಗ ಈ ಕವಿವಾಣಿ ವಾಚ್ಯಾರ್ಥದಲ್ಲಾದರೂ ನಿಜವಾಗಲಿ ಎನ್ನಿಸುತ್ತದೆ!

ಮನೆಯಲ್ಲಿ ಚಾಕು ಚೂರಿ ರೆಡಿಯಿಟ್ಟುಕೊಳ್ಳಿ ಎಂಬಂಥ ಚೀತ್ಕಾರಗಳನ್ನು ಕಳೆದ ವರ್ಷದ ಕಸದಬುಟ್ಟಿಗೆ ಎಸೆದು, 'ಮನೆಯಲ್ಲಿ ಒಳ್ಳೊಳ್ಳೆಯ ಪುಸ್ತಕ ಇಟ್ಟುಕೊಳ್ಳಿ', 'ಒಳ್ಳೊಳ್ಳೆಯ ಹಾಡುಗಳನ್ನು ಕೇಳಿಸಿಕೊಳ್ಳಿ', 'ಬಡ ಹುಡುಗ, ಹುಡುಗಿಯರಿಗೆ ನೆರವಾಗಿ' ಎಂಬಂಥ ಹಳೆಯ ಸನ್ಮಾರ್ಗದ ಮಾತುಗಳನ್ನು ಹೊಸದಾಗಿ ಕೇಳಿಸಿಕೊಳ್ಳಲು ಜನ ತಯಾರಾಗಲಿ ಎಂದು ಹಾರೈಸಬೇಕೆನ್ನಿಸುತ್ತದೆ.

ಮಾಧ್ಯಮಗಳಲ್ಲಿ ನಿತ್ಯ ಕಾಣಿಸಿಕೊಳ್ಳುವ ನಾಯಕರು, ಧರ್ಮಗುರುಗಳು, ಚರ್ಚಾಪಟುಗಳು ಬಾಯಿತಪ್ಪಿಯಾದರೂ ಒಳ್ಳೆಯ ಮಾತುಗಳನ್ನಾಡಲು ಹೊಸ ವರ್ಷವಾದರೂ ನೆಪವಾಗಬಹುದೆ? ಸಮಾಜದ ರೋಗಗಳ ವಿರುದ್ಧ ಪ್ರಾಮಾಣಿಕವಾಗಿ ಹೋರಾಡುವವರು ಕೂಡ, 'ಅಲ್ಪಕಾಲ ಕೆಡುಕಿನ ವಿರುದ್ಧ ಹೋರಾಟ; ದೀರ್ಘಕಾಲ ಒಳಿತಿನ ಜೊತೆಗೆ ಶಾಂತಿ' ಎಂಬ ಲೋಹಿಯಾ ಮಾತಿನಲ್ಲಿರುವ ವಿವೇಕವನ್ನು ಮೆಲುಕು ಹಾಕಬಹುದೆ? ರಾಕ್ಷಸರ ವಿರುದ್ಧ ಮಾತಾಡುವವರು ತಾವೇ ರಾಕ್ಷಸರಾಗಿಬಿಡುವ ಅಪಾಯ ಕುರಿತ ತತ್ವಜ್ಞಾನಿ ನೀಷೆಯ ಮಾತು ನಮ್ಮನ್ನು ಎಚ್ಚರಿಸಬಹುದೆ?

ಪ್ರತಿಯೊಂದು ಭಾವಕ್ಕೂ ಹೊಸ ಶಬ್ದ ಹುಡುಕಲು ಕಾತರಿಸುವ ಕವಿಗೆ ಹಳೆಯ ಶಬ್ದಗಳ ಬಗ್ಗೆ ದಣಿವಾಗುವುದು ಸಹಜ. ಆದರೆ ಸಮಾಜದ ಆರೋಗ್ಯದ ಬಗ್ಗೆ ಕಾಳಜಿಯುಳ್ಳವರಿಗೆ ಕಳೆದ ವರ್ಷದ ಅರ್ಥಪೂರ್ಣ ಶಬ್ದಗಳನ್ನೆಲ್ಲ ಹಿಂದೆ ಬಿಟ್ಟು ಹೊರಡುವ ಲಕ್ಷುರಿ ಇರಲಾರದು.

ಪ್ರತೀ ವರ್ಷದಲ್ಲೂ ಹಳೆಯ ಉದಾತ್ತ ಶಬ್ದಗಳ, ಐಡಿಯಾಗಳ ಅರ್ಥ ಬೆಳೆಯುತ್ತಿರಬೇಕಾಗುತ್ತದೆ. ಉದಾಹರಣೆಗೆ, 'ಭಾರತ್ ಜೋಡೊ' ನುಡಿಗಟ್ಟು ದೇಶದ ಕೆಲವು ವಲಯಗಳಲ್ಲಾದರೂ ಮೂಡಿಸಿರುವ ಪ್ರೀತಿಯ ಭಾವ ವಿಶಿಷ್ಟವಾದುದು. ರಾಹುಲ್ ಗಾಂಧಿಯವರ ಜೊತೆಗೆ ನಡೆಯುತ್ತಿರುವ ಕನ್ಹಯ್ಯಾ ಕುಮಾರ್, ಯೋಗೇಂದ್ರ ಯಾದವ್ ಥರದ ಕ್ರಿಯಾಶೀಲ ನಾಯಕರ ಜೊತೆಗೆ, ಆಗಾಗ್ಗೆ ತುಷಾರ್ ಗಾಂಧಿ, ರಾಜಮೋಹನ್ ಗಾಂಧಿ, ಮೇಧಾ ಪಾಟ್ಕರ್ ಥರದ ಕಾಳಜಿವಂತರ ನಡಿಗೆಯೂ ಸೇರಿ, ಭಾರತವನ್ನು ಬೆಸೆಯಬೇಕೆಂಬ ಕಾತರ ಜನಮಾನಸದಲ್ಲಿ ಹುಟ್ಟತೊಡಗಿದೆ. ನಿಜಕ್ಕೂ ಹೊಸ ಕಾಲವನ್ನು ಸೃಷ್ಟಿಸಬಲ್ಲೆವು ಎಂದು ಪ್ರಾಮಾಣಿಕವಾಗಿ ನಂಬಿ ಭಾರತ್ ಜೋಡೊ ಸೇರುತ್ತಿರುವ ತರುಣ, ತರುಣಿಯರ ಮಾತುಗಳು ದೇಶದಲ್ಲಿ ಹೊಸ ಚೈತನ್ಯ ಹುಟ್ಟಿಸುವಂತಿವೆ. ಆದರೂ, ಭಾರತ್ ಜೋಡೊದಲ್ಲೂ ಕೆಲವರ ಬಾಯಿಗೆ ಮೈಕ್ ಹಿಡಿದರೆ, ಭಾರತವನ್ನು ಜೋಡಿಸುವ ಉದಾರ ಭಾವ ಹಬ್ಬಿಸುವ ಬದಲು ಯಾಂತ್ರಿಕವಾಗಿ ಚೀರತೊಡಗುತ್ತಾರೆ! ಸಂಜೆಯಾದರೆ ಮೈಮೇಲೆ ಬಂದವರಂತೆ ಕಿರುಚುವ ಹಿರಿಯಣ್ಣಗಳ ಚಾಳಿ ಎಲ್ಲ ಮಾತುಗಾರರಿಗೂ ತಗುಲಿ, ಇಡೀ ಸಮಾಜವೇ 'ಚೀರು ಸಮಾಜ'ವಾಗುತ್ತಿದೆಯೆ?

ಈ ನಡುವೆ, ಆರ್‌ಎಸ್‌ಎಸ್‌ನ ಅಸಲಿ ಮುಖವನ್ನು ಬಿಡಿಸಿಟ್ಟಿರುವ ದೇವನೂರ ಮಹಾದೇವ ಅವರ ಪುಸ್ತಕ 'ಆರ್‌ಎಸ್‌ಎಸ್: ಆಳ ಮತ್ತು ಅಗಲ' ಲೇಖಕರ ಹಕ್ಕನ್ನೇ ಬಿಟ್ಟುಕೊಟ್ಟು ಲಕ್ಷಾಂತರ ಪ್ರತಿಗಳು ಮುದ್ರಣವಾಗಿ, ಎಲ್ಲೆಡೆ ಪ್ರಸಾರಗೊಂಡಿದೆ; ಈ ಬೆಳವಣಿಗೆ ಕರ್ನಾಟಕದ ಬೌದ್ಧಿಕ ಲೋಕದ ಸಕ್ರಿಯತೆಯ ಗುಣವನ್ನು, ಆರೋಗ್ಯವನ್ನು ಮತ್ತೆ ಸಾಬೀತು ಮಾಡಿದೆ. ನಾಗಮೋಹನದಾಸ್ ಅವರ ಪುಸ್ತಕ 'ಸಂವಿಧಾನ ಓದು' ಹಾಗೂ ಅಭಿಯಾನ ಲಕ್ಷಾಂತರ ಜನರನ್ನು ತಲುಪಿದೆ. ಮಂಗ್ಳೂರ ವಿಜಯ ಅವರ 'ನಮ್ಮ ಸಂವಿಧಾನ' ಹತ್ತಾರು ಕಾಲೇಜುಗಳನ್ನು ಮುಟ್ಟಿದೆ. ಓದುಗರಲ್ಲಿ ಉದಾತ್ತ ಭಾವ ಹುಟ್ಟಿಸುವ ಡಿ.ಎಸ್.ನಾಗಭೂಷಣ ಅವರ 'ಗಾಂಧಿ ಕಥನ' 2022ರ ಕೊನೆಗೆ 25 ಮುದ್ರಣಗಳನ್ನು ಕಂಡಿದೆ. ಈ ಬಗೆಯ ಪುಸ್ತಕಗಳನ್ನು ನಾಡಿನೆಲ್ಲೆಡೆ ಕೊಂಡೊಯ್ಯುತ್ತಾ ಜನರನ್ನು ಎಚ್ಚರದಲ್ಲಿಟ್ಟಿರುವ ನಿಸ್ವಾರ್ಥಿ ಬಳಗಗಳು ಹಾಗೂ ಇಂಥ ಪುಸ್ತಕಗಳನ್ನು ಕೊಂಡು ಓದುತ್ತಿರುವ ಕನ್ನಡದ ವಿಭಿನ್ನ ತಲೆಮಾರುಗಳ ಮುಕ್ತತೆ ಈ ನಾಡಿನಲ್ಲಿ ಒಳಿತಿನ ಸ್ವೀಕಾರ ಸದಾ ಜಾಗೃತವಾಗಿರುವುದನ್ನು ಒತ್ತಿ ಹೇಳುತ್ತದೆ.


ಕೇವಲ ಎಫೆಕ್ಟಿಗಾಗಿ ಗಂಟಿಕ್ಕಿದ ಮುಖಗಳು, ಕ್ಲೀಷಾಮಯ ಕ್ರೂರ ಭಾಷೆ, ನೆತ್ತರ ಚೆಲ್ಲಾಟದ ಮೂಲಕ ಪ್ರೇಕ್ಷಕರ ಕ್ರೌರ್ಯವನ್ನೇ ಬಡಿದೆಬ್ಬಿಸಿದರೂ, 'ಒಳ್ಳೆಯ ಸಂದೇಶ ಕೊಟ್ಟಿದ್ದೇವೆ' ಎಂದು ಹೇಳಿಕೊಳ್ಳುವ ಹೊಣೆಗೇಡಿ ಸಿನಿಮಾಗಳ ನಡುವೆ, ಅಮೋಘವರ್ಷ ಅವರ 'ಗಂಧದ ಗುಡಿ' ಗೆದ್ದಿದ್ದು ಜನರೊಳಗಿನ ಸಾತ್ವಿಕ ಭಾವದ ಗೆಲುವಿನಂತಿದೆ. ಪುನೀತ್ ರಾಜ್‌ಕುಮಾರ್ ನಟಿಸಿದ ಕೊನೆಯ ಸಿನಿಮಾದಲ್ಲಿನ ಕರ್ನಾಟಕದ ಪ್ರಕೃತಿ ಪಯಣ ಜನರ ಮನಸ್ಸನ್ನು ಅರಳಿಸಿದೆ; ಹಣವನ್ನೂ ಗಳಿಸಿದೆ. ಇಂಥ ಬೆಳವಣಿಗೆಗಳನ್ನು ಕಂಡಾಗ ಇಲ್ಲಿ ಹೊಸ ಶಬ್ದಗಳು, ಹೊಸ ಮಾರ್ಗಗಳು, ಹೊಸ ಪ್ರಯೋಗಗಳು ಹುಟ್ಟುತ್ತಲೇ ಇರುತ್ತವೆ ಎಂಬ ನೆಮ್ಮದಿ ಮೂಡುತ್ತದೆ.

ಮೊನ್ನೆ ಅಂಬೇಡ್ಕರ್ ಪರಿನಿಬ್ಬಾಣದ ದಿನ ಕರ್ನಾಟಕದ ಹತ್ತು ದಲಿತ ಸಂಘಟನೆಗಳು ಒಗ್ಗೂಡಿ ಸಮಾವೇಶ ನಡೆಸಿದಾಗ ಇಡೀ ಬೆಂಗಳೂರು ನೀಲಿಮಯವಾದ ಅಪೂರ್ವ ಚಿತ್ರ ನೆನಪಾಗುತ್ತದೆ. ಈ ಐಕ್ಯತೆಯ ಸಂದೇಶ ಈ ವರ್ಷದಲ್ಲೂ ಹಬ್ಬಿ ಸಮಾನತೆಯ ಆಶಯದ ಹಲ ಬಗೆಯ ಸಂಘಟನೆಗಳು ಒಂದು ವೇದಿಕೆಯಡಿ ಬರಬಹುದು, ಕರ್ನಾಟಕದ ರಾಜಕೀಯ-ಸಾಮಾಜಿಕ ಚಿತ್ರ ಬದಲಾಗಬಹುದು ಎಂಬ ನಿರೀಕ್ಷೆ ಮೂಡುತ್ತದೆ. ಹೀಗೆ ಒಂದಾಗುವವರು, ಹಳೆಯ ಒಡಕಿನ ಕೊಳೆಬಟ್ಟೆಗಳನ್ನು ಸಾರ್ವಜನಿಕವಾಗಿ ಒಗೆಯುವುದನ್ನು ಬಿಟ್ಟು, ನಿರ್ಮಾಣಾತ್ಮಕ ಕೆಲಸಗಳ ಹೊಸ ಭಾಷೆಯನ್ನು ಹಬ್ಬಿಸುತ್ತಾರೆಂದು ಆಶಿಸೋಣ. ಇವತ್ತು ಸಾರ್ವಜನಿಕ ಸಭೆಗಳಲ್ಲಿ ಮಾತಾಡುವ ಸಜ್ಜನರು ಕೂಡ ದುಷ್ಟರ ಮಾತುಗಳನ್ನು ಟೀಕಿಸಲು ಹೋಗಿ, ಅಂಥವರನ್ನೇ ಮತ್ತೆ ಮತ್ತೆ ಉಲ್ಲೇಖಿಸಿ, ಅವರ ಹೀನ ಮಾತುಗಳನ್ನೇ ಇನ್ನಷ್ಟು ಚಲಾವಣೆಗೆ ತರುತ್ತಿರುತ್ತಾರೆ! ನಮ್ಮ ಸಭ್ಯ ಸಾರ್ವಜನಿಕ ಭಾಷಣಕಾರರು ಈ ಅಪಾಯದಿಂದಲೂ ತಪ್ಪಿಸಿಕೊಳ್ಳಬೇಕಾಗಿದೆ.

ಮುಂಬರಲಿರುವ ದಿನಗಳಲ್ಲಿ ಕರ್ನಾಟಕ ಚುನಾವಣೆಯ ಮೂಡ್‌ಗೆ ತಿರುಗಲಿದೆ. ಚುನಾವಣೆಯ ಕಾಲದ ಚುರುಕಿನ, ಚಾಲಾಕಿನ ಸವಾಲ್- ಜವಾಬ್ ಲೋಕ ಗತಕಾಲಕ್ಕೆ ಸೇರಿಹೋಗಿದೆ. ಇನ್ನು ಮೂರು ತಿಂಗಳು ಕೊಳಕು ಮಾತುಗಳ ಚೀತ್ಕಾರವೇ ಕೇಳಿಬರುವ ಭಯ ಸಜ್ಜನರನ್ನು ಮುತ್ತಿದ್ದರೆ ಅಚ್ಚರಿಯಲ್ಲ. ಈ ಕಾಯಿಲೆಗೆ ಮದ್ದಿಲ್ಲ ಎಂದು ನಾವು ಸಿನಿಕರಾಗಬೇಕಾದ್ದಿಲ್ಲ. ಯಾವ ಮಾನವಂತ ತಾಯಿ, ತಂದೆಗಳೂ ತಮ್ಮ ಮಕ್ಕಳು ಈ ಕಾಲದ ಕೆಲವು ನಾಯಕರ ಹೀನ ಭಾಷೆಯನ್ನು, ದುರುಳ ವರ್ತನೆಯನ್ನು ಅನುಸರಿಸಲೆಂದು ಬಯಸಲಾರರು. ಇಂಥ ಹೊಲಸು ಬಾಯಿಯ ನಾಯಕರು ಯಾವ ಪಕ್ಷದಲ್ಲಿದ್ದರೂ ಅವರನ್ನು ಮುಲಾಜಿಲ್ಲದೆ ಕಸದ ಬುಟ್ಟಿಗೆ ಹಾಕುವ ಛಾತಿ, ಕರ್ತವ್ಯ ತಂದೆ, ತಾಯಂದಿರಿಗಿದೆ; ಆ ಮೂಲಕವೂ ಹಿರಿಯರು ಮಕ್ಕಳಿಗೆ ಹೊಸ ರಾಜಕೀಯ ದಾರಿ ತೋರಿಸುವ ಅಗತ್ಯವಿದೆ. ಬರೀ ನಾನ್ಸೆನ್ಸ್ ಮಾತಾಡಿಕೊಂಡು ಅಡ್ಡಾಡಿರುವ ಅನೇಕ ನಾಯಕರು ಕಳೆದ ಐದು ವರ್ಷಗಳಲ್ಲಿ ಒಂದು ಒಳ್ಳೆಯ ಕೆಲಸವನ್ನೂ ಮಾಡಿಲ್ಲವಲ್ಲ ಎಂಬ ಪ್ರಶ್ನೆ ಮತದಾರರ ಮನಸ್ಸಲ್ಲಿ ಹುಟ್ಟಲಿ. ಅಷ್ಟೇ ಮುಖ್ಯವಾಗಿ, ಬೇಜವಾಬ್ದಾರಿ ರಾಜಕಾರಣಿಗಳಿಗೆ ತಮ್ಮ ಬಗ್ಗೆ ಜನರಲ್ಲಿ ಹುಟ್ಟಿರುವ ಅಸಹ್ಯಭಾವದ ಝಳ ಒಂಚೂರಾದರೂ ತಟ್ಟಿ, ಸಡಿಲ ನಾಲಗೆಯ, ಸಂಕುಚಿತ ಬುದ್ಧಿಯ ನಾಯಕರ ಬಾಲಗಳು ಕೊಂಚ ಮುದುರಲಿ.

ಗುಜರಾತಿನ ಮೊರ್ಬಿ ಸೇತುವೆ ಕುಸಿದಾಗ, ಜೀವದ ಹಂಗು ತೊರೆದು ಅಸಹಾಯಕರನ್ನು ರಕ್ಷಿಸಲೆತ್ನಿಸಿದ ಮುಸ್ಲಿಂ ಹುಡುಗರ ಧೈರ್ಯ, ಕಾಳಜಿ ಕಂಡಾದರೂ ಶಾಲಾಕಾಲೇಜುಗಳಲ್ಲಿ ಅಲ್ಪಸಂಖ್ಯಾತರ ಮನ ನೋಯಿಸುವ ಮೇಷ್ಟ್ರುಗಳ, ವಿದ್ಯಾರ್ಥಿಗಳ ನಿರ್ದಯ ಮನಸ್ಸುಗಳು ಕರಗಲಿ. ಭಾರತದಲ್ಲಿ ನಡೆಯುತ್ತಿರುವ ವಿಭಜಕ ಸಂಘಟನೆಗಳ ಆಕ್ರಮಣದ ಬಗ್ಗೆ, ಮಾನವ ಹಕ್ಕುಗಳ ಹೋರಾಟಗಾರರ ಅಕ್ರಮ ಬಂಧನಗಳ ಬಗ್ಗೆ ಹುಟ್ಟುವಷ್ಟೇ ಕೋಪ, ಭಾರತದ ಗಡಿಗಳಲ್ಲಿ ದುರಾಕ್ರಮಣ ಮಾಡುತ್ತಿರುವ ಚೀನಾ, ಉಕ್ರೇನನ್ನು ಸುಡುತ್ತಿರುವ ರಷ್ಯಾ, ಪ್ಯಾಲೆಸ್ತೀನೀಯರ ಮೇಲೆ ಕ್ರೌರ್ಯ ಚೆಲ್ಲುತ್ತಿರುವ ಇಸ್ರೇಲ್ ವಿರುದ್ಧವೂ ಹುಟ್ಟುತ್ತಿರಲಿ.

ಇಷ್ಟೆಲ್ಲದರ ನಡುವೆ, ಹೊಸ ವರ್ಷಕ್ಕೆ ಹೊಸ ಭಾಷೆ, ಹೊಸಹೊಸ ನುಡಿಗಟ್ಟು, ಹೊಸ ಕ್ರಿಯೆಗಳನ್ನು ಸೃಷ್ಟಿಸುವ ಹೊಣೆ ಎಲ್ಲರ ಹೆಗಲ ಮೇಲೂ ಇರಲಿ.



ಚುರುಮುರಿ



2022ರ ಸಾಧನಾ ಪಟ್ಟಿ

• ಸುಮಂಗಲಾ

ಬೆಕ್ಕಣ್ಣ ಬಲುಗಂಭೀರವಾಗಿ ಕೂತು 2022ರ ಮಹಾನ್ ಸಾಧನೆಗಳ ಪಟ್ಟಿ ಮಾಡುತ್ತಿತ್ತು.

'ವರ್ಣಮಾಲೆವಳಗ 'ಅಂ'ಗಿಂತ 'ಅ' ಮೊದಲು ಇರತೈತಿ ಅಂತ ನಮ್ಮ ಅದಾನಿ ಅಂಕಲ್ಲು ಸಾಬೀತುಪಡಿಸ್ಯಾನ. ಕೋವಿಡ್ ಕಾಲದಾಗೆ ಅದಾನಿ ಅಂಕಲ್ಲು ಸಂಪತ್ತು ಡಬ್ಬಲ್ಲು- ಟ್ರಿಪ್ಪಲ್ಲು ಆಗೈತಿ. ಅಂಬಾನಿ ಹಿಂದೆ ಹಾಕಿ, ವಿಶ್ವದಾಗೆ ಮೂರನೇ ಸ್ಥಾನಕ್ಕೆ ಏರಿ, ದೊಡ್ಡ ಮಾಧ್ಯಮ ಸಂಸ್ಥೆನೂ ಕೊಂಡುಕೊಂಡಿದ್ದು ಭಯಂಕರ ಸಾಧನೆ' ಎನ್ನುತ್ತ ಪಟ್ಟಿಯಲ್ಲಿ ಅದಾನಿ ಹೆಸರು ಮೊದಲು ಬರೆಯಿತು.

'ಇಡೀ ಮಾಧ್ಯಮ ಸಂಸ್ಥೆ ಖರೀದಿ ಮಾಡಿದರೇನಾತು... ಒಬ್ಬ ಪತ್ರಕರ್ತನನ್ನ ಮಾತ್ರ ಖರೀದಿ ಮಾಡಾಕೆ ಆಗಲಿಲ್ಲ' ಎಂದು ನಾನು ಛೇಡಿಸಿದೆ. ಬೆಕ್ಕಣ್ಣ ಲಕ್ಷ್ಯವನ್ನೇ ಕೊಡಲಿಲ್ಲ.

'ಮೂರು– ನಾಕು ದಶಕದಿಂದ ಇದ್ದ ಭ್ರಷ್ಟಾಚಾರ, ಗಡಿವಿವಾದ ಎರಡೂ ಸಮಸ್ಯೆಗಳು ನಾಮೇಲು ತಾಮೇಲು ಅಂತ ಕರುನಾಡಿನ ಪ್ರಾಣ ತಿನ್ನೂ ಸಾಧನೆ ಮಾಡ್ಯಾವು' ಎನ್ನುತ್ತ ಅವೆರಡನ್ನೂ ಎರಡನೇ ಸ್ಥಾನದಲ್ಲಿ ಬರೆಯಿತು.

'ಕಮಲಕ್ಕನ ಮನಿಯವ್ರಿನ್ನ ಮರೆತೆಯೇನಲೇ... ಮುಂದಿನ ಚುನಾವಣೆ ಗೆಲ್ಲೋ ಆಯುಧಗಳನ್ನು ಈಗೇ ಚೂಪು ಮಾಡಿಟ್ಟುಕೊಂಡಾರ' ಎಂದೆ.

'ಉಳಿದವ್ರು ಒಬ್ಬರನ್ನೊಬ್ಬರು ಕಾಲೆಳೆಯೋ ಕೆಲಸ ಮಾಡತಿದ್ದರೆ, ಇವ್ರು ತಮ್ಮ ಕೋಟೆ ವಿಸ್ತರಣೆಗೆ ಈಗೇ ಪ್ಲಾನು ಮಾಡ್ಯಾರ. ಕಡಿಮೆ ಸಾಧನೆಯೇನು ಮತ್ತ' ಎನ್ನುತ್ತ ಕಮಲಕ್ಕನ ಮನಿಯವ್ರಿನ್ನ ಮೂರನೇ ಸ್ಥಾನದಲ್ಲಿಟ್ಟಿತು.

'ನಿಮ್ಮ ಕುಮಾರಣ್ಣಂಗೆ ರೈತ್ರು ಹಾಕಿದ ಬೃಹತ್ ಹಾರಗಳು ಏನೋ ರೆಕಾರ್ಡ್ ಆಗೈತಂತ'.

'ಹಾರ ಯಾರೇ ಮಾಡಿರಲಿ, ಹಾಕಿಸ್ಕಂಡಿದ್ದೇ ರೆಕಾರ್ಡ್' ಎನ್ನುತ್ತ ಕುಮಾರಣ್ಣನ ಹೆಸರನ್ನು ನಾಕನೇ ಸ್ಥಾನದಲ್ಲಿ ಬರೆಯಿತು.

'ಯಾರು ಏನು ಕಹಿ ಉಗುಳಿದ್ರೂ, ಬೈದ್ರೂ, ರಾಗಾ ಅಂಕಲ್ಲು ತೆಲಿನೇ ಕೆಡಿಸ್ಕೊಳದೇ ಪ್ರೀತಿ ಮಾತಾಡಿಕೋತ ಮೂರೂವರೆ ಸಾವಿರ ಕಿಲೊಮೀಟರ್ ನಡೆದಾನ. ಅದಾನಿ ಬದಲಿಗೆ ರಾಗಾನನ್ನೇ ಮೊದಲಿನ ಸ್ಥಾನದಾಗೆ ಇಡಬೌದೇನೋ...' ಎಂದು ವರ್ಷದ ಕೊನೆಯಲ್ಲೊಮ್ಮೆ ಜಾಣತನದ ಮಾತಾಡಿದ ಬೆಕ್ಕಣ್ಣ 'ಶ್ರೀಸಾಮಾನ್ಯರಿಗೆ ಮಾತ್ರ ಸಾಧನೆ ಪಟ್ಟಿವಳಗ ಕೊನೆಯ ಸ್ಥಾನ' ಎನ್ನುತ್ತ ನನ್ನ ಮೂತಿಗೆ ತಿವಿಯಿತು!

ದಿನದ ಟ್ವೀಟ್


ಮಾನವೀಯತೆ ಉಳಿದಿದೆ



ರಸ್ತೆಯಲ್ಲಿ ಸಹಾಯ ಮಾಡಲು ಯಾರೂ ಮುಂದೆ ಬರುವುದಿಲ್ಲ ಎಂಬ ಮಾತನ್ನು ನಾವು ಆಗಾಗ ಕೇಳುತ್ತಿರುತ್ತೇವೆ. ನೀವು ಸಾಯುವ ಸ್ಥಿತಿಯಲ್ಲಿದ್ದರೂ ಜನ ನಿಮ್ಮ ವಿಡಿಯೊ ಮಾಡುತ್ತಾ ನಿಲ್ಲಬಹುದು. ಈ ಕಾರಣಕ್ಕೆ, ರಿಷಭ್ ಪಂತ್ ಅವರು ಅಪಘಾತಕ್ಕೀಡಾದಾಗ ನೆರವಿಗೆ ಧಾವಿಸಿದ ಹರಿಯಾಣ ರೋಡ್‌ವೇಸ್‌ನ ಚಾಲಕ ಸುಶೀಲ್ ಕುಮಾರ್ ಅವರ ಕಾರ್ಯ ಸ್ತುತ್ಯರ್ಹ.

ಶಿವಂ ವಿಜ್, ಬರಹಗಾರ

ಕಿಡಿನುಡಿ



ಗುಜರಾತ್‌ಗೆ ಕರ್ನಾಟಕವೇ ಪ್ರತಿಸ್ಪರ್ಧಿ ಎನ್ನುವ ಕಾರಣಕ್ಕೆ ನಮ್ಮ ರಾಜ್ಯವನ್ನು ಅಭಿವೃದ್ಧಿಯಲ್ಲಿ ಮುಗಿಸಿಬಿಡುವ ದುರಾಲೋಚನೆ ಅಮಿತ್ ಶಾ ಅವರಿಗೆ ಇದ್ದಂತಿದೆ. ಅವರಿಗೆ ದೇಶದ ಬೇರೆ ಯಾವ ರಾಜ್ಯದ ಮೇಲೂ ಇಲ್ಲದ ಅಸಹನೆ, ಅಸೂಯೆ, ವೈಷಮ್ಯ ಕರ್ನಾಟಕದ ಮೇಲೇಕೆ? ಕನ್ನಡಿಗರನ್ನು ಗುಜರಾತಿನ ಗುಲಾಮರನ್ನಾಗಿ ಮಾಡಲು ಅವರು ಷಡ್ಯಂತ್ರ ರೂಪಿಸಿರುವ ಅನುಮಾನವಿದೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 2-1-1998

• ಫೆ.16ರಿಂದ ನಾಲ್ಕು ಹಂತದಲ್ಲಿ ಲೋಕಸಭೆ ಚುನಾವಣೆ

ನವದೆಹಲಿ, ಜ. 1– ಲೋಕಸಭೆಯ ಚುನಾವಣೆ ದಿನಾಂಕಗಳನ್ನು ಚುನಾವಣೆ ಆಯೋಗ ಇಂದು ಪ್ರಕಟಿಸಿದ್ದು ಫೆ. 16, 22, 28 ಮತ್ತು ಮಾರ್ಚ್ 7ರಂದು ನಾಲ್ಕು ಹಂತದಲ್ಲಿ ಮತದಾನ ನಡೆಯಲಿದೆ. ಕರ್ನಾಟಕದ 28 ಲೋಕಸಭಾ ಸ್ಥಾನಗಳಿಗೆ ಎರಡು ಹಂತದಲ್ಲಿ ಚುನಾವಣೆ ಏರ್ಪಾಡಾಗಿದೆ. ಫೆ. 16 ಮತ್ತು 22ರಂದು ಮತದಾನ ನಡೆಯುವುದು.

ಗುಜರಾತ್ ಮತ್ತು ಹಿಮಾಚಲ ಪ್ರದೇಶ ಸೇರಿದಂತೆ 5 ರಾಜ್ಯಗಳ ವಿಧಾನಸಭೆಗಳಿಗೂ ಇದೇ ಸಮಯದಲ್ಲಿ ಚುನಾವಣೆ ನಡೆಯುವುದು. ಕರ್ನಾಟಕದ ಆನೇಕಲ್ ಮತ್ತು ಧಾರವಾಡ ಗ್ರಾಮಾಂತರ ಕ್ಷೇತ್ರದ ವಿಧಾನಸಭೆ ಉಪಚುನಾವಣೆ ಕೂಡಾ ಇದೇ ಸಮಯದಲ್ಲಿ ನಡೆಯುವುದು ಎಂದು ಚುನಾವಣಾ ಆಯೋಗ ತಿಳಿಸಿದೆ.

• ಸೋನಿಯಾ ಪ್ರವೇಶ: ರಂಗದ ನಿಲುವಿನಲ್ಲಿ ಭಿನ್ನಾಭಿಪ್ರಾಯ

ನವದೆಹಲಿ, ಜ. 1– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಪ್ರಚಾರ ಮಾಡುವುದಾಗಿ ಸೋನಿಯಾ ಗಾಂಧಿ ಅವರು ಪ್ರಕಟಿಸಿರುವ ಹಿನ್ನೆಲೆಯಲ್ಲಿ, ಕಾಂಗ್ರೆಸ್ ವಿರುದ್ಧ ತಾಳಬೇಕಾದ ನಿಲುವಿನಲ್ಲಿ ಸಂಯುಕ್ತ ರಂಗದಲ್ಲಿ ಭಿನ್ನಾಭಿಪ್ರಾಯ ಮೂಡಿದೆ.

50 ವರ್ಷಗಳ ಹಿಂದೆ

ಮಂಗಳವಾರ, 2-1-1973

• ಪ್ರತ್ಯೇಕವಾದೀ ಆಂಧ್ರ ಕಾಂಗ್ರೆಸ್ಸಿಗರ ವಿರುದ್ಧ ಹೈಕಮಾಂಡ್ ಕ್ರಮ?

ನವದೆಹಲಿ, ಜ. 1– ಪ್ರತ್ಯೇಕ ಆಂಧ್ರ ರಚನೆಯನ್ನು ಬೇಡುವ ಆಂಧ್ರ ಕಾಂಗ್ರೆಸ್ಸಿಗರ ತಿರುಪತಿ ಸಭೆಯನ್ನು ಕಾಂಗ್ರೆಸ್ ಹೈಕಮಾಂಡ್ ತೀವ್ರವಾಗಿ ಗಮನಕ್ಕೆ ತೆಗೆದುಕೊಂಡಿದೆ.

ಮುಖ್ಯಮಂತ್ರಿ ಶ್ರೀ ನರಸಿಂಹ ರಾವ್ ಅವರು ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿಯ ಅಂದಾಜನ್ನು ಮಾಡಿದ ನಂತರ ದೆಹಲಿಗೆ ಬರುವಂತೆ ಹೈಕಮಾಂಡ್ ಅವರಿಗೆ ತಿಳಿಸಿದೆ. ಪರಿಸ್ಥಿತಿ ಪ್ರಕ್ಷುಬ್ಧವಾಗುತ್ತಿರುವ ಕಾರಣ ಮುಖ್ಯಮಂತ್ರಿ ದೆಹಲಿಗೆ ಬರಲು ಇನ್ನೂ ತಡವಾಗಬಹುದು.

• 'ಪಂಜಾಬ್ ಮಾತಾ' ಭಗತ್ ಸಿಂಗ್ ತಾಯಿಗೆ ಪ್ರಶಸ್ತಿ

ಚಂಡೀಗಢ, ಜ. 1– ಭಗತ್ ಸಿಂಗ್ ಅವರ 88 ವರ್ಷ ವಯಸ್ಸಿನ ತಾಯಿ ಶ್ರೀಮತಿ ವಿದ್ಯಾವತಿ ಅವರಿಗೆ ಪಂಜಾಬ್ ಸರ್ಕಾರ ಇಂದು ಇಲ್ಲಿ ನಡೆದ ವಿಶೇಷ ಸಮಾರಂಭವೊಂದರಲ್ಲಿ 'ಪಂಜಾಬ್ ಮಾತಾ' ಬಿರುದನ್ನು ನೀಡಿ ಗೌರವಿಸಿತು. ಅವರಿಗೆ ಒಂದು ಕಾರನ್ನು ಉಡುಗೊರೆಯಾಗಿ ನೀಡಿ, ಮಾಹೆಯಾನ ಒಂದು ಸಾವಿರ ರೂ.ಗಳ ವೇತನವನ್ನೂ ಪ್ರಕಟಿಸಲಾಯಿತು.

ಸಂಗತ

ಸರಳವಾಗಿರಲಿ ಅಂತ್ಯಸಂಸ್ಕಾರ

ಸತ್ತವರ ಬಗ್ಗೆ ಗೌರವವಿರಲಿ, ಆದರೆ ಸಾವಿನ ಅತಿಯಾದ ವೈಭವೀಕರಣ, ಕೆಲಸಕ್ಕೆ ರಜೆ ಕೊಡುವುದು ಸರಿಯಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಹೀರಾ ಬೆನ್ ಅವರು ಇತ್ತೀಚೆಗೆ ನಿಧನರಾದಾಗ ಅವರ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ಕೆಲವೇ ಗಂಟೆಗಳಲ್ಲಿ ಸರಳವಾಗಿ ಪೂರೈಸಲಾಯಿತು. ತಾಯಿಯ ಅಂತಿಮಯಾತ್ರೆಗೆ ಹೆಗಲು ಕೊಟ್ಟು ಸಾಮಾನ್ಯರಂತೆ ನಡೆದ ಮೋದಿಯವರು ಅಂತ್ಯಸಂಸ್ಕಾರ ಮುಗಿದ ನಂತರ ತಮ್ಮ ಅಧಿಕೃತ ಕಾರ್ಯಗಳಲ್ಲಿ ಭಾಗಿಯಾದರು. ಸಚಿವ ಸಂಪುಟದ ಸಹೋದ್ಯೋಗಿಗಳಿಗೆ ನಿಗದಿತ ಕಾರ್ಯಕ್ರಮಗಳನ್ನು ರದ್ದುಪಡಿಸದಂತೆ ಸೂಚನೆ ಕೂಡ ಕೊಟ್ಟಿದ್ದರು.

ರಾಷ್ಟ್ರಪತಿಯಾಗಿದ್ದ ಪ್ರಣವ್ ಮುಖರ್ಜಿ ಅವರು ತಮ್ಮ ಪತ್ನಿಯ ಅಂತ್ಯಕ್ರಿಯೆಯನ್ನು ಮುಂಜಾನೆ ಮುಗಿಸಿ, ಮಧ್ಯಾಹ್ನ ರಾಷ್ಟ್ರದ ಕಾರ್ಯದಲ್ಲಿ ತೊಡಗಿದ್ದರು. ಈ ಇಬ್ಬರು ನಾಯಕರ ನಡೆ ಮಾದರಿಯಾಗುವಂತಹುದು.

ಸಾವು ಅರ್ಥವಾದರೆ ಮಾತ್ರ ಬದುಕು ಅರ್ಥವಾಗುತ್ತದೆ ಎನ್ನುವ ಮಾತಿದೆ. ಮರಣ ಸಾರ್ವಜನಿಕ ಸಂಗತಿಯಲ್ಲ. ಅಂತಿಮಸಂಸ್ಕಾರದ ಹೆಸರಿನಲ್ಲಿ ನಡೆಯುವ ಕ್ರಿಯೆಗಳಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂದು ಶಿವರಾಮ ಕಾರಂತ ಹೇಳುತ್ತಿದ್ದರು.

ಗಣ್ಯರ ನಿಧನದ ನೆಪ ಮಾಡಿಕೊಂಡು ಸರ್ಕಾರಿ ಕಚೇರಿಗಳಿಗೆ, ಶಾಲೆ ಕಾಲೇಜುಗಳಿಗೆ ರಜೆ ಘೋಷಣೆ ಮಾಡಿ ಶೋಕ ಆಚರಿಸುವುದರಿಂದ ಸಮಾಜಕ್ಕೆ ಭಾರವಾಗುತ್ತದೆ. ಸತ್ತವರ ಬಗ್ಗೆ ಗೌರವವಿರಲಿ, ಆದರೆ ಸಾವಿನ ಅತಿಯಾದ ವೈಭವೀಕರಣ, ಕೆಲಸಕ್ಕೆ ರಜೆ ಕೊಡುವುದು ಸರಿಯಲ್ಲ. ಶರಣರು ಸಾವನ್ನು ಒಂದು ಸಹಜಕ್ರಿಯೆಯಾಗಿ ಭಾವಿಸಿದ್ದರು. ಸತ್ತವರ ಹೆಸರಿನಲ್ಲಿ ಗುಡಿ, ಸಮಾಧಿ ಕಟ್ಟುವುದನ್ನು ಕೂಡ ಅವರು ವಿರೋಧಿಸಿದ್ದರು. ಶರಣ ಲದ್ದೆಯ ಸೋಮಣ್ಣನ ಒಂದು ವಚನವನ್ನು ಇಲ್ಲಿ ಉದಾಹರಿಸಬಹುದು: 'ಆವ ಕಾಯಕವಾದಡೂ ಸ್ವ ಕಾಯಕವ ಮಾಡಿ, ಗುರು ಲಿಂಗ ಜಂಗಮದ ಮುಂದಿಟ್ಟು, ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು, ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ, ಭಾಪು ಲದ್ದೆಯ ಸೋಮಾ?'

ಅಲ್ಲಮಪ್ರಭು ಸಾವನ್ನು ಬಯಲಲ್ಲಿ ಬಯಲಾಗುವುದು ಎಂದು ಬಣ್ಣಿಸಿದ್ದಾರೆ. ಬಯಲಿನ ಪರಿಕಲ್ಪನೆ ತುಂಬ ಮಾರ್ಮಿಕವಾಗಿದೆ. ಈ ಬದುಕು ಸುಮ್ಮನೆ ಇದ್ದು ಹೋಗುವುದಕ್ಕೆ ಇದೆ, ಹಕ್ಕು ಸ್ಥಾಪನೆಗೆ ಅಲ್ಲ ಎಂದು ಸಾಹಿತಿ ಸತ್ಯಕಾಮ ಹೇಳುತ್ತಿದ್ದರು. ಅವರ ಆಶ್ರಮದ ಹೆಸರು 'ಸುಮ್ಮನೆ'.

ಪತ್ರಕರ್ತ ಅರುಣ್ ಶೌರಿ ಅವರು ಕೊರೊನಾ ಕಾಲಘಟ್ಟದಲ್ಲಿ ಬರೆದ 'ಪ್ರಿಪೇರಿಂಗ್ ಫಾರ್ ಡೆತ್' ಕೃತಿ ಬಹಳ ಗಮನ ಸೆಳೆಯುತ್ತದೆ. ಅದರಲ್ಲಿ ಅವರು ಬರೆದ ಮಾತು ಬದುಕಿಗೆ ದೊಡ್ಡ ಪಾಠ ಹೇಳುತ್ತದೆ. 'ನನ್ನ ದೇಹದಲ್ಲಿ ಉಪಯೋಗಕ್ಕೆ ಬರುವ ಅಂಗಗಳಿದ್ದರೆ ಅವುಗಳನ್ನು ದಾನ ಮಾಡಬೇಕು. ದೇಹವನ್ನು ಯಾವುದೇ ಧಾರ್ಮಿಕ ಆಚರಣೆಗಳಿಲ್ಲದೆ ಸುಟ್ಟು ಹಾಕಬೇಕು. ಗಂಧದ ಕಟ್ಟಿಗೆಯ ಆಡಂಬರ ಬೇಡ. ತೋಪು ಹಾರಿಸಿ ಗೌರವಿಸುವುದನ್ನು ನಾನು ಒಪ್ಪುವುದಿಲ್ಲ' ಎಂದು ಹೇಳಿದ್ದಾರೆ.

ಗಣ್ಯರು, ಸೆಲೆಬ್ರಿಟಿಗಳ ಸಾವಿನ ಕುರಿತು ಟಿ.ವಿ. ಚಾನೆಲ್‌ಗಳು ಎರಡು– ಮೂರು ದಿನ ನೇರ ಪ್ರಸಾರ ಮಾಡುತ್ತವೆ. ಅಂತ್ಯಕ್ರಿಯೆ ಕಾಲಕ್ಕೆ ಭವ್ಯ ಮೆರವಣಿಗೆಯನ್ನು ರಸ್ತೆಯುದ್ದಕ್ಕೂ ಮಾಡುವಾಗ ಸಂಚಾರಕ್ಕೆ ಬಹಳ ಅಡಚಣೆ ಉಂಟಾಗುತ್ತದೆ. ಮೆರವಣಿಗೆ ಕಾಲಕ್ಕೆ ಕೆಲವರು ಪ್ರಾಣ ಕಳೆದುಕೊಂಡ ನೋವಿನ ಉದಾಹರಣೆಗಳೂ ಇವೆ.

'ಸಾವಿನ ಬಾಗಿಲಲ್ಲಿ ಅರಸು ಕೂಡ ಭಿಕಾರಿ ಆಗಿರುತ್ತಾನೆ. ಬದುಕು ಎಂದಿಗೂ ಅಪೂರ್ಣವೇ, ಹಾಗಿರುವುದರಲ್ಲಿಯೇ ಅದರ ರಹಸ್ಯ ತುಂಬಿದೆ. ಸಾವು ತನ್ನ ಹಸ್ತವನ್ನು ಯಾವುದೋ ಗಳಿಗೆಯಲ್ಲಿ ಇಟ್ಟುಬಿಡುತ್ತದೆ. ಅದು ಸಹಜ ಕ್ರಿಯೆ' ಎನ್ನುತ್ತಾರೆ ವ್ಯಾಸ ಮಹರ್ಷಿ.

'ನಾನು ಹೊರಟುಹೋದ ಮೇಲೆ ಓಡೋಡಿ ಬಂದು ಸಂತಾಪ ಸೂಚಿಸುವುದಕ್ಕಿಂತ ಬದುಕಿದ್ದಾಗಲೇ ಬಂದು ಭೇಟಿಯಾದರೆ ಸಂತೋಷಪಡುವೆ. ನಾನು ಹೊರಟುಹೋದ ಮೇಲೆ ದುಃಖಸೂಚಕ ಸಭೆಯಲ್ಲಿ ಹೊಗಳುವುದರಿಂದ ಪ್ರಯೋಜನವಿಲ್ಲ. ಈಗಲೇ ಒಂದು ಒಳ್ಳೆಯ ಮಾತು ಹೇಳಿದರೆ ನನ್ನ ಹೃದಯ ಅರಳುತ್ತದೆ' ಎಂದು ರವೀಂದ್ರನಾಥ ಟ್ಯಾಗೋರ್ ತಮ್ಮ ಒಂದು ಕವಿತೆಯಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ.



ಹೆಣ ಶೃಂಗಾರ ಅರಿಯದು ಎಂದು ಜನಪದ ಹೇಳಿದೆ. ಅಂತ್ಯಕ್ರಿಯೆ ಸರಳವಾಗಿರಲಿ ಎಂಬುದು ಇದರ ಭಾವ. ಕವಿ ದ.ರಾ.ಬೇಂದ್ರೆ ಅವರು ಹೆಣ ಹೂಳುವುದನ್ನು ಬಿತ್ತುವುದು ಎಂದು ಉನ್ನತೀಕರಿಸಿ ಹೇಳುತ್ತಿದ್ದರು. ಈ ಮಾತು ಸೃಷ್ಟಿಕ್ರಿಯೆಯ ರೂಪಕದಂತಿದೆ.

ಗಾಂಧೀಜಿ ಮತ್ತು ಕಸ್ತೂರಬಾ ಅವರು ಆಗಾ ಖಾನ್ ಜೈಲಿನಲ್ಲಿದ್ದರು. ಗಾಂಧೀಜಿ ಅವರ ಆರೋಗ್ಯ ತೀರಾ ಕ್ಷೀಣಿಸಿತ್ತು. ಅವರು ಅಸ್ತಂಗತರಾಗಬಹುದು ಎಂದುಕೊಂಡ ಬ್ರಿಟಿಷ್ ಸರ್ಕಾರ ಜೈಲಿನಲ್ಲಿಯೇ ಅಂತ್ಯಕ್ರಿಯೆ ನಡೆಸಲು ರಹಸ್ಯವಾಗಿ ಸಿದ್ಧತೆ ಮಾಡಿಕೊಂಡಿತ್ತು. ಗಂಧದ ಕಟ್ಟಿಗೆ ತಂದು ಇಡಲಾಗಿತ್ತು. ವಿಧಿಯ ವೈಚಿತ್ರ್ಯ ಕಸ್ತೂರಬಾ ನಿಧನರಾದರು. ಜೈಲಿನಲ್ಲಿಯೇ ಅಂತ್ಯಕ್ರಿಯೆಗೆ ವ್ಯವಸ್ಥೆ ಮಾಡಲಾಯಿತು. ಗಾಂಧೀಜಿ ಚಿತೆಗೆ ಎಂದು ತಂದಿದ್ದ ಕಟ್ಟಿಗೆಯನ್ನು ಕಸ್ತೂರಬಾ ಚಿತೆಗೆ ಬಳಸಲು ತರಲಾಯಿತು. ಗಂಧದ ಕಟ್ಟಿಗೆ ನೋಡಿ ಗಾಂಧೀಜಿ 'ನಾನು ಬಡವ' ಎಂದು ಗಂಧದ ಕಟ್ಟಿಗೆ ಬಳಸುವುದನ್ನು ತಡೆದಿದ್ದರು.

ವಾಚಕರ ವಾಣಿ

ಬಹುತ್ವದ ಬೆಸುಗೆ...

ಹಳೆ ವರ್ಷ ಕಳೆದು ಹೊಸ ವರ್ಷ ಬಂದಾಕ್ಷಣ ನಮ್ಮ ಬದುಕೇ ಬದಲಾಯಿತು ಎಂದೇನಿಲ್ಲ. ಸಮಾಜದಲ್ಲಿ ಕೊಲೆ, ಅತ್ಯಾಚಾರ, ಜಾತೀಯತೆ, ಅಸ್ಪೃಶ್ಯತೆ, ಧರ್ಮಾಂಧತೆ, ಆಳುವ ವರ್ಗದ ದಬ್ಬಾಳಿಕೆ, ದ್ವೇಷ ಭಾಷಣದಿಂದ ಆದ ಹತ್ತು ಹಲವು ಕೃತ್ಯಗಳು ಸಂಭವಿಸಿದ ವರ್ಷ ಅದಾಗಿದೆ. ಈ ಹೊಸ ವರ್ಷದಲ್ಲಿ, 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಸಾರಿದ ಪಂಪ, ಸಮಾನತೆಯ ಬೇರೂರಿ ಹೋದ ಬಸವಣ್ಣ, ಶರೀಫತನ ತೋರಿದ ಶರೀಫಜ್ಜ, 'ನಿಮ್ಮ ಕುಲದ ನೆಲೆ ಬಲ್ಲಿರಾ' ಎಂದ ಕನಕದಾಸ, ಕಡಲೆ ಸೀಳಿದಂಗೆ ತನ್ನ ತತ್ವಪದಗಳನ್ನು ಸಾರಿದ ಮಡಿವಾಳಪ್ಪ, ಕಾವ್ಯಗಳ ಹಾಡಿನ ಮುಖಾಂತರ ಬೆಳಕಿನ ಅರಿವು ಮೂಡಿಸಿದ ಸಿದ್ಧಪ್ಪಾಜಿ, ಕೊರಗಜ್ಜ, ಸೂಫಿ ಸಂತರು, 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಹೇಳಿದ ಕುವೆಂಪು ಅವರ ನಾಡಿನಲ್ಲಿ ಮತ್ತೆ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದೂ ಆಗಬೇಕು.

ಬಹುಭಾಷೆ, ವಿಭಿನ್ನ ಆಹಾರ ಪದ್ಧತಿ, ಉಡುಗೆ-ತೊಡುಗೆ, ಬಹು ಸಂಸ್ಕೃತಿ ಎಲ್ಲವನ್ನೂ ಒಳಗೊಂಡ ನಮ್ಮ ಈ ಬಹುತ್ವದ ನಾಡಿನಲ್ಲಿ ವೈವಿಧ್ಯದಲ್ಲೂ ಏಕತೆಯ ನಿರ್ಮಾಣದ ಕಡೆ ನಮ್ಮ ನಡೆ ಸಾಗಬೇಕು.

ಮಹೇಶ ಕೇವಂಟಗಿ, ಕಲಬುರಗಿ

ಎಲ್ಲರಿಗೂ ಉಚಿತ

ಈಗ ಎಲ್ಲರಿಗೂ ಸಿಕ್ಕಿದೆ
ಮುನ್ನೂರರವತ್ತೈದು ಪುಟಗಳ
ಖಾಲಿಯಿರುವ ಪುಸ್ತಕ
ಅದರಲ್ಲಿ...
ಒಳ್ಳೆಯದನ್ನು ಬರೆಯುವುದೋ
ಕೆಟ್ಟದ್ದನ್ನು ಬರೆಯುವುದೋ
ಅದು ನಮ್ಮ ನಮ್ಮ ವಿವೇಚನೆಗೆ ಬಿಟ್ಟದ್ದು.

ವಿ.ವಿಜಯೇಂದ್ರ ರಾವ್, ಬೆಂಗಳೂರು

ಬೀದಿದೀಪದಿಂದ ನಷ್ಟ: ತಪ್ಪಿಸಲು ಸಾಧ್ಯ

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಹಗಲು ಹೊತ್ತಿನಲ್ಲೂ ಬೀದಿದೀಪಗಳು ಉರಿಯುವುದರಿಂದ ದಿನಕ್ಕೆ ₹ 50 ಕೋಟಿಯಿಂದ ₹ 60 ಕೋಟಿಯಷ್ಟು ನಷ್ಟವಾಗುತ್ತಿರುವ ಸುದ್ದಿ (ಪ್ರ.ವಾ., ಡಿ. 31) ಓದಿ ನನಗೆ ನಮ್ಮ ಮನೆಯಲ್ಲಿರುವ ಅಂಗೈ ಅಗಲದ ಒಂದು ಬೆಡ್‌ಲ್ಯಾಂಪ್ ಜ್ಞಾಪಕಕ್ಕೆ ಬಂತು. ಅದು ಸದಾಕಾಲ ಪ್ಲಗ್ ಪಾಯಿಂಟಲ್ಲಿ ಆನ್ ಸ್ಥಿತಿಯಲ್ಲೇ ಇರುತ್ತದೆ. ಆದರೂ ಬೆಳಿಗ್ಗೆ ದೀಪ ಉರಿಯುವುದಿಲ್ಲ, ಸಂಜೆಯಾಗುತ್ತಿದ್ದಂತೆಯೇ ಉರಿಯಲು ಶುರುವಾಗುತ್ತದೆ. ಇದು ಬಹಳ ವರ್ಷಗಳಿಂದಲೇ ನಮ್ಮ ಬಳಿ ಇದ್ದು, ಇದರಲ್ಲಿ ಯಾವ ಟೈಮರ್ ಆಗಲಿ, ಹೊಸ ಉನ್ನತ ತಂತ್ರಜ್ಞಾನವಾಗಲಿ ಇಲ್ಲ. ಇದರಲ್ಲಿರುವ ಚಿಕ್ಕ ಸರ್ಕಿಟ್ ಬೋರ್ಡ್‌ನಲ್ಲಿ ಕೇವಲ ಶರ್ಟ್ ಗುಂಡಿ ಗಾತ್ರದ ಒಂದು ಎಲ್.ಎಸ್.ಡಿ (ಲೈಟ್ ಸೆನ್ಸಿಟಿವ್ ಡಯೋಡ್) ಇರುತ್ತದೆ. ಇದರ ಮೇಲೆ ಬೆಳಕು ಬಿದ್ದರೆ ಸರ್ಕಿಟ್ ಕಟ್ ಆಗುತ್ತದೆ, ಬೆಳಕು ಬೀಳದಿದ್ದಾಗ ಆನ್ ಆಗುತ್ತದೆ. ಎಷ್ಟೋ ಸಲ ನಾವು ತಮಾಷೆಗೆ ಕೈಯ್ಯಿಂದ ಡಯೋಡನ್ನು ಮುಚ್ಚಿ ಲ್ಯಾಂಪ್ ಆನ್ ಆಗುವುದನ್ನು ನೋಡಿ ಸಂಭ್ರಮಿಸಿರುವುದೂ ಉಂಟು.

ಈ ಸರ್ಕಿಟ್ ತಯಾರಿಸಲು ಒಂದೊಂದು ಲೈಟ್ ಕಂಬಕ್ಕೆ ಬರೀ ₹ 75– 100ರವರೆಗೂ ತಗುಲಬಹುದು ಎಂದು, ಅಲ್ಪಸ್ವಲ್ಪ ಎಲೆಕ್ಟ್ರಾನಿಕ್ಸ್ ಗೊತ್ತಿರುವ ಯಾರು ಬೇಕಾದರೂ ನಿಸ್ಸಂದೇಹವಾಗಿ ಹೇಳಬಹುದು. ಇದರ ಬಗ್ಗೆ ಸರ್ಕಾರ ಏನಾದರೂ ಯೋಚಿಸಿ ಇದೇ ತಂತ್ರಜ್ಞಾನ ಬಳಸುವುದಾದರೆ, ನುರಿತ, ಶುದ್ಧಹಸ್ತರಾದ, ಅವ್ಯವಹಾರ ನಡೆಸದ ತಂತ್ರಜ್ಞರಿಗೆ ಗುತ್ತಿಗೆ ನೀಡಿದರೆ, ಈಗ ನಷ್ಟವಾಗುತ್ತಿರುವ ಕೋಟ್ಯಂತರ ರೂಪಾಯಿಯನ್ನು ಖಂಡಿತ ಉಳಿಸಬಹುದು.

ರವಿಕಿರಣ್ ಶೇಖರ್, ಬೆಂಗಳೂರು

ಮಾನಸಿಕ ವೈದ್ಯರ ಕೊರತೆಯಿಂದ ಅನಾಹುತ

ಕಾಯಿಲೆ ಗುಣವಾಗಲಿದೆ ಎನ್ನುವ ನಂಬಿಕೆಗೆ ಕಟ್ಟುಬಿದ್ದ ಕೊಪ್ಪಳ ಜಿಲ್ಲೆಯ ಯುವತಿ ದೇವದಾಸಿ ಪದ್ಧತಿಯ ಭಾಗವಾಗಿ 'ಮುತ್ತು' ಕಟ್ಟಿಸಿಕೊಂಡ ಅಮಾನವೀಯ ಘಟನೆ ವರದಿಯಾಗಿದೆ. ಈ ಬೆಳವಣಿಗೆಯು ನಮ್ಮ ದೇವದಾಸಿ ಮಹಿಳೆಯರ ಕಷ್ಟಗಳನ್ನು ಮಾತ್ರ ಬಿಚ್ಚಿಡುತ್ತಿಲ್ಲ, ನಮ್ಮ ಸಮಾಜದಲ್ಲಿ ತುಂಬ ಆಳವಾಗಿ ಬೇರುಬಿಟ್ಟಿರುವ ಅನಾಹುತಕಾರಿ ಮೂಢನಂಬಿಕೆಗಳ ಪಾತ್ರವನ್ನು ಸಹ ಬಿಚ್ಚಿಟ್ಟಿದೆ. ಹಾಗೆಯೇ ಸರ್ಕಾರಿ ಆಸ್ಪತ್ರೆಗಳಲ್ಲಿನ ಮಾನಸಿಕ ವೈದ್ಯರ ಕೊರತೆಯನ್ನು ಸಹ ಬಿಚ್ಚಿಟ್ಟಿದೆ.

ಹೀಗಾಗಿ ನಮ್ಮ ಅನೇಕ ಮೂಢನಂಬಿಕೆಗಳಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಲಭಿಸದೆ ಅನಾಹುತಗಳು ಘಟಿಸುತ್ತಿವೆ. ಆದ್ದರಿಂದ ನಮ್ಮ ಆರೋಗ್ಯ ಇಲಾಖೆ ಈ ರೀತಿಯ ಅನಾಹುತಗಳನ್ನು ಸಹ ಗಮನಿಸಿ ಅವುಗಳ ವಿರುದ್ಧ ವ್ಯಾಪಕವಾಗಿ ಪ್ರಚಾರಾಂದೋಲನ ಹಮ್ಮಿಕೊಳ್ಳಬೇಕಿದೆ. ಹಾಗೆ ಮಾಡುವುದರಿಂದ ಸಾರ್ವಜನಿಕರಲ್ಲಿ ಜಾಗೃತಿ ಮೂಡಲು ಸಾಧ್ಯವಾಗುತ್ತದೆ. ಸಾಮಾಜಿಕ ಸ್ವಾಸ್ಥ್ಯವನ್ನೂ ಕಾಪಾಡಿದಂತಾಗುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಅಬ್ಬರ ಮುಗಿದಿದೆ, ವಾಸ್ತವಕ್ಕೆ ಬನ್ನಿ


ಹೊಸ ವರ್ಷದ ಶುಭಾಶಯ ಕೋರಲು ನಮ್ಮ ಜನಪ್ರತಿನಿಧಿಗಳು ಎಷ್ಟು ಕಾತರರಾಗಿದ್ದರು ಎಂದರೆ, ರಸ್ತೆ ಬದಿಯ ಗೋಡೆಗಳು, ವಿದ್ಯುತ್ ಕಂಬ, ಶಾಲೆಯ ಕಾಂಪೌಂಡ್ ಮೇಲೆಲ್ಲ ಬ್ಯಾನರ್, ಬಂಟಿಂಗ್, ಪಾಂಪ್ಲೆಟ್ ಅಬ್ಬರ, ಫೇಸ್‌ಬುಕ್, ಟ್ವಿಟರ್ ತುಂಬ ಇವುಗಳ ಭರಾಟೆ ಮುಗಿಲುಮುಟ್ಟಿತ್ತು. ಇವರು ನಮ್ಮ ಕ್ಷೇತ್ರದಲ್ಲಿನ ಜನನಾಯಕರೇ ಎಂದು ಜನರು ಚಕಿತಗೊಂಡಿದ್ದರು, ಗೆದ್ದು ನಾಪತ್ತೆಯಾಗಿದ್ದ ಮತ್ತು ಹೊಸ ಮುಖಗಳು ಅಷ್ಟರಮಟ್ಟಿಗೆ ಅಲ್ಲಿ ಕಾಣಸಿಗುತ್ತಿದ್ದವು.

ಹೊಸ ವರ್ಷದ ನೆಪದಲ್ಲಿ ಮೊದಲ ದಿನವೇ ಪಟಾಕಿ ಹೊಡೆದು ವಾಯುಮಾಲಿನ್ಯ ಉಂಟು ಮಾಡಿದ್ದಾಯಿತು. ಈಗ ಕಟ್ಟಿರುವ ಬ್ಯಾನರ್‌ಗಳನ್ನು ನಿಮ್ಮ ಆಚರಣೆ ಮುಗಿದ ಮೇಲೆ ಸರಿಯಾಗಿ ವಿಲೇವಾರಿ ಮಾಡಿ, ಇಲ್ಲದಿದ್ದರೆ ಅವು ಹರಿದು ಚೂರಾಗಿ, ಹಳ್ಳ ಕೊಳ್ಳ ಸೇರಿ ಜಲಚರಗಳ ಕುತ್ತಿಗೆಗೆ ಸಿಲುಕಬಹುದು.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಸ್ತೆ ಅಪಘಾತದಲ್ಲಿ ಸಾವು ಭಾರತದಲ್ಲಿಯೇ ಅತಿ ಹೆಚ್ಚು



ಪ್ರಜಾವಾಣಿ ವಾರ್ತೆ

ದೇಶದಲ್ಲಿ ರಸ್ತೆ ಅಪಘಾತಗಳು ಮತ್ತು ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ವಿಶ್ವದ ಬೇರೆಲ್ಲಾ ದೇಶಗಳಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚು ಇದ್ದರೂ, ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಕಡಿಮೆ ಇದೆ. ವಿಶ್ವದಲ್ಲಿ ಅತಿಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ದೇಶಗಳ ಪಟ್ಟಿಯಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದೆ. ಆದರೆ, ರಸ್ತೆ ಅಪಘಾತಗಳಲ್ಲಿ ಹೆಚ್ಚು ಜನರು ಮೃತಪಡುವ ದೇಶಗಳ ಪಟ್ಟಿಯಲ್ಲಿ ಭಾರತ ಮೊದಲ ಸಾಲಿನಲ್ಲಿದೆ.

ಭಾರತದಲ್ಲಿ ಪ್ರತಿ ವರ್ಷ ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ರಸ್ತೆ ಅಪಘಾತಗಳನ್ನು ತಡೆಗಟ್ಟಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಸಚಿವಾಲಯವು ಈಚೆಗೆ ಬಿಡುಗಡೆ ಮಾಡಿರುವ 'ಭಾರತದಲ್ಲಿ ರಸ್ತೆ ಅಪಘಾತಗಳು –2021' ವರದಿಯಲ್ಲಿ ಇಂತಹ ಕ್ರಮಗಳನ್ನು ಉಲ್ಲೇಖಿಸಿದೆ. ಅಪಘಾತ ತಡೆ ಕ್ರಮಗಳ ಹೊರತಾಗಿಯೂ ರಸ್ತೆ ಅಪಘಾತಗಳ ಸಂಖ್ಯೆ ಏರಿಕೆಯಾಗಿದೆ ಎಂಬುದನ್ನು ವರದಿಯಲ್ಲಿ ಗುರುತಿಸಲಾಗಿದೆ.


ಅಪಘಾತಗಳನ್ನು ತಡೆಯಲು ಅತ್ಯುತ್ತಮ ಗುಣಮಟ್ಟದ ಹೆದ್ದಾರಿ ಮತ್ತು ರಸ್ತೆಗಳನ್ನು ನಿರ್ಮಿಸಲಾಗಿದೆ. ಅತಿವೇಗಕ್ಕೆ ಕಡಿವಾಣ ಹಾಕಲು ಸ್ಪೀಡ್ ಕ್ಯಾಮೆರಾಗಳನ್ನು ಅಳವಡಿಸಿ, ದಂಡ ವಿಧಿಸುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಅಡ್ಡಾದಿಡ್ಡಿ ಮತ್ತು ಅಪಾಯಕಾರಿ ಚಾಲನೆಯನ್ನು ಗುರುತಿಸಿ, ದಂಡ ವಿಧಿಸುವ ವ್ಯವಸ್ಥೆಯನ್ನೂ ಜಾರಿಗೆ ತರಲಾಗಿದೆ. ಇಂತಹ ಕ್ರಮಗಳ ಹೊರತಾಗಿಯೂ ಅಪಘಾತಗಳ ಸಂಖ್ಯೆ ಏರಿಕೆಯಾಗಿದೆ. 2020ರಲ್ಲಿ ದೇಶದಾದ್ಯಂತ ಒಟ್ಟು 3.66 ಲಕ್ಷ ಅಪಘಾತಗಳು ಸಂಭವಿಸಿವೆ. ಆದರೆ, 2021ರಲ್ಲಿ ಅಪಘಾತಗಳ ಸಂಖ್ಯೆ 4.32 ಲಕ್ಷಕ್ಕೆ ಏರಿಕೆಯಾಗಿದೆ. ಒಂದು ವರ್ಷದ ಅವಧಿಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆಯಲ್ಲಿ ಶೇ 12ರಷ್ಟು ಏರಿಕೆಯಾಗಿದೆ. ರಸ್ತೆ ಅಪಘಾತ ತಡೆಗೆ ಸರ್ಕಾರ ತೆಗೆದುಕೊಳ್ಳುತ್ತಿರುವ ಕ್ರಮಗಳು ಪರಿಣಾಮಕಾರಿಯಲ್ಲ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.

ಅಪಘಾತದ ಸಂದರ್ಭದಲ್ಲಿ ಮೃತಪಡುವವರ ಸಂಖ್ಯೆಯನ್ನು ಕಡಿಮೆ ಮಾಡಲೂ ಸಚಿವಾಲಯವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಕಾರುಗಳಲ್ಲಿ ಚಾಲಕ ಮತ್ತು ಮುಂಬದಿಯ ಪ್ರಯಾಣಿಕರ ಸೀಟ್‌ಗಳಿಗೆ ಏರ್‌ಬ್ಯಾಗ್ ಅನ್ನು ಕಡ್ಡಾಯ ಮಾಡಲಾಗಿದೆ. ಸೀಟ್‌ಬೆಲ್ಟ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ದ್ವಿಚಕ್ರ ವಾಹನಗಳ ಇಬ್ಬರು ಸವಾರರೂ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡಲಾಗಿದೆ. ಹೀಗಿದ್ದೂ, ಅಪಘಾತಗಳಲ್ಲಿ ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಬಂದಿಲ್ಲ. ಅಪಘಾತಗಳನ್ನು ತಡೆಯಲು ಮತ್ತು ಅಪಘಾತ ಸಂಭವಿಸಿದಾಗ ಸಾವು ಸಂಭವಿಸುವುದನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಸ್ವಲ್ಪವೂ ಪರಿಣಾಮ ಬೀರಿಲ್ಲ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ. ಸಾವುಗಳ ಸಂಖ್ಯೆ ಇಳಿಕೆಯಾಗುವುದರ ಬದಲಿಗೆ, ಅವುಗಳ ಸಂಖ್ಯೆ ಏರಿಕೆಯಾಗಿರುವುದೇ ಇದಕ್ಕೆ ಸ್ಪಷ್ಟ ನಿದರ್ಶನ.

ದೇಶದ ಜನರ ಚಾಲನಾ ಸ್ವರೂಪ ಮತ್ತು ಹವ್ಯಾಸದಲ್ಲಿ ಬದಲಾವಣೆ ಆಗದೇ ಇರುವುದೇ ಅಪಘಾತಗಳು ಮತ್ತು ಸಾವಿನ ಸಂಖ್ಯೆ ಏರಿಕೆಯಾಗಲು ಪ್ರಮುಖ ಕಾರಣ ಎಂಬುದರತ್ತ ಈ ವರದಿ ಬೆಳಕು ಚೆಲ್ಲಿದೆ. 2021ರಲ್ಲಿ ದೇಶದಲ್ಲಿ ಸಂಭವಿಸಿದ ಒಟ್ಟು ಅಪಘಾತಗಳಲ್ಲಿ ಅತಿವೇಗದ ಕಾರಣದಿಂದ ಸಂಭವಿಸಿದ ಅಪಘಾತಗಳ ಪ್ರಮಾಣ ಶೇ 77ರಷ್ಟು. ದೇಶದ ಪ್ರತಿ ಹೆದ್ದಾರಿ ಮತ್ತು ರಸ್ತೆಗೂ ಗರಿಷ್ಠ ವೇಗ ಮಿತಿ ಇದೆ. ಈ ಮಿತಿಯನ್ನೂ ಮೀರಿದ ವೇಗವನ್ನು ಅತಿವೇಗ ಎಂದು ಪರಿಗಣಿಸಲಾಗುತ್ತದೆ. ಈ ರೀತಿಯ ಮಿತಿಮೀರಿದ ವೇಗದಿಂದಲೇ ಬಹುತೇಕ ಅಪಘಾತಗಳು ಸಂಭವಿಸಿವೆ. ಜತೆಗೆ ಲೇನ್ ಶಿಸ್ತು ಇಲ್ಲದ ಚಾಲನೆಯಿಂದ ಸಂಭವಿಸಿದ ಅಪಘಾತಗಳ ಪ್ರಮಾಣವೂ ಹೆಚ್ಚು ಇದೆ. ಸಿಗ್ನಲ್ ಜಂಪ್, ಚಾಲನೆ ವೇಳೆ ಮೊಬೈಲ್ ಬಳಕೆಯಂತಹ ಸಂಚಾರ ಮತ್ತು ಚಾಲನಾ ನಿಯಮಗಳ ಉಲ್ಲಂಘನೆಯೂ ಹೆಚ್ಚು ಅಪಘಾತಗಳಿಗೆ ಕಾರಣವಾಗಿವೆ ಎಂಬುದನ್ನು ವರದಿಯಲ್ಲಿ ವಿವರಿಸಲಾಗಿದೆ.


ಒಟ್ಟಾರೆ ಜನರ ಚಾಲನಾ ಹವ್ಯಾಸ ಮತ್ತು ಸ್ವರೂಪ ಬದಲಾಗದೇ ಇದ್ದರೆ, ಅಪಘಾತಗಳು ಹಾಗೂ ಅಪಘಾತಗಳಿಂದ ಸಂಭವಿಸುವ ಸಾವಿನ ಸಂಖ್ಯೆಯಲ್ಲಿ ಇಳಿಕೆಯಾಗುವುದಿಲ್ಲ ಎಂಬುದನ್ನು ಈ ದತ್ತಾಂಶಗಳು ಮತ್ತು ವಿಶ್ಲೇಷಣೆಗಳು ಸೂಚಿಸುತ್ತವೆ.

ಅಪಘಾತ ಮರಣ ದರ ಏರಿಕೆ




ಅಪಘಾತ ಅಮೆರಿಕದಲ್ಲಿ ಹೆಚ್ಚು

ವಿಶ್ವದಲ್ಲಿ ಅತಿಹೆಚ್ಚು ರಸ್ತೆ ಅಪಘಾತಗಳು ಸಂಭವಿಸುವ ದೇಶಗಳ ಪಟ್ಟಿಯಲ್ಲಿ ಅಮೆರಿಕವು ಮೊದಲ ಸ್ಥಾನದಲ್ಲಿದೆ. ಭಾರತವು ಎರಡನೇ ಸ್ಥಾನದಲ್ಲಿದೆ. ಆದರೆ, ರಸ್ತೆ ಅಪಘಾತಗಳಲ್ಲಿ ಹೆಚ್ಚು ಜನರು ಮೃತಪಡುವ ದೇಶಗಳ ಪಟ್ಟಿಯಲ್ಲಿ ಭಾರತವು ಮೊದಲನೇ ಸ್ಥಾನದಲ್ಲಿದೆ. ವಿಶ್ವದಲ್ಲಿ ರಸ್ತೆ ಅಪಘಾತಕ್ಕೆ ಹೆಚ್ಚು ಜನರು ಬಲಿಯಾಗುವುದು ಭಾರತದಲ್ಲೇ. ಸರಿಸುಮಾರು ಭಾರತದಷ್ಟೇ ಅಪಘಾತಗಳು ಸಂಭವಿಸುವ ದೇಶಗಳಲ್ಲಿ, ಮೃತಪಡುವವರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಕಡಿಮೆ ಇದೆ. 2021ರಲ್ಲಿ ಭಾರತದಲ್ಲಿ 4.32 ಲಕ್ಷ ಅಪಘಾತಗಳು ಸಂಭವಿಸಿದ್ದರೆ, ಒಟ್ಟು 1.53 ಲಕ್ಷ ಜನರು ಮೃತಪಟ್ಟಿದ್ದಾರೆ. ಇದೇ ಅವಧಿಯಲ್ಲಿ ಅಮೆರಿಕದಲ್ಲಿ 19.27 ಲಕ್ಷ ಅಪಘಾತಗಳಲ್ಲಿ 36,560 ಜನರಷ್ಟೇ ಮೃತಪಟ್ಟಿದ್ದಾರೆ. 2021ರಲ್ಲಿ ಜಪಾನ್‌ನಲ್ಲಿ 4.30 ಲಕ್ಷ ಅಪಘಾತಗಳು ಸಂಭವಿಸಿವೆ. ಆದರೆ, ಇಷ್ಟು ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಕೇವಲ 4,166.



ನಿಯಮ ಉಲ್ಲಂಘನೆಗೆ ಸಾವಿನ ಶಿಕ್ಷೆ



- 2020ರಲ್ಲಿ 91,239 ಜನರು ಅತಿವೇಗದ ಚಾಲನೆಯ ಕಾರಣಕ್ಕೆ ನಡೆದ ಅಪಘಾತದಲ್ಲಿ ಪ್ರಾಣ ಬಿಟ್ಟಿದ್ದಾರೆ. ಅಂದರೆ, ಮೃತಪಟ್ಟ 1.31 ಲಕ್ಷ ಪ್ರಯಾಣಿಕರ ಪೈಕಿ, ಅತಿವೇಗದ ಚಾಲನೆಯ ಕಾರಣದಿಂದ ಸಂಭವಿಸುವ ಅಪಘಾತಗಳಲ್ಲಿ ಶೇ 69ರಷ್ಟು ಜನರು ಜೀವ ತೆತ್ತಿದ್ದಾರೆ. 2021ರಲ್ಲಿ ಇದೇ ಕಾರಣಕ್ಕೆ ಮೃತಪಟ್ಟವರ ಸಂಖ್ಯೆ 1.07 ಲಕ್ಷಕ್ಕೆ ಹೆಚ್ಚಳವಾಗಿದೆ.
- ಮದ್ಯ ಅಥವಾ ಮಾದಕದ್ರವ್ಯದ ಅಮಲಿನಲ್ಲಿ ಚಾಲನೆ ಮಾಡಿದ ಕಾರಣಕ್ಕೆ ನಡೆದ ಅಪಘಾತಗಳಲ್ಲಿ 2021ರಲ್ಲಿ 3,314 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ವಿರುದ್ಧ ದಿಕ್ಕಿನಲ್ಲಿ ವಾಹನಗಳನ್ನು ಚಾಲನೆ ಮಾಡಿ ಅಥವಾ ಲೇನ್ ಶಿಸ್ತು ಉಲ್ಲಂಘಿಸಿ ನಡೆದ ಅಪಘಾತದಲ್ಲಿ 8,122 ಜನರು ಅಸುನೀಗಿದ್ದಾರೆ. 2,982 ಜನರ ಸಾವಿಗೆ ಚಾಲನೆ ವೇಳೆ ಮೊಬೈಲ್ ಬಳಕೆಯೂ ಕಾರಣವಾಗಿದೆ ಎಂದು ವರದಿ ತಿಳಿಸಿದೆ.

ತಿರುವಿನಲ್ಲಿ ಅಲ್ಲ, ನೇರ ರಸ್ತೆಯಲ್ಲೇ ಹೆಚ್ಚು ಅಪಘಾತ



ಪ್ರಯಾಣದ ವೇಳೆ ದಿಢೀರನೆ ಎದುರಾಗುವ ರಸ್ತೆ ತಿರುವುಗಳು ಅಪಘಾತಕ್ಕೆ ಮುಖ್ಯ ಕಾರಣ ಎಂಬ ಸಾಮಾನ್ಯ ನಂಬಿಕೆಯಿದೆ. ಈ ತಿರುವುಗಳಲ್ಲಿ 'ಅಪಘಾತ ವಲಯ' ಎಂಬ ಎಚ್ಚರಿಕೆಯ ಫಲಕವನ್ನೂ ಹಾಕಲಾಗಿರುತ್ತದೆ. ಅಂಕುಡೊಂಕಾದ ರಸ್ತೆಗಳು, ಇಳಿಜಾರು ರಸ್ತೆಗಳು ಅಥವಾ ಗುಂಡಿಗಳಿಂದ ತುಂಬಿರುವ ರಸ್ತೆಗಳಲ್ಲಿ ಹೆಚ್ಚು ಅಪಘಾತ ಸಂಭವಿಸುತ್ತವೆ ಎಂದೂ ಹೇಳಲಾಗುತ್ತದೆ. ಆದರೆ, ಈ ಎಲ್ಲ ವಾದಗಳು ಸಂಪೂರ್ಣ ನಿಜವಲ್ಲ ಎನ್ನುತ್ತದೆ ಈ ವರದಿ. ನೇರವಾಗಿರುವ ರಸ್ತೆಯಲ್ಲೇ ಅತಿಹೆಚ್ಚು ಅಪಘಾತಗಳು ನಡೆದಿರುವುದು ವರದಿಯಲ್ಲಿರುವ ಅಂಕಿಅಂಶಗಳಿಂದ ದೃಢಪಟ್ಟಿದೆ.

2020ರಲ್ಲಿ ದೇಶದಲ್ಲಿ 3.66 ಲಕ್ಷ ಅಪಘಾತಗಳು ನಡೆದಿವೆ. ಈ ಪೈಕಿ ನೇರವಾದ ರಸ್ತೆಗಳಲ್ಲೇ ಶೇ 65ರಷ್ಟು ಅಪಘಾತಗಳು (2.37 ಲಕ್ಷ) ಸಂಭವಿಸಿವೆ. 2021ರಲ್ಲಿ 4.32 ಲಕ್ಷ ಅಪಘಾತ ಪ್ರಕರಣಗಳು ವರದಿಯಾಗಿವೆ. ಈ ಪೈಕಿ ನೇರವಾದ ರಸ್ತೆಯಲ್ಲಿ ಸಂಭವಿಸಿದ ಅಪಘಾತಗಳು ಶೇ 65ರಷ್ಟು (2.78 ಲಕ್ಷ) ಎಂದು ವರದಿಯಾಗಿವೆ.

ನೇರ ರಸ್ತೆಗಳ ನಂತರ, ತಿರುವುಗಳಿಂದ ಕೂಡಿದ ರಸ್ತೆಯಲ್ಲಿ ಆಗುವ ಅಪಘಾತಗಳ ಸಂಖ್ಯೆ ಹೆಚ್ಚು. 2020ರಲ್ಲಿ ಸಂಭವಿಸಿದ ಒಟ್ಟು ಅಪಘಾತಗಳ ಪೈಕಿ ತಿರುವಿನಿಂದ ಕೂಡಿದ ರಸ್ತೆಯಲ್ಲಿ ನಡೆದ ಅಪಘಾತಗಳ ಪಾಲು ಶೇ 13. ಈ ಪ್ರಮಾಣ 2021ರಲ್ಲಿ ಶೇ 11.5ಕ್ಕೆ ಇಳಿಕೆಯಾಗಿದೆ.

ರಸ್ತೆ ತಿರುವಿನ ಜಾಗದಲ್ಲಿ ಚಾಲಕರು ವಾಹನಗಳ ವೇಗವನ್ನು ತಗ್ಗಿಸಿ, ಜಾಗ್ರತೆಯಿಂದ ಚಾಲನೆ ಮಾಡುತ್ತಾರೆ. ಆದರೆ ನೇರ ರಸ್ತೆಗಳಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ ಎಂದು ಭಾವಿಸುವ ಚಾಲಕರು ಅತಿವೇಗದಿಂದ ವಾಹನ ಓಡಿಸುತ್ತಾರೆ. ದಿಢೀರನೆ ಅಡ್ಡಿ ಎದುರಾದಾಗ, ವಾಹನಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವಲ್ಲಿ ವಿಫಲರಾಗುತ್ತಾರೆ. ಹೀಗಾಗಿ ನೇರ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ ಎಂದು ವಿಶ್ಲೇಷಿಸಲಾಗಿದೆ.

ಆಧಾರ: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ 'ಭಾರತದಲ್ಲಿ ರಸ್ತೆ ಅಪಘಾತಗಳು 2021' ವರದಿ

ಬಿಜೆಪಿ ಹಣಿಯಲು ಸಮಾಜವಾದಿ ಪಕ್ಷದ 'ಇಂಟರ್‌ನೆಟ್' ತಂತ್ರ

ಪ್ರಜಾವಾಣಿ ವಾರ್ತೆ

ಲಖನೌ: 'ರಸಗೊಬ್ಬರಕ್ಕಾಗಿ ಸರತಿಯಲ್ಲಿ ನಿಂತ ರೈತರು, ನೀರು ಬರದ ಕೊಳಾಯಿಯ ಸುತ್ತ ಖಾಲಿ ಬಿಂದಿಗೆಗಳು, ರೋಗಿಯನ್ನು ಹೆಗಲಲ್ಲಿ ಹೊತ್ತೊಯ್ದ ಸಂಬಂಧಿಕರು, ವ್ಯಾಪಾರಿಯ ಹತ್ಯೆ'... ಸಮಾಜವಾದಿ ಪಕ್ಷದ ಫೇಸ್‌ಬುಕ್ ಪುಟ ಮತ್ತು ಟ್ವಿಟರ್ ಖಾತೆಯಲ್ಲಿ ಈಗ ಇಂತಹ ತಲೆಬರಹಗಳ ಸುದ್ದಿ ಕ್ಲಿಪ್ಪಿಂಗ್‌ಗಳು ತುಂಬಿ ಹೋಗಿವೆ. ಇಂತಹ ಕ್ಲಿಪ್ಪಿಂಗ್ ಇರುವ ಪೋಸ್ಟ್ ಮತ್ತು ಟ್ವೀಟ್‌ಗಳು ಲಕ್ಷಾಂತರ ಸಂಖ್ಯೆಯಲ್ಲಿ ಹಂಚಿಕೆಯಾಗಿವೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಪಕ್ಷವು ಮಾಡಿಕೊಂಡಿರುವ ಸಿದ್ಧತೆ ಇದು.

ಮೈನ್‌ಪುರಿ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಇತ್ತೀಚಿಗೆ ದೊರೆತಿರುವ ಅಭೂತಪೂರ್ವ ಗೆಲುವು ಸಮಾಜವಾದಿ ಪಕ್ಷದ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಇಂಟರ್‌ನೆಟ್ ಅನ್ನು ಸಮರ್ಥವಾಗಿ ಬಳಸಿಕೊಳ್ಳಲು ಪಕ್ಷ ಮುಂದಾಗಿದೆ.

ಪ್ರತೀ ಹಂತವೂ ಬಿಜೆಪಿಗೆ ಸವಾಲಾಗುವಂತೆ ನೋಡಿಕೊಳ್ಳುವತ್ತ ಹೆಜ್ಜೆ ಇಟ್ಟಿರುವ ಪಕ್ಷ, ಕಾನೂನು ಸುವ್ಯವಸ್ಥೆ, ಆರೋಗ್ಯ, ರೈತರು, ಯುವಜನತೆಯಂತಹ ವಿಚಾರಗಳನ್ನು ಇಟ್ಟುಕೊಂಡು ರಾಜ್ಯ ಸರ್ಕಾರವನ್ನು ಹಣಿಯಲು ನಿರ್ಧರಿಸಿದೆ.

ರಾಜ್ಯದಲ್ಲಿ ನಡೆದ ಅಪರಾಧ ಪ್ರಕರಣಗಳು, ರಸಗೊಬ್ಬರ ಕೊರತೆ, ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಪ್ರಕಟವಾಗಿರುವ ಪತ್ರಿಕಾ ವರದಿಯ ತುಣುಕುಗಳನ್ನು ಫೇಸ್‌ಬುಕ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಸಮಾಜವಾದಿ ಪಕ್ಷ ಹಂಚಿಕೊಳ್ಳುತ್ತಿದೆ. ಈ ವಿಷಯಗಳ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊಗಳನ್ನೂ ಹಂಚಿಕೊಳ್ಳುತ್ತಿದೆ.

ಆಡಳಿತ ಪಕ್ಷದ ಶಾಸಕರೊಬ್ಬರ ಜಿಲ್ಲೆಯಲ್ಲಿ ನಾಗರಿಕರೊಬ್ಬರ ಮನೆಯನ್ನು ಬುಲ್ಡೋಜರ್ ಬಳಸಿ ಧ್ವಂಸ ಮಾಡಿದ ವಿಡಿಯೊವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಳ್ಳಲಾಗಿದೆ. ತನ್ನ ಮನೆಯ ಧ್ವಂಸದ ಹಿಂದೆ ಶಾಸಕರ ಕೈವಾಡವಿದೆ ಎಂದು ಮನೆಯ ಮಾಲೀಕ ಆರೋಪ ಮಾಡಿರುವ ಪತ್ರಿಕಾ ಸುದ್ದಿಯ ತುಣುಕನ್ನೂ ಈ ವಿಡಿಯೊ ಒಳಗೊಂಡಿದೆ.

ಬೀದಿನಾಯಿಗಳ ಹಾವಳಿ, ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಆಂಬುಲೆನ್ಸ್‌ಗಳ ಕೊರತೆ, ನೀರಿನ ಬವಣೆಯನ್ನು ವರದಿ ಮಾಡಿರುವ ಪತ್ರಿಕಾ ವರದಿಯ ತುಣುಕುಗಳನ್ನೂ ಪಕ್ಷದ ವೇದಿಕೆಗಳ ಮೂಲಕ ಫೇಸ್‌ಬುಕ್‌ಗೆ ಪೋಸ್ಟ್ ಮಾಡಲಾಗಿದೆ.

'ವಾಸ್ತವ ತಿಳಿಸುವ ಯತ್ನ'

'ರಾಜ್ಯದ ಆಡಳಿತಾರೂಢ ಬಿಜೆಪಿಯು ತನ್ನ ಸಾಮಾಜಿಕ ತಾಲತಾಣ ವೇದಿಕೆಗಳ ಮೂಲಕ ವ್ಯವಸ್ಥಿತವಾಗಿ ಜನರ ಮೇಲೆ ಪ್ರಭಾವ ಬೀರುತ್ತಿದೆ. ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಕುರಿತು ಧನಾತ್ಮಕ ವಿಚಾರಗಳನ್ನು ಬಿಂಬಿಸುತ್ತಿದೆ. ಇದರಿಂದ ಜನರಿಗೆ ವಾಸ್ತವ ಸ್ಥಿತಿಯನ್ನು ಅರಿಯಲು ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ನಿಜವಾಗಿ ಏನು ನಡೆಯುತ್ತಿದೆ ಎಂಬುದನ್ನು ನಾವು ಪಕ್ಷದ ಸಾಮಾಜಿಕ ಜಾಲತಾಣದ ವೇದಿಕೆಗಳ ಮೂಲಕ ಜನರಿಗೆ ತಿಳಿಸುತ್ತಿದ್ದೇವೆ' ಎಂದು ಎಸ್‌ಪಿ ಮುಖಂಡರೊಬ್ಬರು ಹೇಳುತ್ತಾರೆ.

'ಸಮಾಜವಾದಿ ಪಕ್ಷವು ಬಿಜೆಪಿ ವಿರುದ್ಧ ಮಾಡುವ ಆರೋಪಗಳಿಗಿಂತ, ಪತ್ರಿಕಾ ವರದಿಗಳು ಹಾಗೂ ವಿಡಿಯೊಗಳು ಜನರ ದೃಷ್ಟಿಯಲ್ಲಿ ಹೆಚ್ಚು ವಿಶ್ವಾಸಾರ್ಹವಾಗಿ ಕಾಣುತ್ತವೆ. ಸರ್ಕಾರದ ನೀತಿಗಳನ್ನು ವಿರೋಧಿಸಿ ಪಕ್ಷವು ಸದ್ಯದಲ್ಲೇ ಬೀದಿಗಿಳಿದು ಹೋರಾಟ ಮಾಡಲಿದೆ' ಎಂದು ಅವರು ಹೇಳಿದ್ದಾರೆ.



ಸಮಾಜವಾದಿ ಪಕ್ಷದ ಫೇಸ್‌ಬುಕ್ ಪೋಸ್ಟ್

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಯಾವದೂ ಸಣ್ಣದಲ್ಲ

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ |
ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ||
ಹೀನಮಾವುದುಮಿಲ್ಲ ಜಗದ ಗುಡಿಯೂಳಿಗದಿ |
ತಾಣ ನಿನಗಿಹುದಲ್ಲಿ – ಮಂಕುತಿಮ್ಮ || 790 ||

ಪದ-ಅರ್ಥ: ಏನಾನುಮಂ = ಏನಾದರೂ, ದೊರೆತುಜ್ಜುಗವ = ದೊರೆತ + ಉಜ್ಜುಗವ(ಉದ್ಯೋಗವ, ಕಾರ್ಯವ), ಹೀನಮಾವುದುಮಿಲ್ಲ = ಹೀನಮ್ (ಹೀನ) + ಆವುದಮ್ (ಯಾವುದೂ) + ಇಲ್ಲ, ಗುಡಿಯೂಳಿಗದಿ = ಗುಡಿಯ + ಊಳಿಗದಿ(ಸೇವೆಯಲ್ಲಿ), ತಾಣ = ಸ್ಥಾನ, ನಿನಗಿಹುದಲ್ಲಿ = ನಿನಗೆ+ + ಇಹುದು + ಅಲ್ಲಿ.

ವಾಚ್ಯಾರ್ಥ: ಕೈಗೆ ದೊರೆತ ಯಾವ ಕೆಲಸವನ್ನಾದರೂ ಮಾಡು. ನಾನು ಕೇವಲ ಒಂದು ಹುಲ್ಲು ಕಡ್ಡಿ ಎನ್ನುವ ದೀನತೆ ಬೇಡ. ಈ ಜಗತ್ತೆಂಬ ಗುಡಿಯಲ್ಲಿ ಕೀಳಾದದ್ದು ಯಾವುದೂ ಇಲ್ಲ. ನಿನಗೊಂದು ಸ್ಥಳ ಅಲ್ಲಿದೆ.

ವಿವರಣೆ: ಜಗತ್ತಿನಲ್ಲಿ ಒಬ್ಬರನ್ನು ಇನ್ನೊಬ್ಬರಿಗೆ ಹೋಲಿಸುವುದು ಒಂದು ದೊಡ್ಡ ಭ್ರಾಂತಿ. ತನ್ನನ್ನು ತಾನು ಏನೂ ಅಲ್ಲವೆಂದು ಭಾವಿಸುವುದು ಅವಿವೇಕ. ಹಾಗೆಯೇ ತಾನು ಬಲು ದೊಡ್ಡವನು ಎಂದು ತಿಳಿಯುವುದೂ ದೊಡ್ಡ ಅವಿವೇಕ. ಜಗತ್ತಿನ ನಿಯತಿಯನ್ನು ತಿಳಿಯಬೇಕಾದರೆ ಈ ಹೋಲಿಸಿ ನೋಡುವ ಮನೋಧರ್ಮವನ್ನು ಬಿಡಬೇಕು. ಸಮುದ್ರ ಬಲು ದೊಡ್ಡದು, ಒಂದು ನೀರ ಹನಿ ತುಂಬ ಚಿಕ್ಕದು ಎಂದು ಮೇಲ್ನೋಟಕ್ಕೆ ತೋರುತ್ತದೆ. ಆದರೆ ಸಮುದ್ರವೆಂದರೇನು? ಅದು ನೀರಹನಿಗಳ ಬೃಹತ್ ಒಕ್ಕೂಟ. ನೀರಹನಿ ಮತ್ತು ಸಮುದ್ರ ಬೇರೆಯಲ್ಲ. ಕಗ್ಗ ಆ ಮಾತನ್ನು ಹೇಳುತ್ತದೆ. ಯಾವ ಕೆಲಸವೂ ಚಿಕ್ಕದಲ್ಲ. ದೊರೆತದ್ದನ್ನು ಶ್ರದ್ಧೆಯಿಂದ ಮಾಡು. ಆಫೀಸಿನಲ್ಲಿ ಸಾಹೇಬರು ಮುಖ್ಯ ಎಂದು ಭಾವಿಸುತ್ತೇವೆ. ಅವರು ಎರಡು ದಿನ ಬರದಿದ್ದರೆ ಯಾವ ಅನಾಹುತವೂ ಆಗುವುದಿಲ್ಲ. ಆದರೆ ಕಸಗುಡಿಸುವವರು ಮತ್ತು ಶೌಚಾಲಯವನ್ನು ಶುದ್ಧಮಾಡುವವರು ಬರದಿದ್ದರೆ ಆಫೀಸಿನಲ್ಲಿ ಇರುವುದು ಅಸಾಧ್ಯ. ಪ್ರಧಾನಮಂತ್ರಿಗಳು ಬಹಳ ಮುಖ್ಯರು ನಿಜ. ಆದರೆ ಅವರನ್ನು ಕ್ಷೇಮವಾಗಿ ಕರೆದೊಯ್ಯುವ ವಾಹನ ಚಾಲಕ ಮುಖ್ಯವಲ್ಲವೆ? ಹಾಗೆ ನೋಡಿದರೆ ಪ್ರಧಾನ ಮಂತ್ರಿಗಳ ಭದ್ರತೆ ಇರುವುದು ಅವನ ಜವಾಬ್ದಾರಿಯಲ್ಲಿ.ಭಾರೀ ಹರಿತವಾದ ಬಲಶಾಲಿ ಖಡ್ಗ ಮಾಡದ್ದನ್ನು ಒಂದು ಸೂಜಿ ಮಾಡುತ್ತದೆ. ಅದಕ್ಕೇ ಈ ಚೌಪದಿ ಹೇಳುತ್ತದೆ, ನಾನೊಂದು ಹುಲ್ಲುಕಡ್ಡಿ, ಚಿಕ್ಕ ಮನುಷ್ಯ, ನನ್ನಿಂದ ಏನಾದೀತು ಎಂದು ಕೊರಗಬೇಡ. ಕೀಳರಿಮೆ ಒಂದು ಶಾಪ. ಒಂದು ದೊಡ್ಡ ಅರಮನೆಯ ಕಟ್ಟಡದ ಕಾರ್ಯ ನಡೆದಿತ್ತು. ಗೋಡೆಗೆ ದೊಡ್ಡ ದೊಡ್ಡ ಅಮೃತಶಿಲೆಗಳನ್ನು ಜೋಡಿಸುತ್ತಿದ್ದರು. ಗಾರೆ ಕೆಲಸದವ, ಎರಡು ದೊಡ್ಡ ಅಮೃತಶಿಲೆಗಳನ್ನು ಜೋಡಿಸುವಾಗ ಚಿಕ್ಕ ಚಿಕ್ಕ ಚೂಪಾದ ಕಲ್ಲುಗಳನ್ನು ಇಡುತ್ತಿದ್ದ. ರಾಜ. ಕೇಳಿದ, "ಇಷ್ಟು ಚೆಂದದ ಅಮೃತಶಿಲೆಗಳ ನಡುವೆ ಈ ಚಿಕ್ಕ ಕಲ್ಲುಗಳು ಏಕೆ?". ಗಾರೆಯವ ಹೇಳಿದ, "ಸ್ವಾಮಿ, ದೊಡ್ಡ ಕಲ್ಲುಗಳನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುವೇ ಈ ಚಿಕ್ಕ ಕಲ್ಲುಗಳು. ಅವಿಲ್ಲದೆ ಅಮೃತಶಿಲೆಗಳ ಹಲಗೆಗಳು ನಿಲ್ಲಲಾರವು". ದೊಡ್ಡವರು ದೊಡ್ಡವರಾಗಬೇಕಾದರೆ ಚಿಕ್ಕವರು ಅನಿವಾರ್ಯ. ಹೀಗೆ ಪ್ರಪಂಚವೆಬ ದೇವಸ್ಥಾನದಲ್ಲಿ ಸಾವಿರಾರು ಕೆಲಸಗಳು. ಎಲ್ಲವೂ ಒಂದಕ್ಕೊಂದು ಪೂರಕ. ಯಾವುದೂ ಸಣ್ಣದಲ್ಲ, ಪ್ರತಿಯೊಂದಕ್ಕೂ ಅದರದೇ ಆದ ಸ್ಥಾನ, ಗೌರವ ಇದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 2, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಏಕಾದಶಿ ಗಂ. 20-24 ನಕ್ಷತ್ರ: ಭರಣಿ ಗಂ. 14-24 ಯೋಗ: ಸಿದ್ಧ ಗಂ. 06-57, ಕರಣ: ವಣಿಜ ಗಂ. 07-44, ಧನುರ್ ಮಾಸದ 17 ನೇ ದಿನ. ರಾಹುಕಾಲ : ಬೆಳಿಗ್ಗೆ 07-30 -09-00
ಸೂರ್ಯೋದಯ : 06-57 ಸೂರ್ಯಾಸ್ತ : 06-11
ಮುಸ್ಲಿಂ ದಿನಾಂಕ : 09 ಜುಮಾದುಸ್ಸಾನಿ
ದಿನ ವಿಶೇಷ : ವೈಕುಂಠ ಏಕಾದಶಿ (ದ.ಭಾರತ), ಪುತ್ರದ ಏಕಾದಶಿ
ಅದೃಷ್ಟ ಸಂಖ್ಯೆ : 4, 5

ಮೇಷ: ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಹೊಸ ಅವಕಾಶಗಳು ದೊರೆಯಲಿದೆ. ಓದಿನಲ್ಲಿ ಅಪರಿಮಿತ ಆಸಕ್ತಿ ತೋರುವಿರಿ. ಕಚೇರಿಯಲ್ಲಿ ಸಮಯ ವ್ಯರ್ಥವಾಗುವ ರೀತಿಯಲ್ಲಿ ಘಟನೆಗಳು ನಡೆಯುವುದು.

ವೃಷಭ: ಕಾರ್ಯಕ್ಷೇತ್ರದಲ್ಲಿ ಉತ್ತಮವಾದ ಸ್ಥಾನಮಾನ ತೋರಿಬರುವುದರ ಜತೆಯಲ್ಲಿ ಕೆಲಸದ ಅತೀ ಒತ್ತಡ ದೇಹದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಅಲಂಕಾರಿಕ ವಸ್ತುಗಳ ಖರೀದಿ ಆಗಲಿದೆ.

ಮಿಥುನ: ಸಜ್ಜನರ ಒಡನಾಟ ಪ್ರಾಪ್ತಿಯಾಗಲಿದೆ. ಮೇಲಧಿಕಾರಿಗಳು ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಲು ಹೆಚ್ಚಿನ ಗಮನ ನೀಡಿರಿ. ಮನೆಯಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ಇರುತ್ತದೆ.

ಕರ್ಕಾಟಕ: ಪೆಟ್ರೋಲ್ ವ್ಯಾಪಾರದಲ್ಲಿ ಮಾರಾಟ ಉತ್ತಮವಾಗಿರುವುದು. ಆಸ್ತಿ ಖರೀದಿಸುವ ವಿಷಯದಲ್ಲಿ ನಿಧಾನ ಮಾಡಬೇಡಿ. ಈ ದಿನಕ್ಕೆ ಮೊದಲ ಆದ್ಯತೆ. ದೃಢ ನಿರ್ಧಾರ ಕೈಗೊಳ್ಳಲು ಹಿಂಜರಿಕೆ ಬೇಡ.

ಸಿಂಹ: ಕೆಲವು ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಇತರರ ಸಲಹೆ ಪಡೆಯುವುದು ಕೊನೇಪಕ್ಷ ಕಾಲ ಅವಕಾಶವನ್ನು ತೆಗೆದುಕೊಂಡು ಯೋಚಿಸಿ ಉತ್ತರ ನೀಡುವುದು ಉತ್ತಮ.

ಕನ್ಯಾ: ವಿದ್ಯಾಬಲದಿಂದಾಗಿ ಉತ್ತಮ ಸ್ಥಾನಮಾನ ಪ್ರಾಪ್ತಿಯಾಗುವುದು. ಸ್ನೇಹಿತರಿಗೆ ಫಲದಾಯಕವಾದ ಸಲಹೆಗಳು ದೊರಕುತ್ತದೆ. ಸಮಾಜದಲ್ಲಿ ನಿಗರ್ವಿಯಾಗಿರುವ ವ್ಯಕ್ತಿತ್ವ ಹೆಚ್ಚಿನ ಶೋಭೆ ತರುವುದು.

ತುಲಾ: ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ದುಡಿಮೆಯು ಸಾರ್ಥಕವಾಗಲಿದೆ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ ಇರುವುದು.

ವೃಶ್ಚಿಕ: ರಾಜಕೀಯ ವರ್ಗದವರು ಜನ ಮನ್ನಣೆ ಪಡೆದುಕೊಂಡು ಉತ್ತಮ ಶುಭ ಫಲಗಳನ್ನು ಹೊಂದಲಿದ್ದಾರೆ. ನಿಮ್ಮ ಶ್ರಮಕ್ಕೆ ಅಧಿಕವಾದ ರೀತಿಯಲ್ಲಿ ಅಥವಾ ಪ್ರವೃತ್ತಿಯಿಂದ, ನಾನಾ ಮೂಲಗಳಿಂದ ಧನ ಸಂಪಾದನೆ.

ಧನು: ಸಹೋದರರಲ್ಲಿ ಅಥವಾ ದಾಂಪತ್ಯದಲ್ಲಿ ಸಣ್ಣ ಪುಟ್ಟ ವಿಚಾರಗಳಲ್ಲಿ ಮಾನಸಿಕವಾಗಿ ಅಸಮಾಧಾನ ಕಾಡಲಿದೆ. ತರಕಾರಿ ಬೆಳೆಗಾರರಿಗೆ ಸಮಾಧಾನಕರ ವರಮಾನ. ಅನಿರೀಕ್ಷಿತ ಸಂತೋಷದ ಕ್ಷಣಗಳು ಬರಲಿದೆ.

ಮಕರ: ಅಬಕಾರಿ ಅಧಿಕಾರಿಗಳಿಗೆ, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ, ಸಿವಿಲ್ ಕಂಟ್ರಾಕ್ಟರುಗಳಿಗೆ ಉದ್ಯೋಗ ನಿಮಿತ್ತ ಒಳ್ಳೆಯ ದಿನ. ತಂದೆ ತಾಯಿಯವರ ಆರೋಗ್ಯ ಉತ್ತಮವಾಗಿದ್ದು, ನಿರಾಳವಾಗಿರಲಿದೆ.

ಕುಂಭ: ಕೃಷಿಕರು ದಲ್ಲಾಳಿಗಳಿಂದ ಮೋಸ ಹೋಗುವ ಸ್ಥಿತಿ ಬರುವುದು ಎಚ್ಚರವಹಿಸಿ. ಕೆಲಸದ ಒತ್ತಡ ಹೆಚ್ಚಾಗಿ ಶಿರೋ ವೇದನೆಯಂತಹ ಸಮಸ್ಯೆಗೆ ಒಳಗಾಗಬೇಕಾಗುವುದು. ಅವಿವಾಹಿತರಿಗೆ ಶುಭ ಫಲಗಳು ಲಭಿಸುವುದು.

ಮೀನ: ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ಇರಲಿದೆ. ಕೈಗೊಂಡ ಕಾರ್ಯಗಳು ನಿರಾಯಾಸವಾಗಿನೆರವೇರುವುದರಲ್ಲಿ ಸಂಶಯವಿಲ್ಲ. ಆರ್ಥಿಕವಾಗಿ ಸೌಕರ್ಯ ಪಡೆದುಕೊಳ್ಳುವಿರಿ.

ಪದಬಂಧ 5187


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಹೆದರುವ ವ್ಯಕ್ತಿ (3)
2.ಕನ್ನಡಿಗನ ಬಾಯಲ್ಲಿ ನೈಟ್ರೋಜನ್! (5)
4.ಎದುರಿಗೆ ಮೂರ್ತೀಭವಿಸುವುದು (4)
6.ದಂಪತಿಗಳು ಹಬ್ಬಿಸಿದ ಗಾಳಿಸುದ್ದಿ (3)
7.ಮತ ಹಾಕುವಾಗ ಅವರಿಸಿದ ಕತ್ತಲು (2)
9.ಆ ದಿನದಲ್ಲೇ ಬಂದಿರುವ ಮಂತ್ರಿ (3)
11.ತಿಲಕದ ಹತ್ತಿರವಿರಿಸಿದ ಎಳ್ಳು (2)
13.ಹೊಸದಾಗಿ ಕಾಣುತ್ತಿರುವ ಧಾನ್ಯ! (3)
14.ಕೈಯಲ್ಲಿರಿಸಿಕೊಂಡಿರುವ ಖಡ್ಗ (4)
16.ಕಲಹ ಮಾಡುವ ಸ್ವಭಾವದವಳು (5)
17.ಶಿವನಿಗೆ ಸಲ್ಲಿಸಿದ ಮುಡಿಪು (3)

ಮೇಲಿಂದ ಕೆಳಕ್ಕೆ

1.ಹಿಂಸೆ ಮಾಡಬಾರದೆಂಬ ವ್ರತ (5)
2.ಸಾಮೂಹಿಕವಾಗಿ ಮಾಡಿದ ಕಸರತ್ತು (2)
3.ಅದೇ ತಾನೆ ಮದುವೆಯಾದ ಜೋಡಿ (5)
5.ಪಾವತಿ ಪತ್ರ ಇಲ್ಲಿದೆ (3)
8.ಈತ ಲಗ್ನವಾಗುತ್ತಿರುವವ (5)
10.ಇದು ಪಾಪಿಗಳ ಲೋಕ (3)
12.ರಾಮನ ಮಗನಿದ್ದರೇ ಈ ಹುರುಪು! (5)
15.ತುಂಟಿಯ ಅಧರ! (2)



5186ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆತುರ 6.ತಾರಾತಿಗಡಿ 7.ನಿರಾಳ 9.ಕಸಬುಗಾರ 13.ಹಗರು 15.ನಾಮಕರಣ 16.ರಸನ

ಮೇಲಿಂದ ಕೆಳಕ್ಕೆ: 1.ಆಭರಣ 2.ರದನಿ 3.ಪಾತಾಳ 4.ಕಡಿತ 6.ತಿರಸ್ಕಾರ 8.ರಾಯಸ 9.ಕರ್ನಾಟಕ 10.ಗಾಣಿಗ 11.ಮನೆತನ 12.ಋಣಾದಿ 13.ಹಣತೆ 14.ರುಧಿರ

ಸುಡೊಕು 5573

	7	6		4				9
5			6		9			2
2				7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5572 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಸಂಕ್ಷಿಪ್ತ ಸುದ್ದಿ

ಇ.ವಿ. ತಯಾರಿಕೆ: ಜೆಎಸ್‌ಡಬ್ಲ್ಯು ಸಮೂಹ ಚಿಂತನೆ

ನವದೆಹಲಿ (ಪಿಟಿಐ): ಸಜ್ಜನ್ ಜಿಂದಾಲ್ ಒಡೆತನದ ಜೆಎಸ್‌ಡಬ್ಲ್ಯು ಸಮೂಹವು ನಾಲ್ಕು ಚಕ್ರಗಳ ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ.) ತಯಾರಿಸುವ ಕುರಿತು ಪರಿಶೀಲನೆ ನಡೆಸುತ್ತಿದೆ ಎಂದು ಸಮೂಹದ ಮುಖ್ಯ ಹಣಕಾಸು ಅಧಿಕಾರಿ ಶೇಷಗಿರಿ ರಾವ್ ಹೇಳಿದ್ದಾರೆ.

ವಿದ್ಯುತ್ ಚಾಲಿತ ವಾಹನಗಳನ್ನು ತಯಾರಿಸುವ ಕುರಿತು ಕಂಪನಿಯು ಈ ಹಿಂದೆ ಪರಿಶೀಲನೆ ನಡೆಸಿತ್ತಾದರೂ ಈಗಿನ ಪರಿಸ್ಥಿತಿಯು ಇ.ವಿ. ತಯಾರಿಕೆಗೆ ಹೆಚ್ಚು ಆಕರ್ಷಕವಾಗಿ ಕಾಣುತ್ತಿದೆ ಎಂದು ತಿಳಿಸಿದ್ದಾರೆ.

ವಿಮಾ ಉತ್ಪನ್ನ: ಬಲವಂತದ ಮಾರಾಟ ಬೇಡ

ನವದೆಹಲಿ (ಪಿಟಿಐ): ವಿಮಾ ಉತ್ಪನ್ನಗಳನ್ನು ಗ್ರಾಹಕರಿಗೆ ಬಲವಂತವಾಗಿ ಮಾರಾಟ ಮಾಡದಂತೆ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ವಿಮಾ ಉತ್ಪನ್ನಗಳನ್ನು ಗ್ರಾಹಕರಿಗೆ ಬಲವಂತವಾಗಿ ಮಾರಾಟ ಮಾಡಲಾಗುತ್ತಿದೆ ಎಂದು ದೂರುಗಳು ಬರುವುದು ಹೆಚ್ಚಾಗುತ್ತಿದೆ. ಹೀಗಾಗಿ ಬಲವಂತವಾಗಿ ವಿಮಾ ಉತ್ಪನ್ನಗಳನ್ನು ಮಾರಾಟ ಮಾಡಬಾರದು ಎಂದು ಹಣಕಾಸು ಸೇವೆಗಳ ಇಲಾಖೆಯು ಸರ್ಕಾರಿ ಸ್ವಾಮ್ಯದ ಎಲ್ಲ ಬ್ಯಾಂಕ್‌ಗಳ ಮುಖ್ಯಸ್ಥರಿಗೆ ಬರೆದಿರುವ ಪತ್ರದಲ್ಲಿ ಸೂಚನೆ ನೀಡಿದೆ. ಎರಡು ಮತ್ತು ಮೂರನೇ ಶ್ರೇಣಿಯ ನಗರಗಳಲ್ಲಿ 75 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಜೀವ ವಿಮೆ ಯೋಜನೆಗಳನ್ನು ಮಾರಾಟ ಮಾಡಿರುವ ಉದಾಹರಣೆಗಳೂ ಇವೆ ಎಂದು ಇಲಾಖೆಯು ಪತ್ರದಲ್ಲಿ ತಿಳಿಸಿದೆ.

ಕಾರ್ಪೊರೇಟ್ ತೆರಿಗೆ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): ಕಾರ್ಪೊರೇಟ್ ತೆರಿಗೆ ಸಂಗ್ರಹವು 2021–22ರಲ್ಲಿ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇಕಡ 3ರಷ್ಟನ್ನು ಮೀರಿದೆ. ಎರಡು ವರ್ಷಗಳ ನಂತರ ಈ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಆಗಿದೆ.

2021–22ರಲ್ಲಿ ಕಾರ್ಪೊರೇಟ್ ತೆರಿಗೆ ಸಂಗ್ರಹವು ₹ 7.12 ಲಕ್ಷ ಕೋಟಿ ಆಗಿದೆ. ಸದ್ಯದ ಮಾರುಕಟ್ಟೆ ದರದಲ್ಲಿ ಸರಾಸರಿ ಜಿಡಿಪಿಯು ₹ 236.64 ಲಕ್ಷ ಕೋಟಿ ಇದೆ. ಇದರಿಂದಾಗಿ ಜಿಡಿಪಿಗೆ ಕಾರ್ಪೊರೇಟ್ ತೆರಿಗೆ ಪ್ರಮಾಣ ಶೇ 3.01ರಷ್ಟು ಆಗಿದೆ. 2018–19ರಲ್ಲಿ ಕಾರ್ಪೊರೇಟ್ ತೆರಿಗೆ ಸಂಗ್ರಹವು ಜಿಡಿಪಿಯ ಶೇ 3.51ರಷ್ಟು (₹ 6.63 ಲಕ್ಷ ಕೋಟಿ) ಇತ್ತು.

ಮಕ್ಕಳಿಗೆ ಹಣಕಾಸಿನ ಪಾಠ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮಕ್ಕಳಿಗೆ ನಾವು ಹಣಕಾಸು ನಿರ್ವಹಣೆಯ ಪಾಠವನ್ನು ಎಷ್ಟು ಬೇಗ ಕಲಿಸುತ್ತೇವೆಯೋ ಅಷ್ಟು ಉತ್ತಮ ರೀತಿಯಲ್ಲಿ ಅವರು ಹಣದ ಮೌಲ್ಯ ಅರ್ಥ ಮಾಡಿಕೊಳ್ಳುತ್ತಾರೆ. ವಯಸ್ಸಿಗೆ ಅನುಗುಣವಾಗಿ ಮಕ್ಕಳಿಗೆ ಹಣಕಾಸು ನಿರ್ವಹಣೆಯನ್ನು ತಿಳಿಸಿಕೊಡಬೇಕಾಗುತ್ತದೆ. ಹಾಗಾದರೆ ಯಾವ ವಯಸ್ಸಿಗೆ ಏನು ಹೇಳಬೇಕು? ಇಲ್ಲಿದೆ ಒಂದಿಷ್ಟು ಮಾಹಿತಿ.

● **5ರಿಂದ 8 ವರ್ಷದ ಮಕ್ಕಳಿಗೆ ಹಣಕಾಸು ಪಾಠ:** ಐದರಿಂದ ಎಂಟು ವರ್ಷದ ನಡುವಿನ ಮಕ್ಕಳಿಗೆ ವಿವಿಧ ನೋಟು, ನಾಣ್ಯಗಳನ್ನು ಗುರುತಿಸುವುದನ್ನು ಕಲಿಸುವ ಜೊತೆಗೆ ಎಣಿಕೆ ಮಾಡುವುದನ್ನು ಹೇಳಿಕೊಡಿ. ಮಕ್ಕಳು ಒಳ್ಳೆಯ ಕೆಲಸಗಳನ್ನು ಮಾಡಿದಾಗ, ಉತ್ತಮ ಅಂಕ ಗಳಿಸಿದಾಗ, ಅಲ್ಪ ಮೊತ್ತದ ಹಣ ನೀಡುವ ಮೂಲಕ ಅವರ ಒಳ್ಳೆಯ ಕಾರ್ಯಗಳಿಗೆ ಪ್ರೋತ್ಸಾಹ ನೀಡಿ.

ಅಂಗಡಿಗೆ ಕರೆದುಕೊಂಡು ಹೋಗಿ, ಒಂದಿಷ್ಟು ಹಣ ನೀಡಿ ವಸ್ತುಗಳನ್ನು ಖರೀದಿಸಲು ತಿಳಿಸಿ. ಇದರಿಂದ ಮಕ್ಕಳಿಗೆ ಯಾವುದನ್ನು ಖರೀದಿಸಬೇಕು ಮತ್ತು ಯಾವುದನ್ನು ಖರೀದಿಸಬಾರದು ಎನ್ನುವ ಗ್ರಹಿಕೆ ಬರುತ್ತದೆ. ಮಕ್ಕಳಿಗೆ ಒಂದು ಪಿಗ್ಗಿ ಬ್ಯಾಂಕ್ (ಹುಂಡಿ) ಕೊಡಿಸಿ ಅದರಲ್ಲಿ ಹಣ ಸಂಗ್ರಹಿಸಲು ಪ್ರೋತ್ಸಾಹ ಕೊಡಿ. ಹೀಗೆ ಮಾಡುವುದರಿಂದ ಉಳಿತಾಯದ ಮೂಲಕ ಹೇಗೆ ದುಡ್ಡು ನಮ್ಮ ಬಳಿ ಇರುವಂತೆ ನೋಡಿಕೊಳ್ಳಬಹುದು ಎಂದು ಅಂದಾಜು ಸಿಗುತ್ತದೆ. ಮಕ್ಕಳು ಸಿಕ್ಕಿದ್ದನ್ನೆಲ್ಲ ಖರೀದಿಸಬೇಕು ಎಂದು ಹಠ ಹಿಡಿದಾಗ ನಿಮ್ಮ ಬಳಿ ಇಷ್ಟೇ ಹಣ ಇದೆ ಎಂದು ಹೇಳಿ ಅಗತ್ಯ ಎನ್ನಿಸುವ ವಸ್ತುಗಳನ್ನು ಮಾತ್ರ ಕೊಡಿಸಿ. ಇದರಿಂದ ಮಕ್ಕಳು ಕೊಳ್ಳುಬಾಕತನದಿಂದ ದೂರ ಉಳಿಯುತ್ತಾರೆ.

● **9ರಿಂದ 12 ವರ್ಷದ ಮಕ್ಕಳಿಗೆ:** ಮಕ್ಕಳು 9ನೇ ವಯಸ್ಸಿಗೆ ಬರುವಷ್ಟರಲ್ಲಿ ಒಂದಿಷ್ಟು ಪ್ರಾಪಂಚಿಕ ಜ್ಞಾನ ಬಂದಿರುತ್ತದೆ. ಅವರನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ಅದು ಹೇಗೆ ಕಾರ್ಯನಿರ್ವಹಣೆ ಮಾಡುತ್ತದೆ ಎನ್ನುವುದನ್ನು ವಿವರಿಸಿ. ಜೊತೆಗೆ ಒಂದು ಮೈನರ್ ಅಕೌಂಟ್ ಆರಂಭಿಸಿ. ಬ್ಯಾಂಕ್ ಪಾಸ್ ಬುಕ್, ಖಾತೆಯ ಜಮಾ–ಖರ್ಚು ವಿವರ, ಚೆಕ್ ಬುಕ್, ಡಿಮ್ಯಾಂಡ್ ಡ್ರಾಫ್ಟ್... ಹೀಗೆ ಬ್ಯಾಂಕ್‌ನ ವಿವಿಧ ವಹಿವಾಟುಗಳ ಬಗ್ಗೆಯೂ ತಿಳಿವಳಿಕೆ ಕೊಡಿ. ಅವರಿಗೆ ಸದ್ಯದಲ್ಲಿ ಖರೀದಿ ಮಾಡಬೇಕಾಗಿರುವ ವಸ್ತುಗಳ ಪಟ್ಟಿ ಮಾಡಲು ಹೇಳಿ. ಆ ಖರೀದಿ ಗುರಿಗಳಿಗೆ ಅನುಗುಣವಾಗಿ ಉಳಿತಾಯ ಮಾಡುವುದು ಹೇಗೆ ಎನ್ನುವುದನ್ನು ಕಲಿಸಿಕೊಡಿ. ಮಕ್ಕಳಿಗೆ ಉಳಿತಾಯದ ಪಾಠ ಹೇಳಿಕೊಡುವ ಜೊತೆಗೆ ಸಮಾಜಕ್ಕೆ ಕೈಲಾದ ಮಟ್ಟಿಗೆ ಧನ ಸಹಾಯ ಮಾಡಬೇಕು ಎನ್ನುವುದನ್ನು ತಿಳಿಸಿಕೊಡಿ. ಯಾವ ಒಳ್ಳೆಯ ಕೆಲಸಕ್ಕೆ ಮಕ್ಕಳು ಹಣ ಸಹಾಯ ಮಾಡಲು ಬಯಸುತ್ತಾರೋ ಅದರಂತೆ ನಡೆದುಕೊಳ್ಳಲು ಪ್ರೇರೇಪಿಸಿ.

● **13ರಿಂದ 18 ವರ್ಷ:** ಮಕ್ಕಳ ಹೆಸರಿನಲ್ಲಿ ತೆರೆದಿರುವ ಮೈನರ್ ಬ್ಯಾಂಕ್ ಖಾತೆಯನ್ನು ಅವರಿಗೆ ನಿರ್ವಹಣೆ ಮಾಡಲು ಬಿಡಿ. ಉಳಿತಾಯ ಖಾತೆ, ಚಾಲ್ತಿ ಖಾತೆ, ನಿಶ್ಚಿತ ಠೇವಣಿ, ರೆಕರಿಂಗ್ ಡೆಪಾಸಿಟ್ ಮುಂತಾದ ಸಾಂಪ್ರದಾಯಿಕ ಹೂಡಿಕೆ ವಿಧಾನಗಳನ್ನು ಪರಿಚಯ ಮಾಡಿಕೊಡಿ. ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಹೇಗೆ ನಿರ್ವಹಿಸಬೇಕು ತಿಳಿಸಿಕೊಡಿ.

ಅವರ ಶಿಕ್ಷಣ ವೆಚ್ಚ, ದೈನಂದಿನ ಖರ್ಚು ವೆಚ್ಚಗಳನ್ನು ಖಾತೆ ಮೂಲಕವೇ ನಿರ್ವಹಿಸಲು ಸೂಚಿಸಿ. ನಾವು ಹೆಚ್ಚು ಕೌಶಲ ಹೊಂದಿದ್ದರೆ ಹೇಗೆ ಹೆಚ್ಚು ಹಣ ಗಳಿಸಬಹುದು ಎನ್ನುವುದರ ಅರಿವು ಮೂಡಿಸಿ. ವಿವಿಧ ಕೌಶಲಗಳಿಂದ ಒಬ್ಬ ವ್ಯಕ್ತಿ ಹೇಗೆ ಹಲವು ಆದಾಯ ಮೂಲಗಳನ್ನು ಕಂಡುಕೊಳ್ಳಬಹುದು ಎಂಬುದನ್ನು ವಿವರಿಸಿ.

● **18 ವರ್ಷ ತುಂಬಿದಾಗ ಈ ಕೆಲಸ ಮಾಡಿ:** ಮಕ್ಕಳಿಗೆ 18 ವರ್ಷ ತುಂಬಿದ ತಕ್ಷಣ ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಆಧಾರ್ ಮುಂತಾದ ಪ್ರಮುಖ ಗುರುತಿನ ದಾಖಲೆಗಳನ್ನು ಮಾಡಿಸಿಕೊಡಿ. ಕೆಲವು ದಾಖಲೆಗಳನ್ನು ಮಕ್ಕಳು ಚಿಕ್ಕವರಿದ್ದಾಗಲೇ ಪಡೆದಿದ್ದರೆ ಅವುಗಳಲ್ಲಿ ಇರುವ ಮಾಹಿತಿಯನ್ನು ಪರಿಷ್ಕರಿಸಿ. ಕೆವೈಸಿ ದಾಖಲೆಗಳನ್ನು ನೀಡುವ ಮೂಲಕ ಮಕ್ಕಳ ಮೈನರ್ ಉಳಿತಾಯ ಖಾತೆಯನ್ನು ರೆಗ್ಯುಲರ್ ಖಾತೆಯನ್ನಾಗಿ ಪರಿವರ್ತಿಸಿ.

ಪ್ಯಾನ್ ಸಂಖ್ಯೆಗಾಗಿ ಅರ್ಜಿ ಸಲ್ಲಿಸಿ ಅದನ್ನು ಪಡೆದುಕೊಳ್ಳಿ. ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಸಕ್ರಿಯಗೊಳಿಸಿಕೊಡುವುದರ ಜೊತೆಗೆ ಸಣ್ಣ ಮೊತ್ತದಲ್ಲಿ ಷೇರು ಹೂಡಿಕೆ ಆರಂಭಿಸಲು ನೆರವಾಗುವಂತೆ ಒಂದು ಡಿ-ಮ್ಯಾಟ್ ಖಾತೆ ಮಾಡಿಸಿ. ಅದು ಬೇಡ ಎಂದಾದಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಗೆ ನೆರವಾಗುವ ಆ್ಯಪ್‌ಗಳ ಬಗ್ಗೆ ತಿಳಿಸಿಕೊಟ್ಟು ಅದರಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡಲು ಪ್ರೇರೇಪಿಸಿ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಏರಿಕೆ ಹಾದಿಗೆ ಮರಳಿದ ಸೂಚ್ಯಂಕಗಳು



ಸತತ ಮೂರು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಈ ವಾರ ಗಳಿಕೆಯ ಲಯಕ್ಕೆ ಮರಳಿವೆ. ಡಿಸೆಂಬರ್ 30ರಂದು ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. 60,840 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್, ಶೇಕಡ 1.66ರಷ್ಟು ಗಳಿಕೆ ಕಂಡಿದೆ. 18,105 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.67ರಷ್ಟು ಜಿಗಿದಿದೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 11ರಷ್ಟು, ಲೋಹ ಸೂಚ್ಯಂಕ ಶೇ 8ರಷ್ಟು, ರಿಯಲ್ ಎಸ್ಟೇಟ್ ಮತ್ತು ಅನಿಲ ಹಾಗೂ ತೈಲ ಸೂಚ್ಯಂಕ ತಲಾ ಶೇ 5ರಷ್ಟು ಗಳಿಸಿಕೊಂಡಿವೆ. ಆದರೆ ನಿಫ್ಟಿ ಹೆಲ್ತ್ ಕೇರ್ ಸೂಚ್ಯಂಕ ಶೇ 2ರಷ್ಟು ತಗ್ಗಿದೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ವಲಯದಲ್ಲಿ ಅದಾನಿ ವಿಲ್ಮರ್, ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್‌ಮಿಷನ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಪೇಟಿಎಂ, ಜೊಮಾಟೊ, ಟಾಟಾ ಸ್ಟೀಲ್ ಮತ್ತು ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 10ರಿಂದ ಶೇ 23ರಷ್ಟು ಗಳಿಸಿಕೊಂಡಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 3.6ರಷ್ಟು ಜಿಗಿದಿದೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ, ರಾಜೇಶ್ ಎಕ್ಸ್‌ಪೋರ್ಟ್ಸ್, ಕೆನರಾ ಬ್ಯಾಂಕ್, ಅದಾನಿ ಪವರ್, ಬ್ಯಾಂಕ್ ಆಫ್ ಇಂಡಿಯಾ, ಜೆಎಸ್‌ಡಬ್ಲ್ಯು ಎನರ್ಜಿ, ಫೆಡರಲ್ ಬ್ಯಾಂಕ್, ಐಡಿಬಿಐ ಬ್ಯಾಂಕ್ ಮತ್ತು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಗಳಿಸಿಕೊಂಡಿವೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 6ರಷ್ಟು ಜಿಗಿದಿದೆ. ಜೆಬಿಎಂ ಓವರ್‌ಸೀಸ್, ಲ್ಯಾನ್ಸರ್ ಕಂಟೇನರ್ಸ್ ಲೈನ್ಸ್, ನ್ಯಾಷನಲ್ ಫರ್ಟಿಲೈಸರ್ಸ್, ಆಶಾಪುರ ಮೈನ್ ಕೆಮ್, ವಿಜಯಾ ಟೆಲ್ಸ್, ರಾಷ್ಟ್ರೀಯ ಕೆಮಿಕಲ್ಸ್ ಆ್ಯಂಡ್ ಫರ್ಟಿಲೈಸರ್ಸ್, ಜಿಐಸಿ ಹೌಸಿಂಗ್ ಫೈನಾನ್ಸ್ ಮತ್ತು ಪೂನಾವಾಲಾ ಫಿನ್ ಕಾರ್ಪ್ ಶೇ 25ರಿಂದ ಶೇ 41ರಷ್ಟು ಬೆಲೆ ಹೆಚ್ಚಿಸಿಕೊಂಡಿವೆ. ಮೋಹಿನ್ ಲ್ಯಾಬೊರೇಟರೀಸ್, ಸೆಕ್ಯುರ್ ಲೈಫ್ ಸೈನ್ಸ್, ಜಿಎಎಲ್ ಕೆಮಿಕಲ್ ಆ್ಯಂಡ್ ಫಾರ್ಮಾಸ್ಯೂಟಿಕಲ್ಸ್, ಸಿನ್ ಕಾಮ್ ಫಾರ್ಮುಲೇಷನ್ಸ್, ನ್ಯೂರೇಕಾ, ಕೆಪಿಸಿ ಗ್ಲೋಬಲ್ ಶೇ 6ರಿಂದ ಶೇ 11ರಷ್ಟು ಕುಸಿದಿವೆ.

ಮುನ್ನೋಟ: ಕಳೆದ ವಾರದ ಅವಧಿಯಲ್ಲಿ ಷೇರು ಮಾರುಕಟ್ಟೆ ಸಕಾರಾತ್ಮಕವಾಗಿ ಕಂಡುಬಂದಿದ್ದರೂ ಒಟ್ಟಾರೆ ಡಿಸೆಂಬರ್ ತಿಂಗಳಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ತಲಾ ಶೇ 3.5ರಷ್ಟು ಕುಸಿದಿವೆ. ಸದ್ಯದ ಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಜಿಎಸ್‌ಟಿ ಸಂಗ್ರಹ ಶೇ 15ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾಗುವ ವರಮಾನವು ಡಿಸೆಂಬರ್ ತಿಂಗಳಲ್ಲಿ ಶೇಕಡ 15ರಷ್ಟು ಹೆಚ್ಚಾಗಿದ್ದು, ₹ 1.49 ಲಕ್ಷ ಕೋಟಿಗೆ ತಲುಪಿದೆ. ತಯಾರಿಕಾ ಚಟುವಟಿಕೆಗಳು ಹೆಚ್ಚಾಗಿರುವುದನ್ನು, ಬೇಡಿಕೆ ಸುಧಾರಿಸಿರುವುದನ್ನು ಮತ್ತು ತೆರಿಗೆ ಪಾವತಿಯಲ್ಲಿ ಸುಧಾರಣೆ ಆಗಿರುವುದನ್ನು ಇದು ತೋರಿಸುತ್ತಿದೆ.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ವರಮಾನ ಸಂಗ್ರಹವು ಈಗ ಸತತ ಹತ್ತು ತಿಂಗಳುಗಳಿಂದ ₹ 1.40 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇದೆ. ನವೆಂಬರ್‌ನಲ್ಲಿ ₹ 1.46 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.

ಡಿಸೆಂಬರ್‌ನಲ್ಲಿ ಒಟ್ಟು ₹ 1,49,507 ಕೋಟಿ ವರಮಾನ ಸಂಗ್ರಹವಾಗಿದೆ. ಇದರಲ್ಲಿ ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) ಪಾಲು ₹ 26,711 ಕೋಟಿ, ರಾಜ್ಯ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಪಾಲು ₹ 33,357 ಕೋಟಿ, ಏಕೀಕೃತ ಜಿಎಸ್‌ಟಿ (ಐಜಿಎಸ್‌ಟಿ) ಪಾಲು ₹ 78,434 ಕೋಟಿ, ಸೆಸ್ ಪಾಲು ₹ 11,005 ಕೋಟಿ' ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

2021ರ ಡಿಸೆಂಬರ್‌ನಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕೆ ಹೋಲಿಸಿದರೆ 2022ರ ಡಿಸೆಂಬರ್ ತಿಂಗಳ ವರಮಾನ ಸಂಗ್ರಹವು ಶೇ 15ರಷ್ಟು ಹೆಚ್ಚು.

ತೆರಿಗೆ ವಂಚಿಸುತ್ತಿದ್ದವರನ್ನು ಹಾಗೂ ತೆರಿಗೆ ಕಾನೂನುಗಳನ್ನು ಸರಿಯಾಗಿ ಪಾಲಿಸದವರನ್ನು ಗುರುತಿಸಲು ತೆರಿಗೆ ಅಧಿಕಾರಿಗಳಿಗೆ ಸಾಧ್ಯವಾಗಿದೆ ಎಂದು ಎನ್‌ಎ ಶಾ ಅಸೋಸಿಯೇಟ್ಸ್‌ನ ಪಾಲುದಾರ ಪರಾಗ್ ಮೆಹ್ತಾ ಹೇಳಿದ್ದಾರೆ.

'ತೆರಿಗೆ ಸಂಗ್ರಹವು ಕಳೆದ ಮೂರರಿಂದ ನಾಲ್ಕು ತಿಂಗಳುಗಳಲ್ಲಿ ಹೆಚ್ಚಿದೆ. ಉದ್ದಿಮೆಗಳು ತಮ್ಮ ವಹಿವಾಟು ಗುರಿಯನ್ನು ತಲುಪಲು ಯತ್ನಿಸುತ್ತಿರುವುದು ಕೂಡ ಇದಕ್ಕೆ ಒಂದು ಕಾರಣ' ಎಂದು ಅವರು ಹೇಳಿದ್ದಾರೆ.

ಹಬ್ಬಗಳ ಋತು ಮುಗಿದಿದ್ದರೂ, ಜಿಎಸ್‌ಟಿ ಅಡಿ ಸರಿಸುಮಾರು ₹ 1.5 ಲಕ್ಷ ಕೋಟಿ ವರಮಾನ ಸಂಗ್ರಹವು ಸಹಜವಾಗುತ್ತಿದೆ ಎಂದು ಕೆಪಿಎಂಜಿ ಸಂಸ್ಥೆಯ ಪರೋಕ್ಷ ತೆರಿಗೆ ಪಾಲುದಾರ ಅಭಿಷೇಕ್ ಜೈನ್ ತಿಳಿಸಿದ್ದಾರೆ.

ಜಿಎಸ್‌ಟಿ ವರಮಾನ ಸಂಗ್ರಹ (₹ ಲಕ್ಷ ಕೋಟಿಯಲ್ಲಿ)	
ಜುಲೈ	1.49
ಆಗಸ್ಟ್	1.44
ಸೆಪ್ಟೆಂಬರ್	1.48
ಅಕ್ಟೋಬರ್	1.52
ನವೆಂಬರ್	1.46
ಡಿಸೆಂಬರ್	1.49



ಪ್ರಯಾಣಿಕ ವಾಹನ ಮಾರಾಟದಲ್ಲಿ ದಾಖಲೆ

ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಯಾಣಿಕ ವಾಹನ ಮಾರಾಟವು 2022ರಲ್ಲಿ ದಾಖಲೆಯ 37.93 ಲಕ್ಷಕ್ಕೆ ತಲುಪಿದೆ. 2021ರಲ್ಲಿ 30.82 ಲಕ್ಷ ವಾಹನಗಳ ಮಾರಾಟ ಆಗಿತ್ತು. ಇದಕ್ಕೆ ಹೋಲಿಸಿದರೆ 2022ರಲ್ಲಿ ಮಾರಾಟವು ಶೇಕಡ 23ರಷ್ಟು ಹೆಚ್ಚಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

2018ರಲ್ಲಿ ಪ್ರಯಾಣಿಕ ವಾಹನಗಳ ಮಾರಾಟವು ದಾಖಲೆಯ 33.3 ಲಕ್ಷಕ್ಕೆ ತಲುಪಿತ್ತು ಎಂದು ತಿಳಿಸಿದ್ದಾರೆ.

ಎಸ್‌ಯುವಿಗೆ ಬೇಡಿಕೆ: ಎಸ್‌ಯುವಿಗಳಿಗೆ ಬೇಡಿಕೆ ಹೆಚ್ಚಾಗಲಿದೆ. ಪ್ರಯಾಣಿಕ ವಾಹನಗಳಲ್ಲಿ ಎಸ್‌ಯುವಿ ಪಾಲು ಸದ್ಯ ಶೇ 42.3ರಷ್ಟು ಇದೆ. ಬೆಲೆಯ ದೃಷ್ಟಿಯಿಂದ ನೋಡುವುದಾದರೆ ಮಾರಾಟ ಆಗಿರುವ ಶೇ 40ರಷ್ಟು ವಾಹನಗಳು ₹ 10 ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಬೆಲೆಯವು ಎಂದು ಅವರು ಹೇಳಿದ್ದಾರೆ.

ಮಾರುತಿ ಸುಜುಕಿ ಇಂಡಿಯಾ 2022ನೇ ಕ್ಯಾಲೆಂಡರ್ ವರ್ಷದಲ್ಲಿ 15.76 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. 2021ರಲ್ಲಿ 13.64 ಲಕ್ಷ ವಾಹನಗಳನ್ನು ಮಾರಾಟ ಮಾಡಿತ್ತು. ಇದಕ್ಕೆ ಹೋಲಿಸಿದರೆ ಶೇ 16ರಷ್ಟು ಹೆಚ್ಚಾಗಿದೆ.

ಹುಂಡೈ ಮೋಟರ್‌ನ ಮಾರಾಟ 5.05 ಲಕ್ಷದಿಂದ 5.52 ಲಕ್ಷಕ್ಕೆ (ಶೇ 9.4) ಏರಿಕೆ ಆಗಿದೆ. ಈವರೆಗಿನ ಅತಿ ಹೆಚ್ಚಿನ ಮಾರಾಟ ಇದಾಗಿದೆ ಎಂದು ಕಂಪನಿ ತಿಳಿಸಿದೆ. ಟಾಟಾ ಮೋಟರ್ಸ್ 5.26 ಲಕ್ಷ ವಾಹನ ಮಾರಾಟ ಮಾಡಿದೆ. ಟೊಯೋಟ ಕಿರ್ಲೋಸ್ಕರ್ ಮಾರಾಟ 1.30 ಲಕ್ಷದಿಂದ 1.60 ಲಕ್ಷಕ್ಕೆ ಏರಿಕೆ ಕಂಡಿದೆ. ಕಳೆದ 10 ವರ್ಷಗಳ ಅತಿ ಹೆಚ್ಚಿನ ಮಾರಾಟ ಇದಾಗಿದೆ ಎಂದು ಕಂಪನಿ ತಿಳಿಸಿದೆ.

ಮಿಲಿಟರಿ ಕೈಗಾರಿಕಾ ಸಂಕೀರ್ಣದ ಸೌಲಭ್ಯಗಳ ನಾಶ

ಉಕ್ರೇನ್ ಡ್ರೋನ್ ತಯಾರಿಕೆ ಘಟಕ ಧ್ವಂಸ

ಮಾಸ್ಕೊ/ ಕೀವ್ (ಎಎಫ್‌ಪಿ): ಹೊಸ ವರ್ಷದಲ್ಲಿ ಉಕ್ರೇನ್‌ನಲ್ಲಿರುವ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಪೂರೈಸುವ ಡ್ರೋನ್ ತಯಾರಿಕಾ ಘಟಕಗಳನ್ನು ಗುರಿಯಾಗಿಸಿ ದಾಳಿ ಮಾಡಿದ್ದೇವೆ ಎಂದು ರಷ್ಯಾ ಭಾನುವಾರ ಹೇಳಿದೆ. ಉಕ್ರೇನ್ ಮೇಲಿನ ಯುದ್ಧ 11ನೇ ತಿಂಗಳಿಗೆ ಕಾಲಿಟ್ಟಾಗ ಪುಟಿನ್ ಪಡೆಗಳು ದಾಳಿ ತೀವ್ರಗೊಳಿಸಿದವು.

ರಷ್ಯಾದ ಮೇಲೆ ಉಕ್ರೇನ್ ನಡೆಸಲಿದ್ದ ಭಯೋತ್ಪಾದನಾ ದಾಳಿಯನ್ನು ತಡೆದಿದ್ದೇವೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿದೆ.

ಹೊಸ ವರ್ಷದ ಮುನ್ನಾ ದಿನ ಉಕ್ರೇನ್ ರಾಜಧಾನಿ ಕೀವ್ ಮತ್ತು ಇನ್ನಿತರ ಪ್ರಮುಖ ನಗರಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿಗಳು ಮತ್ತು ಇರಾನಿ ನಿರ್ಮಿತ ಶಾಹಿದ್ ಡ್ರೋನ್‌ಗಳಿಂದ ರಷ್ಯಾ ಪಡೆಗಳು ಭಾರಿ ದಾಳಿ ನಡೆಸಿವೆ.

ಡ್ರೋನ್‌ಗಳ ತಯಾರಿಕೆಯಲ್ಲಿ ತೊಡಗಿದ್ದ ಉಕ್ರೇನ್ ಮಿಲಿಟರಿ ಕೈಗಾರಿಕಾ ಸಂಕೀರ್ಣದ ಸೌಲಭ್ಯಗಳನ್ನು ದಾಳಿಯಲ್ಲಿ ಧ್ವಂಸಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ರಷ್ಯಾ ವಿರುದ್ಧ ಭಯೋತ್ಪಾದಕ ದಾಳಿ ನಡೆಸಲು ಉಕ್ರೇನ್ ಆಡಳಿತ ಹೊಂದಿದ್ದ ಯೋಜನೆಗಳನ್ನು ವಿಫಲಗೊಳಿಸಲಾಗಿದೆ ಎಂದು ಹೇಳಿದೆ.



ರಷ್ಯಾದ ಕ್ಷಿಪಣಿಯ ದಾಳಿಯಿಂದ ಉಂಟಾಗಿರುವ ಕುಳಿ ಬಳಿ ಯೋಧ ಕ್ಷಿಪಣಿಯ ಅವಶೇಷಗಳ ತುಣುಕು ಸಂಗ್ರಹಿಸಿದರು – ಎಎಫ್‌ಪಿ ಚಿತ್ರ

45 ಡ್ರೋನ್ ಹೊಡೆದುರುಳಿಸಿದ ಉಕ್ರೇನ್: ಪಾಶ್ಚಿಮಾತ್ಯ ದೇಶಗಳತ್ತ ವಾಲಿರುವ ಉಕ್ರೇನ್ ಮೇಲೆ ಹೊಸ ವರ್ಷಾಚರಣೆ ವೇಳೆ ಶನಿವಾರ ರಾತ್ರಿಯಿಡೀ ರಷ್ಯಾ ಡ್ರೋನ್ ದಾಳಿ ನಡೆಸಿದ್ದು, ರಷ್ಯಾದ 45 ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತು ಎಂದು ಉಕ್ರೇನ್ ವಾಯುಪಡೆ ಭಾನುವಾರ ತಿಳಿಸಿದೆ.

2022ರ ಕೊನೆಯಲ್ಲಿ 13 ಡ್ರೋನ್‌ಗಳು ಮತ್ತು ಹೊಸ ವರ್ಷಾರಂಭದ ಸಮಯದಲ್ಲಿ 32 ಶಾಹಿದ್ ಡ್ರೋನ್‌ಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಲಾಯಿತು.

ರಷ್ಯಾ ಪಡೆಯ ಕೆಲವು ಡ್ರೋನ್‌ಗಳು ಉಕ್ರೇನ್ ಮೇಲಿನ ಗುರಿಗಳನ್ನು ಯಶಸ್ವಿಯಾಗಿ ಭೇದಿಸಿರುವ ಬಗ್ಗೆ ಉಕ್ರೇನ್ ಸೇನೆ ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ.

ಕೀವ್ ಪೊಲೀಸ್ ಮುಖ್ಯಸ್ಥ ಆಂಡ್ರಿ ನೆಬಿಟೋವ್ ಅವರು ಫೇಸ್‌ಬುಕ್ ಪುಟದಲ್ಲಿ ಹೊಡೆದುರುಳಿಸಿದ ಡ್ರೋನ್ ಭಗ್ನಾವಶೇಷದ ಚಿತ್ರ ಹಂಚಿಕೊಂಡಿದ್ದಾರೆ. ಭಗ್ನಾವಶೇಷದ ಒಂದು ತುಣುಕಿನಲ್ಲಿ ರಷ್ಯನ್ ಭಾಷೆಯಲ್ಲಿ ಬರೆದಿರುವ 'ಹ್ಯಾಪಿ ನ್ಯೂ ಇಯರ್' ವಾಕ್ಯ ಇರುವುದು ಕಂಡುಬಂದಿದೆ.

ನಿಯಮ ಉಲ್ಲಂಘನೆ ವಿಮಾನ ಸಂಸ್ಥೆಗಳಿಗೆ ದಂಡ

ನವದೆಹಲಿ: ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) 2022ರಲ್ಲಿ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ ವಿವಿಧ ವಿಮಾನಯಾನ ಸಂಸ್ಥೆಗಳು ಮತ್ತು ಇತರ ಸಂಬಂಧಪಟ್ಟವರ ವಿರುದ್ಧ ಒಟ್ಟು 305 ಜಾರಿ ಕ್ರಮಗಳನ್ನು ತೆಗೆದುಕೊಂಡಿದ್ದು, 39 ಪ್ರಕರಣಗಳಲ್ಲಿ ₹1.97 ಕೋಟಿ ದಂಡ ವಿಧಿಸಿದೆ.

ವಿಮಾನ ಕಾರ್ಯಾಚರಣೆಗಳ ಸುರಕ್ಷತೆಯಲ್ಲಿ ರಾಜೀಮಾಡಿಕೊಂಡ, ವಿಮಾನಗಳ ಸುರಕ್ಷಿತ ಭೂಸ್ಪರ್ಶ ಮತ್ತು ಸುರಕ್ಷತಾ ನಿಯಮಗಳನ್ನು ಪಾಲಿಸದ ವಿಮಾನ ನಿಲ್ದಾಣ ನಿರ್ವಾಹಕರು, ನಿಗದಿತ ಮತ್ತು ನಿಗದಿತವಲ್ಲದ ನಿರ್ವಾಹಕರು ಹಾಗೂ ಹಾರಾಟ ತರಬೇತಿ ಸಂಸ್ಥೆಗಳು (ಎಫ್‌ಟಿಒಎಸ್) ಸೇರಿ ವಿವಿಧ ವಿಮಾನಯಾನ ಸಂಸ್ಥೆಗಳ ಮೇಲೆ ಜಾರಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಡಿಜಿಸಿಎ ಭಾನುವಾರ ಹೇಳಿದೆ. 39 ಪ್ರಕರಣಗಳಲ್ಲಿ ವಿವಿಧ ವಿಮಾನಯಾನ ಸಂಸ್ಥೆಗಳು, ವಿಮಾನ ನಿಲ್ದಾಣ ನಿರ್ವಾಹಕರು ಮತ್ತು ಎಫ್‌ಟಿಒಗಳಿಗೆ ದಂಡ ವಿಧಿಸಲಾಗಿದೆ. ಕೇದಾರನಾಥ ಯಾತ್ರಾ ಕಾರ್ಯಾಚರಣೆ ಸಮಯದಲ್ಲಿ ಎಸ್‌ಒಪಿ ಪಾಲಿಸದ 5 ನಿಗದಿತವಲ್ಲದ ನಿರ್ವಾಹಕರಿಗೂ ದಂಡ ವಿಧಿಸಲಾಗಿದೆ.

ಭಾವ್‌ನಗರ ವಿಮಾನ ನಿಲ್ದಾಣದ ರನ್‌ವೇನಲ್ಲಿ ಅವಶ್ಯಕವಾದ ಬೆಳಕಿನ ವ್ಯವಸ್ಥೆ ಮಾಡದ ಕಾರಣ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಉಸಿರಾಟದ ವಿಶ್ಲೇಷಕ ತಪಾಸಣೆಗಳಿಗೆ ಮಾರ್ಗಸೂಚಿ ಪಾಲಿಸದಿದ್ದಕ್ಕಾಗಿ ಗೋ ಏರ್ ಸೇರಿ 17 ವಾಯುಯಾನ ಸಂಸ್ಥೆಗಳಿಗೆ ದಂಡ ವಿಧಿಸಲಾಗಿದೆ. ದಂಡ ವಿಧಿಸಿರುವ ಸಂಸ್ಥೆಗಳಲ್ಲಿ ಇಂಡಿಗೊ, ಏರ್ ಇಂಡಿಯಾ, ಸ್ಪೈಸ್ ಜೆಟ್ ಹಾಗೂ ವಿಸ್ತಾರಾ ಕೂಡ ಸೇರಿವೆ.

ಪ್ರಮಾಣಿತ ಕಾರ್ಯಾಚರಣೆ ವಿಧಾನ, ಸುರಕ್ಷತಾ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸದೇ ತಪ್ಪೆಸಗಿದ ಪೈಲಟ್‌ಗಳು, ಕ್ಯಾಬಿನ್ ಸಿಬ್ಬಂದಿ, ವಿಮಾನ ಸಂಚಾರ ನಿಯಂತ್ರಣಾಧಿಕಾರಿಗಳು, (ಎಟಿಸಿಒಎಸ್) ವಿಮಾನ ನಿರ್ವಹಣಾ ಎಂಜಿನಿಯರ್‌ಗಳು (ಎಎಂಇ) ಮತ್ತು ವಿವಿಧ ಹುದ್ದೆಯಲ್ಲಿರುವ ಸಿಬ್ಬಂದಿ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ವರ್ಷದಲ್ಲಿ ಕೈಗೊಂಡ 305 ಜಾರಿ ಕ್ರಮಗಳಲ್ಲಿ ಗಂಭೀರ ಘಟನೆಗಳು ಮತ್ತು ಅಪಘಾತಗಳ ಸಂಬಂಧ ವಿಮಾನ ಸಿಬ್ಬಂದಿ ಮತ್ತು ಎಟಿಸಿಒಗಳು, ವಿಮಾನಗಳ ಅಸಮರ್ಪಕ ನಿರ್ವಹಣೆ, ನಿಲ್ದಾಣದಲ್ಲಿನ ಅಸಮರ್ಪಕ ಸೌಲಭ್ಯಗಳು, ಉಸಿರಾಟದ ವಿಶ್ಲೇಷಕ ಪರೀಕ್ಷೆಗಳಲ್ಲಿ ಸಿಕ್ಕಿಬಿದ್ದ ಪೈಲಟ್‌ಗಳು, ಕ್ಯಾಬಿನ್ ಸಿಬ್ಬಂದಿ, ಎಟಿಸಿಒಗಳು ಮತ್ತು ಎಎಂಇಗಳ ವಿರುದ್ಧ ತೆಗೆದುಕೊಂಡ ಕ್ರಮಗಳೂ ಸೇರಿವೆ.

ರಾಸಾಯನಿಕ ಘಟಕದಲ್ಲಿ ಅಗ್ನಿ ಅವಘಡ: ಇಬ್ಬರ ಸಾವು



ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ಅವಘಡ

ನಾಸಿಕ್ (ಪಿಟಿಐ): ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ರಾಸಾಯನಿಕ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟಗೊಂಡ ಪರಿಣಾಮ ಇಬ್ಬರು ಮೃತಪಟ್ಟು, 17 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ–ಆಗ್ರಾ ಹೆದ್ದಾರಿಯ ಮುಂಢೇಗಾವ್‌ನಲ್ಲಿರುವ ಜಿಂದಾಲ್ ಪೊಲಿ ಫಿಲ್ಮ್ ಕಾರ್ಖಾನೆಯಲ್ಲಿ ಭಾನುವಾರ ಬೆಳಿಗ್ಗೆ 11.30ರ ಸುಮಾರಿಗೆ ಅವಘಡ ಸಂಭವಿಸಿದೆ. ಸಮೀಪದ ಹಳ್ಳಿಗಳಿಗೂ ಸ್ಫೋಟದ ಶಬ್ದ ಕೇಳಿಸಿದೆ ಎಂದು ತಿಳಿಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಘಟನಾ ಸ್ಥಳಕ್ಕೆ ಭೇಟಿ ನೀಡಿದರು. ನಂತರ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಬಳಿಕ, 'ಅಗ್ನಿ ದುರಂತಕ್ಕೆ ಕಾರಣ ಏನೆಂದು ಈವರೆಗೆ ತಿಳಿದಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುವುದು. ಮೃತರ ಕುಟುಂಬಸ್ಥರಿಗೆ ತಲಾ ₹5 ಲಕ್ಷ ಪರಿಹಾರ ಮತ್ತು ಗಾಯಾಳುಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು' ಎಂದು ಅವರು ಘೋಷಿಸಿದರು.

ಶಂಕಿತ ಉಗ್ರರ ದಾಳಿ: ಇಬ್ಬರ ಸಾವು

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗ್ರಾಮವೊಂದರಲ್ಲಿ ಭಾನುವಾರ ಸಂಜೆ ನಡೆದ ಶಂಕಿತ ಉಗ್ರರ ದಾಳಿಯಲ್ಲಿ ಇಬ್ಬರು ನಾಗರಿಕರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ರಜೌರಿಯಿಂದ 8 ಕಿ.ಮೀ ದೂರದಲ್ಲಿರುವ ಡಾಂಗ್ರಿ ಗ್ರಾಮದಲ್ಲಿ ಇಬ್ಬರು ಶಸ್ತ್ರಸಜ್ಜಿತ ವ್ಯಕ್ತಿಗಳು ನಾಗರಿಕರ ಮೇಲೆ ಗುಂಡು ಹಾರಿಸಿದ್ದಾರೆ. 3 ಮನೆಗಳಲ್ಲಿ ಗುಂಡಿನ ದಾಳಿ ನಡೆದಿದೆ ಎಂದು ಜಮ್ಮು ವಲಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಮುಕೇಶ್ ಸಿಂಗ್ ತಿಳಿಸಿದ್ದಾರೆ.

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ

631 ಮೀನುಗಾರರ ಬಿಡುಗಡೆಗೆ ಮನವಿ

ನವದೆಹಲಿ (ಪಿಟಿಐ): ಪಾಕಿಸ್ತಾನದ ಜೈಲಿನಲ್ಲಿರುವ ಇಬ್ಬರು ನಾಗರಿಕರು ಸೇರಿದಂತೆ 631 ಭಾರತೀಯ ಮೀನುಗಾರರನ್ನು ಬಿಡುಗಡೆ ಮಾಡಿ ಸ್ವದೇಶಕ್ಕೆ ಕಳುಹಿಸುವಂತೆ ಭಾರತ ಭಾನುವಾರ ಮನವಿ ಮಾಡಿದೆ.

ಅಲ್ಲದೆ, ಪಾಕಿಸ್ತಾನ ವಶದಲ್ಲಿರುವ ಮತ್ತು ಭಾರತೀಯರು ಎನ್ನಲಾದ ಉಳಿದ 30 ಮೀನುಗಾರರು ಮತ್ತು 22 ನಾಗರಿಕ ಕೈದಿಗಳಿಗೆ ತಕ್ಷಣವೇ ಕಾನ್ಸುಲರ್ ಪ್ರವೇಶ ಒದಗಿಸುವಂತೆ ಇಸ್ಲಾಮಾಬಾದ್ ಅನ್ನು ಒತ್ತಾಯಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ತಿಳಿಸಿದೆ.

2008ರ ಒಪ್ಪಂದದ ಪ್ರಕಾರ ಪ್ರತಿ ಕ್ಯಾಲೆಂಡರ್ ವರ್ಷದ ಜನವರಿ 1 ಮತ್ತು ಜುಲೈ 1 ರಂದು ಕೈದಿಗಳು ಮತ್ತು ಮೀನುಗಾರರ ಪಟ್ಟಿಯನ್ನು ಎರಡೂ ದೇಶಗಳು ವಿನಿಮಯ ಮಾಡಿಕೊಳ್ಳುವ ಸಂದರ್ಭದಲ್ಲಿ ಭಾರತ ಈ ಮನವಿ ಮಾಡಿದೆ.


'ಭಾರತೀಯ ಕೈದಿಗಳು ಮತ್ತು ಮೀನುಗಾರರ ಸುರಕ್ಷತೆ, ಭದ್ರತೆ ಖಚಿತಪಡಿಸಿಕೊಳ್ಳಲು ಕೋರಲಾಗಿದೆ. ಪ್ರಸ್ತುತ ಭಾರತದ ವಶದಲ್ಲಿರುವ ಪಾಕಿಸ್ತಾನದ 339 ಕೈದಿಗಳು ಮತ್ತು 95 ಮೀನುಗಾರರ ಪಟ್ಟಿಯನ್ನು ಭಾರತ ಹಂಚಿಕೊಂಡಿದೆ' ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಪಾಕಿಸ್ತಾನ ಸಹ ತನ್ನ ವಶದಲ್ಲಿರುವ 51 ಕೈದಿಗಳು ಮತ್ತು 654 ಮೀನುಗಾರರ ಪಟ್ಟಿ ಹಂಚಿಕೊಂಡಿದೆ.

ಮೀನುಗಾರರು ಸೇರಿದಂತೆ 71 ಪಾಕಿಸ್ತಾನಿ ಕೈದಿಗಳ ರಾಷ್ಟ್ರೀಯತೆ ದೃಢೀಕರಿಸಲು ಅಗತ್ಯ ಕ್ರಮವನ್ನು ತ್ವರಿತಗೊಳಿಸುವಂತೆ ಭಾರತ ಒತ್ತಾಯಿಸಿದೆ. ರಾಷ್ಟ್ರೀಯತೆ ದೃಢೀಕರಣ ವಿಳಂಬದಿಂದ ವಾಪಸಾತಿ ಬಾಕಿ ಉಳಿದಿದೆ ಎಂದು ಎಂಇಎ ಹೇಳಿದೆ.

ಮುಖ್ಯಾಂಶಗಳು

- ಒಪ್ಪಂದದಂತೆ ಕೈದಿಗಳು, ಮೀನುಗಾರರ ಪಟ್ಟಿ ವಿನಿಮಯ
- ಭಾರತದ ವಶದಲ್ಲಿ ಪಾಕಿಸ್ತಾನದ 95 ಮೀನುಗಾರರು



2023: ಪಕ್ಷಗಳ ಮುಂದಿನ ಸವಾಲು, ಸಾಧ್ಯತೆ

ನವದೆಹಲಿ: ಲೋಕಸಭೆಯಲ್ಲಿ ಬಹುಮತಕ್ಕಾಗಿ ರಾಜಕೀಯ ಪಕ್ಷಗಳ ನಡುವಣ ಮಾಡು ಇಲ್ಲವೇ ಮಡಿ ಹೋರಾಟಕ್ಕೆ ಇನ್ನು ಇರುವುದು 14 ತಿಂಗಳುಗಳು ಮಾತ್ರ. ಕಳೆದ ಎರಡು ಲೋಕಸಭೆ ಚುನಾವಣೆಗಳಲ್ಲಿನ ಗೆಲುವನ್ನು ಪುನರಾವರ್ತಿಸಲು ಬಿಜೆಪಿ ಬಯಸಿದೆ. ಬಿಜೆಪಿ ವಿರೋಧಿ ಪಕ್ಷಗಳ ಒಗ್ಗಟ್ಟಿನ ಮಾತುಗಳು ಹಲವು ಬಾರಿ ಕೇಳಿ ಬಂದರೂ ಅದು ಕಾರ್ಯರೂಪಕ್ಕೇನೂ ಬಂದಿಲ್ಲ. 2024ರ ಚುನಾವಣೆಗೆ ಭೂಮಿಕೆ ಸಿದ್ಧಪಡಿಸುವ ಕೆಲಸವನ್ನು 2023 ಮಾಡಲಿದೆ. 2018ರಲ್ಲಿ ಕೆಲವು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆ ಆಗಿತ್ತು. ಆದರೆ, 2019ರ ಲೋಕಸಭಾ ಚುನಾವಣೆಯ ಮೇಲೆ ಅದು ಪರಿಣಾಮ ಬೀರಲಿಲ್ಲ ಎಂಬ ವಿಶ್ವಾಸವನ್ನು ಬಿಜೆಪಿ ಹೊಂದಿದೆ. ರಾಜಕೀಯ ಪಕ್ಷಗಳ ಮುಂದಿರುವ ಸವಾಲುಗಳತ್ತ ಒಂದು ನೋಟ ಇಲ್ಲಿದೆ

• ಶೆಮಿನ್ ಜಾಯ್



ಬಿಜೆಪಿ: 2023 ಬಿಜೆಪಿಗೆ ಅತ್ಯಂತ ಮಹತ್ವದ ವರ್ಷ. ಈ ವರ್ಷದಲ್ಲಿ ಏನಾದರೂ ಹಿನ್ನಡೆಯಾದರೆ 2024ರ ಲೋಕಸಭಾ ಚುನಾವಣೆಯ ಫಲಿತಾಂಶದ ಮೇಲೆ ಅದು ಪರಿಣಾಮ ಬೀರಬಹುದು. 2018ರಲ್ಲಿ ನಾಲ್ಕು ಪ್ರಮುಖ ರಾಜ್ಯಗಳಲ್ಲಿ (ಮಧ್ಯಪ್ರದೇಶ, ರಾಜಸ್ಥಾನ, ಕರ್ನಾಟಕ ಮತ್ತು ಛತ್ತೀಸಗಢ) ಬಿಜೆಪಿಗೆ ಸೋಲಾಗಿತ್ತು. ಬಳಿಕ, ಪಕ್ಷಾಂತರದ ಮೂಲಕ ಕರ್ನಾಟಕ ಮತ್ತು ಮಧ್ಯಪ್ರದೇಶದಲ್ಲಿ ಬಿಜೆಪಿ ಸರ್ಕಾರ ರಚನೆ ಮಾಡಿತು. ರಾಜಸ್ಥಾನದ ಕಾಂಗ್ರೆಸ್ ಸರ್ಕಾರ ಉರುಳಿಸುವ ಬಿಜೆಪಿಯ ಯತ್ನ ಯಶಸ್ವಿಯಾಗಲಿಲ್ಲ. ಛತ್ತೀಸಗಡದಲ್ಲಿ ಕಾಂಗ್ರೆಸ್ ಶಾಸಕರ ಸಂಖ್ಯೆಯು ಬಿಜೆಪಿಯ ಕಾರ್ಯತಂತ್ರಕ್ಕೆ ಪೂರಕವಾಗಿ ಇಲ್ಲ. ಈ ಬಾರಿ, ಗೆಲ್ಲಬೇಕಾದ ರಾಜ್ಯಗಳ ಪಟ್ಟಿಗೆ ತೆಲಂಗಾಣವನ್ನೂ ಬಿಜೆಪಿ ಸೇರಿಸಿಕೊಳ್ಳಬಹುದು.

ಕಾಂಗ್ರೆಸ್: 'ಭಾರತ್ ಜೋಡೊ ಯಾತ್ರೆ'ಯಿಂದಾಗಿ ಕಾಂಗ್ರೆಸ್ ಪಕ್ಷವು ಹುರುಪು ತುಂಬಿಕೊಂಡಿದೆ. ವಿರೋಧ ಪಕ್ಷಗಳಲ್ಲಿ ತಾನು ದೊಡ್ಡಣ್ಣ ಎಂಬ ಮನೋಭಾವವನ್ನು ಬಿಟ್ಟುಬಿಡಬೇಕು. ಎಲ್ಲ ಪಕ್ಷಗಳೂ ಆರಾಮದಾಯಕವಾಗಿ ಇರಬೇಕು ಮತ್ತು ಎಲ್ಲರಿಗೂ ಗೌರವ ಸಿಗಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಲವು ಬಾರಿ ಹೇಳಿದ್ದಾರೆ. ಬಣ ಪೈಪೋಟಿ ವಿಪರೀತವಾಗಿರುವ ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಅಧಿಕಾರ ಉಳಿಸಿಕೊಳ್ಳುವುದು ಬಹಳ ಮುಖ್ಯ. ಕರ್ನಾಟಕದಲ್ಲಿ ಗೆಲುವು ಪಡೆಯುವುದು ಕೂಡ ಮಹತ್ವದ್ದೇ ಆಗಿದೆ. ತೆಲಂಗಾಣದಲ್ಲಿ ತನ್ನ ಸ್ಥಾನವನ್ನು ಬಿಜೆಪಿ ಕಸಿದುಕೊಳ್ಳದಂತೆ ನೋಡಿಕೊಳ್ಳಬೇಕಿದೆ. ತ್ರಿಪುರಾ ಮತ್ತು ಈಶಾನ್ಯ ಭಾಗದ ಇತರ ರಾಜ್ಯಗಳು ಕೂಡ ಕಾಂಗ್ರೆಸ್‌ಗೆ ಸವಾಲಿನದ್ದೇ ಆಗಿವೆ.

ಶಿವಸೇನಾ: ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ಮುಖ್ಯಮಂತ್ರಿ ಏಕನಾಥ ಶಿಂಧೆ ನಡುವಣ ತಿಕ್ಕಾಟದಲ್ಲಿ ಯಾರಿಗೆ ಗೆಲುವು ಎಂಬುದು ಆಸಕ್ತಿದಾಯಕ ವಿಚಾರ. ಶಿವಸೇನಾವನ್ನು ಒಡೆಯುವ ಕೆಲಸದಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಆದರೆ, ಹಿಂದೆ ಇದ್ದ ವೈಭವಕ್ಕೆ ಪಕ್ಷವನ್ನು ಒಯ್ಯಬಹುದು ಎಂಬ ವಿಶ್ವಾಸದಲ್ಲಿ ಉದ್ಧವ್ ಇದ್ದಾರೆ.

ತೃಣಮೂಲ ಕಾಂಗ್ರೆಸ್: ಪಶ್ಚಿಮ ಬಂಗಾಳ ವಿಧಾನಸಭೆಗೆ 2021ರಲ್ಲಿ ನಡೆದ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಗೆಲುವು ಮಮತಾ ಬ್ಯಾನರ್ಜಿ ಅವರ ಮಹತ್ವಾಕಾಂಕ್ಷೆಯು ಗರಿಗೆದರುವಂತೆ ಮಾಡಿತು. ಆದರೆ, ಗೋವಾ ವಿಧಾನಸಭೆ ಚುನಾವಣೆಯಲ್ಲಿ ಕಳಪೆ ಪ್ರದರ್ಶನವು ಈ ಉತ್ಸಾಹಕ್ಕೆ ತಣ್ಣೀರೆರಚಿತು. ಎಎಪಿಯ ಏಳಿಗೆಯು ಕೂಡ ಮಮತಾ ಅವರ ಅವಕಾಶಗಳನ್ನು ಕುಗ್ಗಿಸಿದೆ. ಹಾಗಿ ದ್ದರೂ ಮಮತಾ ಅವರು 'ಬಂಗಾಳದ ಹುಲಿ'ಯೇ. ಮಮತಾ ಅವರ ಸೋದರಳಿಯ ಹೊಸ ತಲೆಮಾರಿನ ಅಭಿಷೇಕ್ ಬ್ಯಾನರ್ಜಿ ಮತ್ತು ಮಮತಾ ನಿಷ್ಠರ ನಡುವೆ ಪಕ್ಷದ ನಿಯಂತ್ರಣಕ್ಕಾಗಿ ನಡೆಯುವ ಜಟಾಪಟಿ ಎಲ್ಲಿಯವರೆಗೆ ಹೋಗಬಹುದು ಎಂಬುದು ಕುತೂಹಲಕರ.

ಆರ್‌ಜೆಡಿ/ಜೆಡಿಯು: 2023ರಲ್ಲಿ ಎಲ್ಲರ ಕಣ್ಣುಗಳು ಬಿಹಾರದತ್ತಲೇ ನೆಟ್ಟರಲಿವೆ. ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರಿಗೆ ನಿತೀಶ್ ಅವರು ಅಧಿಕಾರ ಬಿಟ್ಟುಕೊಟ್ಟು, ರಾಷ್ಟ್ರ ರಾಜಕಾರಣಕ್ಕೆ ಹೋಗಲಿದ್ದಾರೆಯೇ ಎಂಬುದು ರಾಜಕೀಯ ವಲಯದಲ್ಲಿ ಎಲ್ಲರಿಗೂ ಆಸಕ್ತಿ ಇರುವ ವಿಚಾರ. ಈ ಎರಡೂ ಪಕ್ಷಗಳು ವಿಲೀನ ಆಗಲಿವೆಯೇ ಎಂಬ ಪ್ರಶ್ನೆಯೂ ಇದೆ. ಎಲ್ಲದರ ಉತ್ತರಗಳು ನಿತೀಶ್ ಅವರ ಬಳಿಯಲ್ಲಿಯೇ ಇವೆ.

ಎಎಪಿ: ಪಂಜಾಬ್‌ನಲ್ಲಿ ಭಾರಿ ಗೆಲುವು ಮತ್ತು ಗುಜರಾತ್‌ನಲ್ಲಿ ಒಂದು ಮಟ್ಟದ ನೆಲೆ ಕಂಡುಕೊಂಡಿರುವ ಎಎಪಿ ಇತರ ರಾಜ್ಯಗಳತ್ತ ಕಣ್ಣು ಹಾಯಿಸುವುದರಲ್ಲಿ ಸಂದೇಹವೇನೂ ಇಲ್ಲ. ಎಎಪಿ ಅದೃಷ್ಟಪರೀಕ್ಷೆಗೆ ಇಳಿಯುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ತಮ್ಮ ಅವಕಾಶವನ್ನು ಬಿಟ್ಟುಕೊಡಲು ಇಷ್ಟವಿಲ್ಲದ ಕಾಂಗ್ರೆಸ್ ಮತ್ತು ಇತರ ಪಕ್ಷಗಳಿಂದ ಎಎಪಿಗೆ ತೊಡಕು ಎದುರಾಗಬಹುದು. 2024ರ ಲೋಕಸಭಾ ಚುನಾವಣೆ ಹೊತ್ತಿಗೆ ವಿರೋಧ ಪಕ್ಷಗಳ ಜೊತೆಗೆ ಎಎಪಿ ಹೊಂದಾಣಿಕೆ ಮಾಡಬಹುದೇ ಅಥವಾ ಏಕಾಂಗಿಯಾಗಿಯೇ ಇರಬಹುದೇ ಎಂಬುದನ್ನು ಕಾಯ್ದು ನೋಡಬೇಕಿದೆ.

ಸಮಾಜವಾದಿ ಪಕ್ಷ: ಪಕ್ಷದ ಸ್ಥಾಪಕ ಮುಲಾಯಂ ಸಿಂಗ್ ಯಾದವ್ ನಿಧನರಾಗಿದ್ದಾರೆ. ಉತ್ತರ ಪ್ರದೇಶದ ಕುಟಿಲ ರಾಜಕಾರಣವನ್ನು ಅಖಿಲೇಶ್ ಹೇಗೆ ನಿಭಾಯಿಸಲಿದ್ದಾರೆ ಎಂಬುದರ ಮೇಲೆ ಹಲವು ವಿಚಾರಗಳು ಅವಲಂಬಿತ. ಚಿಕ್ಕಪ್ಪ ಶಿವಪಾಲ್ ಯಾದವ್ ಅವರೊಂದಿಗೆ ಸಂಧಾನ ಮಾಡಿಕೊಳ್ಳುವ ಮೂಲಕ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಸುಳಿವನ್ನು ಅಖಿಲೇಶ್ ನೀಡಿದ್ದಾರೆ. ವಿರೋಧ ಪಕ್ಷದ ಸ್ಥಾನದಿಂದ ಆಡಳಿತ ಪಕ್ಷದ ಸ್ಥಾನಕ್ಕೆ ಜಿಗಿಯುವುದು ಸಮಾಜವಾದಿ ಪಕ್ಷಕ್ಕೆ ಸುಲಭದ ಕೆಲಸ ಏನಲ್ಲ.

ಬಿಎಸ್‌ಪಿ: ಯಾವುದೇ ಪಕ್ಷದ ಕತೆ ಮುಗಿಯಿತು ಎಂದು ಹೇಳುವುದು ಮೂರ್ಖತನವಾದೀತು. ಆದರೆ, ಬಿಎಸ್‌ಪಿ ಎತ್ತ ಕಡೆ ಸಾಗುತ್ತಿದೆ ಎಂಬ ಪ್ರಶ್ನೆಯಂತೂ ಈಗ ಇದೆ. ದಲಿತ ಸಮುದಾಯಗಳಲ್ಲಿ ತಮಗೆ ಇದ್ದ ಬೆಂಬಲವನ್ನು ಮಾಯಾವತಿ ಮರಳಿ ಗಳಿಸುವುದು ಸಾಧ್ಯವೇ? ಜಾತಿ ಅಸ್ಮಿತೆಯನ್ನು ಬದಿಗೆ ಸರಿಸಿ ಆ ಜಾಗಕ್ಕೆ ಹಿಂದುತ್ವವಾದಿ ಕಾರ್ಯಸೂಚಿಯನ್ನು ತರುವ ಯತ್ನವನ್ನು ಬಿಜೆಪಿ ಮಾಡುತ್ತಲೇ ಇದೆ. ಹೀಗಿದ್ದರೂ ಜಾತಿ ಅಸ್ಮಿತೆಯ ಆಧಾರದಲ್ಲಿ ರಾಜಕಾರಣ ಮುಂದುವರಿಸಲು ಸಾಧ್ಯವೇ ಎಂಬ ಪ್ರಶ್ನೆಯೂ ಇದೆ.

ಎನ್‌ಸಿಪಿ: ಬಿಜೆಪಿ ವಿರೋಧಿ ಪಕ್ಷಗಳ ರಾಜಕಾರಣದಲ್ಲಿ ಶರದ್ ಪವಾರ್ ಅವರಿಗೆ ಹಿರಿಯನ ಸ್ಥಾನ. 2024 ಹತ್ತಿರವಾಗುದ್ದಂತೆಯೇ ಅವರ ಸಲಹೆಗಾಗಿ ಬರುವವರ ಸಂಖ್ಯೆಯು ಹೆಚ್ಚುತ್ತಲೇ ಹೋಗಲಿದೆ. ಎನ್‌ಸಿಪಿಯಲ್ಲಿ ಕೂಡ ಮುಂದಿನ ನಾಯಕತ್ವಕ್ಕಾಗಿ ಪೈಪೋಟಿ ಇದೆ. ಹಾಗಾಗಿ, ಉತ್ತರಾಧಿಕಾರ ಯಾರಿಗೆ ಎಂಬ ನೀಲನಕ್ಷೆಯನ್ನು ಪವಾರ್ ಬಹಿರಂಗಪಡಿಸಲಿದ್ದಾರೆಯೇ ಎಂಬ ಪ್ರಶ್ನೆ ಇದೆ.

ಸಿಪಿಎಂ: ಈ ಪಕ್ಷವು ತ್ರಿಪುರಾ ಮೇಲೆ ನಿಕಟ ನಿಗಾ ಇರಿಸಿದೆ. ಈಶಾನ್ಯ ಭಾರತದ ಈ ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ಬರುವ ಎಲ್ಲ ಸಾಧ್ಯತೆಯೂ ಇದೆ ಎಂದು ಪಕ್ಷವು ನಂಬಿದೆ. 25 ವರ್ಷ ರಾಜ್ಯದಲ್ಲಿ ಸಿಪಿಎಂ ಅಧಿಕಾರದಲ್ಲಿ ಇತ್ತು.

ಜೆಡಿಎಸ್: ಎಚ್‌.ಡಿ. ದೇವೇಗೌಡ ಅವರು ಸ್ಥಾಪಿಸಿದ ಈ ಪಕ್ಷವು ಕರ್ನಾಟಕದಲ್ಲಿ ಮೊದಲ ಸ್ಥಾನಕ್ಕೆ ಏರದೇ ಇರಬಹುದು. ಆದರೆ, ಕಿಂಗ್ ಮೇಕರ್ ಇಲ್ಲ ತಾನೇ ಕಿಂಗ್ ಆಗುವ ಕನಸು ಆ ಪಕ್ಷಕ್ಕೆ ಇದೆ. ಏಕೆಂದರೆ, ಮುಖ್ಯಮಂತ್ರಿ ಸ್ಥಾನವು ಈ ರೀತಿಯಲ್ಲಿ ಎರಡು ಬಾರಿ ಜೆಡಿಎಸ್‌ಗೆ ಒಲಿದು ಬಂದಿತ್ತು. ಈಗ ಜೆಡಿಎಸ್‌ಗೆ ಪೂರಕವಲ್ಲದ ಹಲವು ವಿಚಾರಗಳು ಇವೆ. 2023 ಜೆಡಿಎಸ್‌ಗೆ ನಿರ್ಣಾಯಕ ವರ್ಷ ಆಗಬಹುದು.

ಬಿಆರ್‌ಎಸ್: ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಎಂಬ ತಮ್ಮ ಪಕ್ಷದ ಹೆಸರನ್ನು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎಂದು ಕೆ. ಚಂದ್ರಶೇಖರ ರಾವ್ ಬದಲಿಸಿಕೊಂಡಿದ್ದಾರೆ. 2024ರ ಲೋಕಸಭಾ ಚುನಾವಣೆಯ ಬಳಿಕ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂಬ ಮಹತ್ವಾಕಾಂಕ್ಷೆಯೇ ಹೆಸರು ಬದಲಾವಣೆಗೆ ಕಾರಣ. ತೆಲಂಗಾಣ ವಿಧಾನಸಭೆಯಲ್ಲಿ ಗೆಲ್ಲುವ ವಿಶ್ವಾಸ ಅವರಲ್ಲಿದೆ.

ಡಿಎಂಕೆ/ಎಐಎಡಿಎಂಕೆ: ಡಿಎಂಕೆಯ ಉತ್ತರಾಧಿಕಾರ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ. ಆದರೆ, ಪ್ರತಿಸ್ಪರ್ಧಿ ಎಐಎಡಿಎಂಕೆ ಒಳಜಗಳದಿಂದ ಬಳಲಿದೆ. ಸ್ವಲ್ಪ ಅವಕಾಶ ಕೊಟ್ಟರೂ ಬಿಜೆಪಿ ನುಂಗಿಬಿಡಬಹುದು ಎಂಬ ಸ್ಥಿತಿಯಲ್ಲಿ ಎಐಎಡಿಎಂಕೆ ಇದೆ. ಎಡಪ್ಪಾಡಿ ಪಳನಿಸ್ವಾಮಿ ಮತ್ತು ಒ.ಪನ್ನೀರಸೆಲ್ವಂ ನಡುವಣ ಕಿತ್ತಾಟ ಶಮನಕ್ಕೆ ಮಧ್ಯಸ್ಥಿಕೆ ವಹಿಸುವುದೇ ಬಿಜೆಪಿಯ ಮುಖ್ಯ ಕೆಲಸವಾಗಿದೆ.

ವೈಎಸ್‌ಆರ್ ಕಾಂಗ್ರೆಸ್: ಜಗನ್ ಮೋಹನ್ ರೆಡ್ಡಿ ಪ್ರಭಾವವು ಆಂಧ್ರ ಪ್ರದೇಶದಲ್ಲಿ ದಟ್ಟವಾಗಿದೆ. ಆದರೆ ಅವರ ತಂಗಿ ವೈ.ಎಸ್ ಶರ್ಮಿಳಾ ಅವರು ತೆಲಂಗಾಣದಲ್ಲಿ ಪ್ರತ್ಯೇಕ ಪಕ್ಷ ಕಟ್ಟಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್/ಪಿಡಿಪಿ: ಜಮ್ಮು–ಕಾಶ್ಮೀರ ವಿಧಾನಸಭೆಗೆ ಈ ವರ್ಷ ಚುನಾವಣೆ ನಡೆಯಬಹುದೇ ಎಂಬುದು ಎಲ್ಲರಲ್ಲಿಯೂ ಇರುವ ಪ್ರಶ್ನೆ. ಅದರ ಬಗ್ಗೆ ಸ್ಪಷ್ಟತೆ ಇಲ್ಲ. ಮೇಯಲ್ಲಿ ಚುನಾವಣೆ ನಡೆಬಹುದು ಎಂಬ ಊಹಾಪೋಹ ಇದೆ. ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ, ಜಮ್ಮು–ಕಾಶ್ಮೀರದಲ್ಲಿ ಬಿಜೆಪಿಗೆ ಪ್ರಬಲ ಪ್ರತಿಸ್ಪರ್ಧಿ ಪಕ್ಷಗಳು.

ಸಂಕ್ಷಿಪ್ತ ಸುದ್ದಿ

ಭಾರತ– ಪಾಕ್: ಪರಮಾಣು ಸ್ಥಾವರ ಮಾಹಿತಿ ಹಂಚಿಕೆ

ನವದೆಹಲಿ (ಪಿಟಿಐ): ದ್ವಿಪಕ್ಷೀಯ ಒಪ್ಪಂದದ ಪ್ರಕಾರ ಭಾರತ ಮತ್ತು ಪಾಕಿಸ್ತಾನ ತಮ್ಮಲ್ಲಿನ ಪರಮಾಣು ಸ್ಥಾವರಗಳ ಪಟ್ಟಿಯನ್ನು ಭಾನುವಾರ ಪರಸ್ಪರ ವಿನಿಮಯ ಮಾಡಿಕೊಂಡವು.

ಉಭಯ ದೇಶಗಳು ಪರಸ್ಪರರ ಪರಮಾಣು ಸ್ಥಾವರಗಳು ಮತ್ತು ಪರಮಾಣು ಸೌಲಭ್ಯಗಳ ಮೇಲೆ ದಾಳಿ ಮಾಡುವುದನ್ನು ಈ ಒಪ್ಪಂದ ನಿಷೇಧಿಸುತ್ತದೆ. ಅದರ ನಿಬಂಧನೆಗಳ ಪ್ರಕಾರ ಎರಡೂ ದೇಶಗಳ ಪಟ್ಟಿಯ ವಿನಿಮಯ ನಡೆದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ನೀಡಿದೆ.

ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ರಾಜತಾಂತ್ರಿಕ ಮಾರ್ಗಗಳ ಮೂಲಕ ಈ ಪಟ್ಟಿಗಳ ವಿನಿಮಯ ನಡೆದಿದೆ ಎಂದು ಅದು ಹೇಳಿದೆ.

ನೋಟು ಅಮಾನ್ಯ: ಇಂದು ತೀರ್ಪು

ನವದೆಹಲಿ: ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ಅಮಾನ್ಯ ಮಾಡಿದ್ದ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಸೋಮವಾರ ಪ್ರಕಟಿಸಲಿದೆ.

ನ್ಯಾಯಮೂರ್ತಿ ಎಸ್‌.ಎ. ನಜೀರ್ ನೇತೃತ್ವದ ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠವು ತೀರ್ಪು ಪ್ರಕಟಿಸಲಿದೆ. ನಜೀರ್ ಅವರು ಜನವರಿ 4ರಂದು ನಿವೃತ್ತರಾಗುವರು.

ಸುಪ್ರೀಂ ಕೋರ್ಟ್‌ನ ಸೋಮವಾರದ ವೇಳಾಪಟ್ಟಿಯ ಪ್ರಕಾರ ಈ ವಿಷಯದಲ್ಲಿ ಎರಡು ಪ್ರತ್ಯೇಕ ತೀರ್ಪುಗಳು ಇರಲಿದ್ದು ಅವುಗಳನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಬಿ.ವಿ.ನಾಗರತ್ನ ಅವರು ಪ್ರಕಟಿಸಲಿದ್ದಾರೆ.

2016ರಲ್ಲಿ ಸರ್ಕಾರವು ನೋಟು ಅಮಾನ್ಯ ಮಾಡುವ ನಿರ್ಧಾರ ಕೈಗೊಂಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕೆಂದು ಸುಪ್ರೀಂ ಕೋರ್ಟ್ ಡಿಸೆಂಬರ್ 7ರಂದು ಕೇಂದ್ರ ಸರ್ಕಾರ ಮತ್ತು ಆರ್‌ಬಿಐಗೆ ನಿರ್ದೇಶನ ನೀಡಿತ್ತು.

'ಗಡಿ ಕ್ಯಾತೆ ತೆಗೆಯುವ ದೇಶಗಳ ಮೇಲೆ ನಿರ್ಬಂಧ ಹೇರಿ'

ನವದೆಹಲಿ (ಪಿಟಿಐ): ಭಾರತದ ಜೊತೆ ಸಂಘರ್ಷಕ್ಕೆ ಇಳಿಯುವ ಹಾಗೂ ಗಡಿ ಕ್ಯಾತೆ ತೆಗೆಯುವ ದೇಶಗಳಿಗೆ ಆರ್ಥಿಕ, ರಾಜತಾಂತ್ರಿಕ ಮತ್ತು ರಾಜಕೀಯ ಮಾರ್ಗದ ಮೂಲಕ ಪಾಠ ಕಲಿಸಬೇಕು ಎಂದು ಕೇರಳದ ಕೋಯಿಕ್ಕೋಡ್‌ನ ಕಾಂಗ್ರೆಸ್ ಸಂಸದ ಎಂ.ಕೆ.ರಾಘವನ್ ಆಗ್ರಹಿಸಿದ್ದಾರೆ.

ಈ ಸಂಬಂಧ ಅವರು ಇತ್ತೀಚೆಗೆ ಮುಗಿದ ಲೋಕಸಭಾ ಅಧಿವೇಶನದಲ್ಲಿ 'ದಿ ಸ್ಯಾಂಕ್ಷನ್ಸ್ ಆನ್ ಕಂಟ್ರಿಸ್ ಎಂಗೇಜಿಂಗ್ ಟೆರಿಟೋರಿಯಲ್ ಇನ್‌ಕರ್ಶನ್ಸ್ ಇನ್‌ಟು ಇಂಡಿಯಾ ಆ್ಯಕ್ಟ್–2022' ಹೆಸರಿನ ಖಾಸಗಿ ಮಸೂದೆಯನ್ನು ಅವರು ಮಂಡಿಸಿದ್ದಾರೆ.

'ಗಡಿ ಕ್ಯಾತೆ ತೆಗೆಯುವ ದೇಶಗಳ ಮೇಲೆ ಆರ್ಥಿಕ, ರಾಜತಾಂತ್ರಿಕ ಹಾಗೂ ರಾಜಕೀಯವಾಗಿ ನಿರ್ಬಂಧ ಹೇರಬೇಕು. ಆ ಮೂಲಕ ಆ ರಾಷ್ಟ್ರಗಳನ್ನು ಮಾತುಕತೆಗೆ ಬರುವಂತೆ ಮಾಡಬೇಕು' ಎಂದಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 3 ಸಾವು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಭಾನುವಾರ ಸ್ಫೋಟ ಸಂಭವಿಸಿದ್ದರಿಂದ ಮೂವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾರ್ಶಿ ತಾಲ್ಲೂಕಿನ ಪಟಾಕಿ ತಯಾರಿಕಾ ಘಟಕದೊಳಗೆ ಮಧ್ಯಾಹ್ನ 3 ಗಂಟೆಗೆ ಸ್ಫೋಟ ಸಂಭವಿಸಿ, ಬೆಂಕಿ ಹೊತ್ತಿಕೊಂಡಿದೆ. ಅಗ್ನಿಶಾಮಕ ದಳ ಮತ್ತು ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಹರಿಯಾಣ: ಜೂನಿಯರ್ ಮಹಿಳಾ ಅಥ್ಲೆಟಿಕ್ಸ್ ತಂಡದ ಕೋಚ್‌ಗೆ ಲೈಂಗಿಕ ಕಿರುಕುಳ ಆರೋಪ

ಕ್ರೀಡಾ ಖಾತೆ ತೊರೆದ ಸಂದೀಪ್ ಸಿಂಗ್



ಸಂದೀಪ್ ಸಿಂಗ್

ಚಂಡೀಗಢ (ಪಿಟಿಐ): ಜೂನಿಯರ್ ಮಹಿಳಾ ಅಥ್ಲೆಟಿಕ್ಸ್ ತಂಡದ ಕೋಚ್‌ಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ ಅವರು ನೈತಿಕ ಹೊಣೆ ಹೊತ್ತು ಭಾನುವಾರ ತಮ್ಮ ಖಾತೆ ತೊರೆದಿದ್ದಾರೆ.

ಆದರೆ ಸಚಿವ ಸಂಪುಟಕ್ಕೆ ರಾಜೀನಾಮೆ ನೀಡಿಲ್ಲ. ಮುದ್ರಣ ಮತ್ತು ಲೇಖನ ಸಾಮಾಗ್ರಿ ಸಚಿವರಾಗಿ ಅವರು ಮುಂದುವರಿದಿದ್ದಾರೆ.

ಸಂದೀಪ್ ಅವರು ತಮ್ಮ ಜೊತೆ ಅನುಚಿತವಾಗಿ ವರ್ತಿಸಿದ್ದು, ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಮಹಿಳಾ ಕೋಚ್ ದೂರು ನೀಡಿದ್ದರು. ಅದರ ಆಧಾರದಲ್ಲಿ ಚಂಡೀಗಢ ಪೊಲೀಸರು ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ದೂರಿನ ಹಿಂದೆ ತಮ್ಮ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುವ ಹುನ್ನಾರ ಅಡಗಿದೆ ಎಂದು ಆರೋಪಿಸಿ ಸಂದೀಪ್ ಅವರು ಕೋಚ್ ವಿರುದ್ಧ ಪ್ರತಿದೂರು ದಾಖಲಿಸಿದ್ದರು. ಹೀಗಾಗಿ ಹರಿಯಾಣದ ಪೊಲೀಸ್ ಮಹಾನಿರ್ದೇಶಕರು ಪ್ರಕರಣದ ತನಿಖೆಗಾಗಿ ಶನಿವಾರ ಸಮಿತಿಯೊಂದನ್ನು ರಚಿಸಿದ್ದರು.

'ತನಿಖಾ ಸಮಿತಿಯು ವರದಿ ಒಪ್ಪಿಸುವವರೆಗೂ ಕ್ರೀಡಾ ಸಚಿವನಾಗಿ ಮುಂದುವರಿಯುವುದಿಲ್ಲ. ಖಾತೆಯನ್ನು ಮುಖ್ಯಮಂತ್ರಿಯವರಿಗೆ ಹಿಂದಿರುಗಿಸಿದ್ದೇನೆ' ಎಂದು ಸಂದೀಪ್ ಭಾನುವಾರ ಹೇಳಿದ್ದಾರೆ.

'ಸಂದೀಪ್ ವಿರುದ್ಧ ಶುಕ್ರವಾರ ದೂರು ನೀಡಲಾಗಿದೆ. ಅದರ ಆಧಾರದಲ್ಲಿ ಪೊಲೀಸ್ ಠಾಣೆ ಸೆಕ್ಟರ್ 26ರಲ್ಲಿ ಐಪಿಸಿ ಸೆಕ್ಷನ್ 354, 354ಎ, 354ಬಿ, 342 ಮತ್ತು 506ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಚಂಡೀಗಢ ಪೊಲೀಸ್ ಇಲಾಖೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.

'ಸಂದೀಪ್ ಅವರನ್ನು ಸಂಪುಟದಿಂದ ತಕ್ಷಣವೇ ಕೈಬಿಡಬೇಕು. ಮುಖ್ಯಮಂತ್ರಿ ಮನೋಹರ್‌ಲಾಲ್ ಖಟ್ಟರ್ ಅವರು ಪ್ರಕರಣದ ತನಿಖೆಗಾಗಿ ಎಸ್‌ಐಟಿ ರಚಿಸಬೇಕು' ಎಂದು ಭಾರತೀಯ ರಾಷ್ಟ್ರೀಯ ಲೋಕದಳ ಒತ್ತಾಯಿಸಿದೆ.

'ಪ್ರಕರಣದ ಕುರಿತು ನಿಷ್ಪಕ್ಷಪಾತ ತನಿಖೆ ಕೈಗೊಳ್ಳಬೇಕು' ಎಂದು ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಆಗ್ರಹಿಸಿದ್ದಾರೆ.

ಒಲಿಂಪಿಯನ್ ಹಾಕಿಪಟುವಾಗಿರುವ ಸಂದೀಪ್ ಅವರು ಇದೇ ಮೊದಲ ಬಾರಿಗೆ ಶಾಸಕರಾಗಿ ಚುನಾಯಿತರಾಗಿದ್ದರು.

'ನನ್ನ ಖುಷಿಪಡಿಸಿದರೆ ನಿನ್ನನ್ನು ಸಂತೋಷವಾಗಿಡುವೆ'

'ಜಿಮ್‌ನಲ್ಲಿ ನನ್ನನ್ನು ನೋಡಿದ್ದ ಸಂದೀಪ್ ಅವರು ಇನ್‌ಸ್ಟಾಗ್ರಾಂ ಮೂಲಕ ಸಂಪರ್ಕಿಸಿದ್ದರು. ಭೇಟಿಯಾಗುವಂತೆ ಪದೇ ಪದೇ ಒತ್ತಾಯಿಸುತ್ತಿದ್ದರು. ಒಮ್ಮೆ ಇನ್‌ಸ್ಟಾಗ್ರಾಂನಲ್ಲಿ ಸಂದೇಶ ಕಳುಹಿಸಿದ್ದ ಅವರು ರಾಷ್ಟ್ರೀಯ ಕ್ರೀಡಾಕೂಟಕ್ಕೆ ಸಂಬಂಧಿಸಿದ ನನ್ನ ಪ್ರಮಾಣ ಪತ್ರ ಬಾಕಿ ಇರುವುದಾಗಿ ಹೇಳಿದ್ದರು.
ಈ ವಿಚಾರವಾಗಿ ಮಾತನಾಡಬೇಕಿರುವುದರಿಂದ ತನ್ನನ್ನು ಭೇಟಿಯಾಗುವಂತೆ ಸೂಚಿಸಿದ್ದರು. ಹೀಗಾಗಿ ಅವರ ಭೇಟಿಗೆ ಒಪ್ಪಿದ್ದೆ' ಎಂದು ಕೋಚ್, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

'ಕೆಲ ದಾಖಲೆಗಳೊಂದಿಗೆ ಸಂದೀಪ್ ಅವರ ನಿವಾಸಕ್ಕೆ ತೆರಳಿದ್ದೆ. ನನ್ನನ್ನು ಕಂಡೊಡನೆ ಕ್ಯಾಬಿನ್‌ಗೆ ಕರೆದೊಯ್ದಿದ್ದ ಅವರು ನನ್ನ ಕೈಯಲ್ಲಿದ್ದ ದಾಖಲೆಗಳನ್ನು ಪಡೆದು ಟೇಬಲ್‌ವೊಂದರ ಮೇಲೆ ಇಟ್ಟಿದ್ದರು. ಬಳಿಕ ಕೈಯಿಂದ ಪಾದ ಮುಟ್ಟಿದ್ದರು. ಮೊದಲ ನೋಟದಲ್ಲೇ ನೀನು ಇಷ್ಟವಾಗಿಬಿಟ್ಟೆ. ನನ್ನನ್ನು ಖುಷಿಪಡಿಸಿದರೆ ನಿನ್ನನ್ನು ಸಂತೋಷವಾಗಿಡುತ್ತೇನೆ ಎಂದು ಹೇಳಿದ್ದರು' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಪಾದದ ಮೇಲಿಟ್ಟಿದ್ದ ಕೈ ಸರಿಸಿ ಹೊರಹೋಗಲು ಯತ್ನಿಸಿದಾಗ ನನ್ನ ಟೀ–ಶರ್ಟ್ ಎಳೆದು ಹರಿದರು. ನಾನು ಅಳಲಾರಂಭಿಸಿದೆ. ನನ್ನ ಆಕ್ರಂದನ ಕೇಳಿ ಮನೆಯಲ್ಲಿದ್ದ ಸಿಬ್ಬಂದಿಯೆಲ್ಲಾ ಸ್ಥಳಕ್ಕೆ ಧಾವಿಸಿ ಬಂದರು. ಆದರೆ ಯಾರೊಬ್ಬರೂ ಸಹಾಯ ಮಾಡಲಿಲ್ಲ' ಎಂದೂ ತಿಳಿಸಿದ್ದಾರೆ.

ಗೃಹ ಸಚಿವರ ಭೇಟಿ ಮಾಡಿದ ಸಂತ್ರಸ್ತೆ

ಸಂತ್ರಸ್ತ ಮಹಿಳಾ ಕೋಚ್ ಭಾನುವಾರ ಹರಿಯಾಣದ ಗೃಹ ಸಚಿವರನ್ನು ಭೇಟಿಯಾಗಿ ದೂರು ಸಲ್ಲಿಸಿದ್ದಾರೆ.
ಎಲ್ಲದಕ್ಕೂ ಒಂದು ಮಿತಿ ಇದೆ. ಕ್ರೀಡಾ ಇಲಾಖೆಯ ಉದ್ಯೋಗಿಯಾಗಿರುವ ತಾನು ಅವರ ಬಳಿ ಹೋಗಲೇಬೇಕಿತ್ತು. ಅಂತಹ ಪರಿಸ್ಥಿತಿಯನ್ನು ಸಚಿವರು ಸೃಷ್ಟಿಸಿದ್ದರು.
ನನ್ನ ಹಾಗೆ ಹಲವರು ಈ ಬಗೆಯ ಹಿಂಸೆ ಅನುಭವಿಸಿದ್ದಾರೆ. ಅದನ್ನು ಹೇಳಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಸಂದೀಪ್ ಅವರನ್ನು ಜೈಲಿಗಟ್ಟದರೆ ಇನ್ನಷ್ಟು ಮಂದಿ ದೂರು ನೀಡಲು ಮುಂದೆ ಬರಲಿದ್ದಾರೆ' ಎಂದು ಸಂತ್ರಸ್ತ ಕೋಚ್ ಹೇಳಿದ್ದಾರೆ.

ತಮ್ಮ ವಿರುದ್ಧ ಮಹಿಳಾ ಕೋಚ್ ಮಾಡಿರುವ ಆರೋಪ ಆಧಾರ ರಹಿತವಾದುದು. ಈ ಕುರಿತು ಸ್ವತಂತ್ರ ತನಿಖೆ ನಡೆಯಲಿ
–**ಸಂದೀಪ್ ಸಿಂಗ್**, ಸಚಿವ

ಮಹಿಳೆಯ ದೂರು ಆಲಿಸಿದ್ದೇನೆ. ಈ ಕುರಿತು ಸಂದೀಪ್ ಸಿಂಗ್ ಹಾಗೂ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ.
ಅನಿಲ್ ವಿಜ್ ಹರಿಯಾಣ ಗೃಹ ಸಚಿವ

ಹಿರಿಯ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ದೂರು ನೀಡಿದ್ದೇನೆ. ಚಂಡೀಗಢ ಪೊಲೀಸರು ನ್ಯಾಯ ಒದಗಿಸುವ ವಿಶ್ವಾಸವಿದೆ
ಮಹಿಳಾ ಕೋಚ್

ಈ ವರ್ಷ 9 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ

ನವದೆಹಲಿ(ಪಿಟಿಐ): ಕರ್ನಾಟಕವೂ ಸೇರಿದಂತೆ 9 ರಾಜ್ಯಗಳಲ್ಲಿ ಈ ವರ್ಷ ವಿಧಾನಸಭಾ ಚುನಾವಣೆಗಳು ನಡೆಯಲಿದ್ದು, 2024ರ ಲೋಕಸಭಾ ಚುನಾವಣೆಗೂ ಮುನ್ನ ನಡೆಯುವ ಈ ಚುನಾವಣೆಗಳನ್ನು ಸೆಮಿಫೈನಲ್ ಎಂದೇ ಪರಿಗಣಿಸಲಾಗಿದೆ.

ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಢ, ತೆಲಂಗಾಣ ಮತ್ತು ಈಶಾನ್ಯ ರಾಜ್ಯಗಳಾದ ನಾಗಾಲ್ಯಾಂಡ್, ತ್ರಿಪುರಾ, ಮೇಘಾಲಯ ಮತ್ತು ಮಿಜೋರಾಂ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಈ ಪೈಕಿ ನಾಗಾಲ್ಯಾಂಡ್, ತ್ರಿಪುರಾ, ಮೇಘಾಲಯದಲ್ಲಿ ವರ್ಷದ ಆರಂಭದಲ್ಲಿ ಅಂದರೆ ಫೆಬ್ರುವರಿ–ಮಾರ್ಚ್‌ನಲ್ಲಿ ಚುನಾವಣೆ ನಡೆಯಲಿದೆ. 224 ಸದಸ್ಯ ಬಲದ ಕರ್ನಾಟಕ ವಿಧಾನಸಭೆಯ ಅವಧಿ ಮೇ 24ರಂದು ಮುಕ್ತಾಯವಾಗಲಿದ್ದು, ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ.

ವರ್ಷದ ಕೊನೆಯಲ್ಲಿ ಮಿಜೋರಾಂ, ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ತೆಲಂಗಾಣ ರಾಜ್ಯಗಳ ವಿಧಾನಸಭಾ ಚುನಾವಣೆ ನಡೆಯಲಿದೆ. ಛತ್ತೀಸಗಢ ಮತ್ತು ಮಧ್ಯಪ್ರದೇಶ ವಿಧಾನಸಭೆಯ ಅವಧಿಯು ಕ್ರಮವಾಗಿ 2024ರ ಜನವರಿ 3 ಮತ್ತು 6ರಂದು ಮುಕ್ತಾಯಗೊಳ್ಳಲಿದೆ. ರಾಜಸ್ಥಾನ ಮತ್ತು ತೆಲಂಗಾಣ ವಿಧಾನಸಭೆಯ ಅವಧಿ ಕ್ರಮವಾಗಿ 2024ರ ಜನವರಿ 14 ಮತ್ತು 16ರಂದು ಮುಕ್ತಾಯವಾಗಲಿದೆ. ಮಿಜೋರಾಂ ವಿಧಾನಸಭೆಯ ಅವಧಿ ಡಿಸೆಂಬರ್ 17ರವರೆಗೂ ಇದೆ. ಈ ಐದು ರಾಜ್ಯಗಳ ಚುನಾವಣೆಯನ್ನು ಒಟ್ಟಿಗೇ ನಡೆಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಈ 9 ರಾಜ್ಯಗಳ ವಿಧಾನಸಭಾ ಚುನಾವಣೆ ಜೊತೆಗೆ ಕೇಂದ್ರಾಡಳಿತ ಪ್ರದೇಶವಾದ ಜಮ್ಮು–ಕಾಶ್ಮೀರ ವಿಧಾನ ಸಭೆ ಚುನಾವಣೆ ಕೂಡ ಈ ವರ್ಷವೇ ನಡೆಯುವ ಸಾಧ್ಯತೆ ಇದೆ. ಜಮ್ಮು ಮತ್ತು ಕಾಶ್ಮೀರ ಚುನಾವಣೆಯನ್ನು 2023ರ ಬೇಸಿಗೆಯಲ್ಲಿ ನಡೆಸಲಾಗುವುದು ಎಂದು ಕಳೆದ ಡಿಸೆಂಬರ್ 9ರಂದು ಮೂಲಗಳು ತಿಳಿಸಿದ್ದವು.

ಭಾರತೀಯ ವಿಜ್ಞಾನ ಕಾಂಗ್ರೆಸ್: ನಾಳೆ ಮೋದಿ ಭಾಷಣ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 3ರಂದು 108ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ (ಐಎಸ್‌ಸಿ) ಅನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಲಿದ್ದಾರೆ ಎಂದು ಪ್ರಧಾನಿ ಕಚೇರಿಯು ಭಾನುವಾರ ತಿಳಿಸಿದೆ.

ಈ ವರ್ಷದ ಐಎಸ್‌ಸಿಯು 'ಮಹಿಳಾ ಸಬಲೀಕರಣದೊಂದಿಗೆ ಸುಸ್ಥಿರ ಅಭಿವೃದ್ಧಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ' ಎನ್ನುವ ಆಶಯವನ್ನು ಹೊಂದಿದೆ. ಜತೆಗೆ ಈ ಸಂಬಂಧ ಚರ್ಚೆಗಳನ್ನೂ ನಡೆಸಲಾಗುವುದು. ಐಎಸ್‌ಸಿಯಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳು ಬೋಧನೆ, ಸಂಶೋಧನೆ ಮತ್ತು ಉದ್ಯಮದ ಉನ್ನತ ಹಂತಗಳಲ್ಲಿ ಮಹಿಳೆಯರ ಸಂಖ್ಯೆಯನ್ನು ಹೆಚ್ಚಿಸುವ ಮಾರ್ಗಗಳನ್ನು ಚರ್ಚಿಸುವರು' ಎಂದೂ ತಿಳಿಸಿದೆ.

1914ರಲ್ಲಿ ಮೊದಲ ಬಾರಿಗೆ ಐಎಸ್‌ಸಿ ಅನ್ನು ಆಯೋಜಿಸಲಾಗಿತ್ತು. ಈ ಬಾರಿಯ 108ನೇ ಅಧಿವೇಶನವು ಮಹಾರಾಷ್ಟ್ರದ ನಾಗ್ಪುರದಲ್ಲಿರುವ ರಾಷ್ಟ್ರಸಂತ ತುಕಾಡೋಜಿ ಮಹಾರಾಜ್ ನಾಗ್ಪುರ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ.

ಐಎಸ್‌ಸಿಯಲ್ಲಿ ಖ್ಯಾತ ಮಹಿಳಾ ವಿಜ್ಞಾನಿಗಳ ಉಪನ್ಯಾಸಗಳೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮಹಿಳೆಯರ ಕೊಡುಗೆಯನ್ನು ಪ್ರದರ್ಶಿಸುವ ವಿಶೇಷ ಕಾರ್ಯಕ್ರಮವೂ ನಡೆಯಲಿದೆ. ಇದರ ಜತೆಗೆ ಮಕ್ಕಳ ವಿಜ್ಞಾನ ಕಾಂಗ್ರೆಸ್, ರೈತರು ಮತ್ತು ಬುಡಕಟ್ಟು ವಿಜ್ಞಾನ ಕಾಂಗ್ರೆಸ್ ಕೂಡಾ ನಡೆಯಲಿದೆ ಎಂದು ಪ್ರಧಾನಿ ಕಚೇರಿಯ ಮೂಲಗಳು ತಿಳಿಸಿವೆ.

ಗ್ರಾನೈಟ್ ಕಲ್ಲು ಬಿದ್ದು ಮೂವರ ಸಾವು

ಮಹಬೂಬಾಬಾದ್ (ತೆಲಂಗಾಣ): ಲಾರಿಯೊಂದರಲ್ಲಿ ಸಾಗಿಸುತ್ತಿದ್ದ ಗ್ರಾನೈಟ್ ಕಲ್ಲುಗಳು ಚಲಿಸುತ್ತಿದ್ದ ಆಟೋರಿಕ್ಷಾವೊಂದರ ಮೇಲೆ ಬಿದ್ದ ಪರಿಣಾಮ ಮೂವರು ಸಾವಿಗೀಡಾದ ಘಟನೆ ತೆಲಂಗಾಣದ ಕುರವಿ ಗ್ರಾಮದಲ್ಲಿ ನಡೆದಿದೆ. 'ಆಟೋರಿಕ್ಷಾದಲ್ಲಿ ಎಂಟು ಜನರು ಪ್ರಯಾಣಿಸುತ್ತಿದ್ದರು. ಇದೇ ವೇಳೆ ಲಾರಿಯ ಮೇಲ್ಭಾಗದಲ್ಲಿದ್ದ ಕೆಲ ಗ್ರಾನೈಟ್ ಕಲ್ಲುಗಳು ಜಾರಿ ಆಟೋರಿಕ್ಷಾದ ಮೇಲೆ ಬಿದ್ದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮತಾಂತರ ನಿಷೇಧಕ್ಕೆ ವಿಎಚ್‌ಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಇಂದೋರ್ (ಪಿಟಿಐ): ಕಾನೂನುಬಾಹಿರ ಮತಾಂತರ ನಿಷೇಧಿಸಲು ಮತ್ತು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತರಲು ಕಠಿಣ ಕಾನೂನು ರೂಪಿಸುವಂತೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಒತ್ತಾಯಿಸಿದೆ.

ಧಾರ್ಮಿಕ ಮೂಲಭೂತವಾದದ ವಿರುದ್ಧ ನಿರ್ಣಯ ಅಂಗೀಕರಿಸಿರುವ ಪರಿಷತ್, ಇದು ವಿಶ್ವದಾದ್ಯಂತ ಭಯೋತ್ಪಾದಕ ದಾಳಿಗಳಿಗೆ ಕಾರಣ ಎಂದು ಹೇಳಿದೆ.

ಭಾನುವಾರ ಮುಕ್ತಾಯವಾದ ವಿಎಚ್‌ಪಿ ಟ್ರಸ್ಟಿಗಳ ಕೇಂದ್ರೀಯ ಮಂಡಳಿ ಮತ್ತು ಆಡಳಿತ ಮಂಡಳಿಯ ಮೂರು ದಿನಗಳ ಸಭೆಯಲ್ಲಿ ಈ ನಿರ್ಣಯ ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಸಲ್ಲಿಸಲಾಯಿತು.

'ಧಾರ್ಮಿಕ ಕಟ್ಟುಪಾಡು- ಅದರ ದುಷ್ಪರಿಣಾಮಗಳು ಮತ್ತು ಪರಿಹಾರ' ಕುರಿತ ಮಹತ್ವದ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಗಿದೆ ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ, ವಕೀಲ ಅಲೋಕ್ ಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

'ಧಾರ್ಮಿಕ ಕಟ್ಟುಪಾಡುಗಳ ವಿಷಕಾರಿ ಪರಿಣಾಮಗಳನ್ನು ಎದುರಿಸಲು ಜಾಗತಿಕ ಮಟ್ಟದಲ್ಲಿ ಸಮಗ್ರ ನೀತಿ ರೂಪಿಸಬೇಕಾಗಿದೆ. ಈ ಸಂಕುಚಿತ ಮನೋಭಾವ ಮತ್ತು ಪ್ರತ್ಯೇಕತಾವಾದವನ್ನು ಬೌದ್ಧಿಕ, ಸಾಮಾಜಿಕ ಮತ್ತು ರಾಜಕೀಯ ಮಟ್ಟದಲ್ಲಿ ತಟಸ್ಥಗೊಳಿಸಬೇಕಾಗಿದೆ. ಹಿಂಸಾಚಾರ, ಲೂಟಿ, ಅತ್ಯಾಚಾರ ಮತ್ತು ಕೊಲೆಗಳನ್ನು ಜಿಹಾದ್ ಹೆಸರಿನಲ್ಲಿ ಇಸ್ಲಾಂನ ದೊಡ್ಡ ವರ್ಗ ಅಸ್ತ್ರಗಳಾಗಿ ಬಳಸುತ್ತದೆ. ಈಗ ಇದು ಕೆಲಸ ಮಾಡುವುದಿಲ್ಲ' ಎಂದು ಅವರು ಹೇಳಿದರು.

'ನನ್ನ ಧರ್ಮ ಮಾತ್ರ ಸರಿ, ಇತರರು ಒಪ್ಪಿಕೊಳ್ಳಬೇಕು ಮತ್ತು ಅವರು ಒಪ್ಪದಿದ್ದರೆ, ಅವುಗಳನ್ನು ತೊಡೆದುಹಾಕಲು ನನಗೆ ದೈವಿಕ ಆಜ್ಞೆ ಇದೆ' ಎಂಬ ಕೆಲ ಸಂಪ್ರದಾಯವಾದಿಗಳ ಘೋಷಣೆಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ನಿರ್ಣಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಜಗತ್ತಿನಲ್ಲಿ ನಿತ್ಯ ಅಲ್ಲಲ್ಲಿ ನಡೆಯುತ್ತಿರುವ ಭಯೋತ್ಪಾದಕ ದಾಳಿಗಳಿಗೂ ಈ ಮೂಲಭೂತವಾದಿಗಳೇ ಜವಾಬ್ದಾರರು. 'ಲವ್ ಜಿಹಾದ್' ಮೂಲಕ ಮುಸ್ಲಿಮೇತರ ಮಹಿಳೆಯರ ಮೇಲೆ ನಡೆಯುತ್ತಿರುವ ಅಮಾನವೀಯ ದೌರ್ಜನ್ಯಗಳು ಮತ್ತು 'ಸರ್ ತಾನ್ ಸೆ ಜುದಾ ಗ್ಯಾಂಗ್'ನ (ಶಿರಚ್ಛೇದನ ಗ್ಯಾಂಗ್) ಜಿಹಾದಿ ಸಕ್ರಿಯತೆ ಈ ಧಾರ್ಮಿಕ ಮೂಲಭೂತವಾದದ ಘೋರ ಮುಖಗಳಾಗಿವೆ ಎಂದು ವಿಎಚ್‌ಪಿ ತಿಳಿಸಿದೆ.

ಶಿವಸೇನಾದ ಮುಖವಾಣಿ 'ಸಾಮ್ನಾ'ದಲ್ಲಿ ಸಂಜಯ್ ರಾವುತ್ ಅಭಿಪ್ರಾಯ

'ರಾಹುಲ್ ವರ್ಚಸ್ಸಿನಿಂದ ಬದಲಾವಣೆ'

ಮುಂಬೈ (ಪಿಟಿಐ): ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿಯವರ ನಾಯಕತ್ವಕ್ಕೆ ಕಳೆದ ವರ್ಷ ಹೊಸ ವರ್ಚಸ್ಸು ತಂದುಕೊಟ್ಟಿತು. ಅದು ಈ ವರ್ಷವೂ ಮುಂದುವರಿದರೆ, 2024ರ ಸಾರ್ವತ್ರಿಕ ಚುನಾವಣೆಗಳಲ್ಲಿ ದೇಶದಲ್ಲಿ ರಾಜಕೀಯ ಬದಲಾವಣೆ ಆಗಬಹುದು ಎಂದು ಶಿವಸೇನಾ (ಉದ್ಧವ್ ಬಣ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಶಿವಸೇನಾದ ಮುಖವಾಣಿ 'ಸಾಮ್ನಾ'ದಲ್ಲಿ ತಮ್ಮ ವಾರದ ಅಂಕಣ 'ರೋಖ್‌ಠೋಕ್'ನಲ್ಲಿ ರಾವುತ್ ಅವರು 'ರಾಹುಲ್ ಗಾಂಧಿಯವರು ದೇಶದ ಜನರನ್ನು ಸಂಪರ್ಕಿಸಲು ಕನ್ಯಾಕುಮಾರಿಯಿಂದ ಶ್ರೀನಗರದವರೆಗೆ ಹಮ್ಮಿಕೊಂಡಿರುವ 'ಭಾರತ್ ಜೋಡೊ ಯಾತ್ರೆ' ಕಳೆದ ವರ್ಷ ಯಶಸ್ವಿಯಾಗಿದೆ. ಈ ತಿಂಗಳ ಕೊನೆಯಲ್ಲಿ ಶ್ರೀನಗರದಲ್ಲಿ ಈ ಯಾತ್ರೆ ಮುಕ್ತಾಯವಾಗುವ ಸಾಧ್ಯತೆ ಇದೆ. ರಾಹುಲ್ ತಮ್ಮ ಯಾತ್ರೆಯ ಉದ್ದೇಶ–ಗುರಿ ಸಾಧಿಸುತ್ತಾರೆ. 2022ರ ವರ್ಷವು ರಾಹುಲ್ ಗಾಂಧಿಯವರ ನಾಯಕತ್ವಕ್ಕೆ ಹೊಸ ಹೊಳಪು ಮತ್ತು ವರ್ಚಸ್ಸು ನೀಡಿದೆ. ಈ ಬೆಳವಣಿಗೆ 2023ರಲ್ಲೂ ಉಳಿದರೆ, 2024ರ ಸಾಮಾನ್ಯ ಚುನಾವಣೆಗಳಲ್ಲಿ ದೇಶವು ರಾಜಕೀಯ ಬದಲಾವಣೆ ಕಾಣಲಿದೆ' ಎಂದು ರಾವುತ್ ಭವಿಷ್ಯ ನುಡಿದಿದ್ದಾರೆ.

ರಾಮ ಮಂದಿರದ ಸಮಸ್ಯೆ ಬಗೆಹರಿದಿದೆ. ಹಾಗಾಗಿ, ಇನ್ನು ಈ ವಿಷಯ ಮುಂದಿಟ್ಟುಕೊಂಡು ಮತ ಗಳಿಸಲು ಬಿಜೆಪಿಗೆ ಸಾಧ್ಯವಿಲ್ಲ. ಆದ್ದರಿಂದ 'ಲವ್ ಜಿಹಾದ್' ಎಂಬ ಹೊಸ ಆಯಾಮವನ್ನು ಇದಕ್ಕಾಗಿ ಅನ್ವೇಷಿಸಲಾಗುತ್ತಿದೆ.

'ಸಂಕುಚಿತ ಮನೋಭಾವ ದೂರವಿಡಬೇಕಾಗಿದೆ ಎಂದು ಪ್ರಧಾನಿ ಮೋದಿ ಅವರು ತಮ್ಮ ಪಕ್ಷದವರಿಗೆ ಹೇಳುವ ಅಗತ್ಯವಿದೆ. ಸಂಕುಚಿತ ಮನೋಭಾವವು ಬಿಜೆಪಿಯ ಆಡಳಿತದಲ್ಲಿ ಅಹಂಕಾರವಾಗಿ ಬೆಳೆದಿದೆ. ವಿರೋಧ ಪಕ್ಷಗಳ ಅಸ್ತಿತ್ವ ಮತ್ತು ಹಕ್ಕುಗಳನ್ನು ಅಂಗೀಕರಿಸಲು ಅವರು ಬಯಸುತ್ತಿಲ್ಲ. ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಒಡಕು ಮೂಡಿಸುವುದು ಹೊಸ ವಿಭಜನೆಗೆ ದಾರಿ ಮಾಡಿಕೊಡುತ್ತದೆ. ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದ್ವೇಷ ಮತ್ತು ವಿಭಜನೆಯ ಬೀಜ ಬಿತ್ತಬಾರದು' ಎಂದೂ ಅವರು ಹೇಳಿದ್ದಾರೆ.

'ಹಿಂದೂಗಳನ್ನು ಜಾಗೃತಗೊಳಿಸುವುದು ಬಿಜೆಪಿಯ ಕಾರ್ಯಸೂಚಿ. ಆದರೆ, ಇದು ಸಮಾಜದಲ್ಲಿ ದ್ವೇಷ ಮತ್ತು ವಿಭಜನೆ ಸೃಷ್ಟಿಸುವುದು ಎಂದರ್ಥವಲ್ಲ. ನಿರುದ್ಯೋಗ ಮತ್ತು ಬೆಲೆ ಏರಿಕೆಯಂತಹ ಸಮಸ್ಯೆಗಳನ್ನು ಬದಿಗೆ ಸರಿಸಲಾಗಿದೆ' ಎಂದು ಅವರು ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ.

ಕಾರಿನಡಿ ಸಿಲುಕಿ 4 ಕಿ.ಮೀ ಸಾಗಿದ ಯುವತಿಯ ಶವ

ನವದೆಹಲಿ (ಪಿಟಿಐ): ಸ್ಕೂಟಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದ 20 ವರ್ಷದ ಯುವತಿಯೊಬ್ಬರು ಮೃತಪಟ್ಟಿದ್ದು, ಕಾರಿನಡಿ ಸಿಲುಕಿದ್ದ ಆಕೆಯ ಮೃತದೇಹವನ್ನು ಸುಮಾರು 4 ಕಿ.ಮೀ.ವರೆಗೂ ಎಳೆದೊಯ್ದಿರುವ ಘಟನೆ ದೆಹಲಿಯ ಹೊರಭಾಗದ ಸುಲ್ತಾನ್‌ಪುರಿಯಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

'ಘಟನೆ ಸಂಬಂಧ ಮಾರುತಿ ಬಲೆನೊ ಕಾರಿನಲ್ಲಿದ್ದ ಐವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ರಸ್ತೆಯ ಮೇಲೆ ಯುವತಿಯ ಮೃತದೇಹ ನಗ್ನಾವಸ್ಥೆಯಲ್ಲಿ ಬಿದ್ದಿರುವ, ಆಕೆಯ ಕಾಲುಗಳು ಮುರಿದಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾನುವಾರ ಹರಿದಾಡಿದೆ.

'ಕುತುಬ್‌ಗಢ ಪ್ರದೇಶದತ್ತ ಹೊರಟಿದ್ದ ಕಾರಿನಡಿ ಯುವತಿಯ ಮೃತದೇಹ ಸಿಲುಕಿತ್ತು. ರೋಹಿಣಿ ಜಿಲ್ಲೆಯ ಖಂಜಾವಲಾ ಪೊಲೀಸ್ ಠಾಣೆಗೆ ಬೆಳಿಗ್ಗೆ 3.24ರ ಸುಮಾರಿಗೆ ಈ ಕುರಿತ ಮಾಹಿತಿ ಲಭಿಸಿತ್ತು. ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮಂಗೋಲ್ ಪುರಿಯಲ್ಲಿರುವ ಸಂಜಯ್ ಗಾಂಧಿ ಸ್ಮಾರಕ ಆಸ್ಪತ್ರೆಗೆ ರವಾನಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಯುವತಿಯ ಕಾಲು ಕಾರಿನ ಚಕ್ರವೊಂದರಲ್ಲಿ ಸಿಲುಕಿಕೊಂಡಿತ್ತು. ಆಕೆಯ ಮೃತದೇಹವನ್ನು ಸುಮಾರು 4 ಕಿ.ಮೀ. ವರೆಗೂ ಎಳೆದೊಯ್ಯಲಾಗಿದೆ. ಈ ಸಂಬಂಧ ದೀಪಕ್ ಖನ್ನಾ (26), ಅಮಿತ್ ಖನ್ನಾ (25), ಕೃಷ್ಣಾ (27), ಮಿಥುನ್ (26) ಮತ್ತು ಮನೋಜ್ ಮಿತ್ತಲ್ ಎಂಬುವರನ್ನು ಬಂಧಿಸಲಾಗಿದೆ. ಇವರ ವಿರುದ್ಧ ಐಪಿಸಿ ಸೆಕ್ಷನ್ 279 ಮತ್ತು 304–ಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಡಿಸಿಪಿ ಹರೇಂದ್ರಕುಮಾರ್ ಸಿಂಗ್ ಹೇಳಿದ್ದಾರೆ.

'ಚಾಲಕ ದೀಪಕ್‌ನಿಂದ ರಕ್ತದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ. ಆತ ಮದ್ಯ ಸೇವಿಸಿದ್ದನೊ ಇಲ್ಲವೊ ಎಂಬುದು ವರದಿ ಬಂದ ಬಳಿಕ ಗೊತ್ತಾಗಲಿದೆ. ಯುವತಿಯು ಮದುವೆ ಹಾಗೂ ಇತರೆ ಸಮಾರಂಭಗಳಲ್ಲಿ ಕೆಲಸ ಮಾಡುತ್ತಿದ್ದಳು. ಎಂದಿನಂತೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ' ಎಂದು ತಿಳಿಸಿದ್ದಾರೆ.

'ಯುವತಿಯ ಮೃತದೇಹವನ್ನು ಕೆಲ ಕಿಲೊ ಮೀಟರ್‌ಗಳವರೆಗೆ ಎಳೆದೊಯ್ಯಲಾಗಿದ್ದು, ಅದು ನಗ್ನಾವಸ್ಥೆಯಲ್ಲಿ ಪತ್ತೆಯಾಗಿದೆ. ಇದು ಭಯಾನಕ ಘಟನೆ. ಹೀಗಾಗಿ ಸಮಿತಿ ಎದುರು ವಿಚಾರಣೆಗೆ ಹಾಜರಾಗುವಂತೆ ದೆಹಲಿ ಪೊಲೀಸರಿಗೆ ಸಮನ್ಸ್ ಜಾರಿಗೊಳಿಸಲಾಗಿದೆ' ಎಂದು ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಮುಖ್ಯಸ್ಥೆ ಸ್ವಾತಿ ಮಳಿವಾಲ್ ಟ್ವೀಟ್ ಮಾಡಿದ್ದಾರೆ.

ಭಾರತ ಕ್ರಿಕೆಟ್ ತಂಡದ ಆಯ್ಕೆ ಮಾನದಂಡಗಳ ಪರಿಷ್ಕರಣೆ; ಫಿಟ್‌ನೆಸ್‌ಗೆ ಬಿಸಿಸಿಐ ಆದ್ಯತೆ

ಯೋ ಯೋ ಟೆಸ್ಟ್ ಕಡ್ಡಾಯ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಯ್ಕೆ ಪ್ರಕ್ರಿಯೆಯ ಮಾನದಂಡಗಳಲ್ಲಿ ಯೋ ಯೋ ಫಿಟ್‌ನೆಸ್ ಪರೀಕ್ಷೆಯನ್ನು ಮರಳಿ ಸೇರ್ಪಡೆ ಮಾಡಲಾಗಿದೆ.

ಭಾನುವಾರ ಇಲ್ಲಿ ನಡೆದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಸಭೆಯಲ್ಲಿ ಈ ವಿಷಯವನ್ನು ತೀರ್ಮಾನಿಸಲಾಯಿತು. ಹೋದ ವರ್ಷದ ನವೆಂಬರ್‌ನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಭಾರತ ತಂಡವು ಸೋತಿತ್ತು. ಆಗಲೇ ಈ ಸಭೆ ನಡೆಸಲು ಯೋಜಿಸಲಾಗಿತ್ತು.

ಸಭೆಯಲ್ಲಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ, ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಕೋಚ್ ರಾಹುಲ್ ದ್ರಾವಿಡ್, ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಮತ್ತು ಆಯ್ಕೆ ಸಮಿತಿಯ ಚೇತನ್ ಶರ್ಮಾ ಹಾಜರಿದ್ದರು.

ಆಯ್ಕೆ ಪ್ರಕ್ರಿಯೆಯಲ್ಲಿ ಯೋ ಯೋ ಟೆಸ್ಟ್ ಜೊತೆಗೆ ಡೆಕ್ಸಾ (ಬೋನ್ ಸ್ಕ್ಯಾನ್ ಟೆಸ್ಟ್) ಅಥವಾ ಮೂಳೆ ಸಾಂದ್ರತೆ ಪರೀಕ್ಷೆ ಕೂಡ ಸೇರ್ಪಡೆಗೊಳಿಸಲಾಗಿದೆ.

'ಮುಂದಿನ ವೇಳಾಪಟ್ಟಿ ಮತ್ತು ಐಸಿಸಿ ವಿಶ್ವಕಪ್ 2023 ಟೂರ್ನಿಗಳಿಗಾಗಿ ತಂಡವನ್ನು ಸಿದ್ಧಗೊಳಿಸುವ ದೃಷ್ಟಿಯಿಂದ ಎನ್‌ಸಿಎ ಮತ್ತು ಐಪಿಎಲ್ ಫ್ರ್ಯಾಂಚೈಸಿಗಳು ಜೊತೆಗೂಡಿ ಕಾರ್ಯನಿರ್ವಹಿಸಲಿವೆ. ಐಪಿಎಲ್ 2023ರ ಟೂರ್ನಿಯಲ್ಲಿ ಆಡುವ ಆಟಗಾರರಿಗೂ ಇಲ್ಲಿ ಸಿದ್ಧತೆಯ ಅವಕಾಶ ಸಿಗಲಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಭಾರತ ತಂಡದ ಪ್ರಮುಖ ಆಟಗಾರರು ಪದೇ ಪದೇ ಗಾಯದ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಕಳೆದ ವರ್ಷದಲ್ಲಿ ಮಧ್ಯಮವೇಗಿ ದೀಪಕ್ ಚಾಹರ್, ಜಸ್‌ಪ್ರೀತ್ ಬೂಮ್ರಾ ಸೇರಿದಂತೆ ಕೆಲವು ಆಟಗಾರರು ಗಾಯ ಹಾಗೂ ಶಸ್ತ್ರಚಿಕಿತ್ಸೆಗಳಿಂದಾಗಿ ದೀರ್ಘ ಸಮಯದಿಂದ ತಂಡದಿಂದ ಹೊರಗುಳಿದಿದ್ದಾರೆ.

ಮುಖ್ಯಾಂಶಗಳು

- ಗಾಯದ ಸಮಸ್ಯೆ ನಿಯಂತ್ರಿಸಲು ಕ್ರಮ
- ಮೂಳೆ ಸಾಂದ್ರತೆ ಪರೀಕ್ಷೆ ಕೂಡಾ ಕಡ್ಡಾಯ



ಜಸ್‌ಪ್ರೀತ್ ಬೂಮ್ರಾ ಮತ್ತು ವಿರಾಟ್ ಕೊಹ್ಲಿ

ಯೋ ಯೋ ಟೆಸ್ಟ್ ಅಂದರೇನು?

ಏರೋಬಿಕ್ ಫಿಟ್‌ನೆಸ್ ಪರೀಕ್ಷೆ ಮಾದರಿ ಇದಾಗಿದೆ. ಇದರಲ್ಲಿ ವೇಗದ ಓಟಕ್ಕೆ ಒತ್ತು ನೀಡಲಾಗಿದೆ. 20 ಮೀಟರ್ ಅಂತರದ ಓಟಗಳನ್ನು ಏರ್ಪಡಿಸಿ, ಪ್ರತಿ ಹಂತದಲ್ಲಿಯೂ ವೇಗವನ್ನು ಹೆಚ್ಚಿಸಲು ಸೂಚಿಸಲಾಗುತ್ತದೆ. ವೇಗ ಸಾಮರ್ಥ್ಯವನ್ನು ದಾಖಲಿಸಿ ಪಾಯಿಂಟ್ ನೀಡಲಾಗುತ್ತದೆ.

ವಿರಾಟ್ ಕೊಹ್ಲಿ ನಾಯಕರಾಗಿದ್ದ ಸಂದರ್ಭದಲ್ಲಿ ಈ ಪದ್ಧತಿ ಅಳವಡಿಸಲಾಗಿತ್ತು. ಆಗ 16.1 ಅಂಕಗಳನ್ನು ಅರ್ಹತಾ ಮಟ್ಟವನ್ನಾಗಿ ಇಡಲಾಗಿತ್ತು. ಈಗ 16.5ಕ್ಕೆ ಹೆಚ್ಚಿಸಲಾಗಿದೆ.

ಕೆಲವು ತಿಂಗಳುಗಳ ಹಿಂದಷ್ಟೇ ಈ ಟೆಸ್ಟ್ ಮಾಡುವುದನ್ನು ಸ್ಥಗಿತಗೊಳಿಸಲಾಗಿತ್ತು.

ಉದಯೋನ್ಮುಖ ಆಟಗಾರರು ದೇಶಿ ಟೂರ್ನಿಯಲ್ಲಿ ಆಡುವುದು ಕಡ್ಡಾಯ

ಐಪಿಎಲ್ (ಇಂಡಿಯನ್ ಪ್ರೀಮಿಯರ್ ಲೀಗ್) ಟೂರ್ನಿಯಲ್ಲಿ ಆಡುವ ಉದ್ದೇಶದಿಂದ ಕೆಂಪು ಚೆಂಡಿನ ಮಾದರಿಯನ್ನು ಆಟಗಾರರು ಕಡೆಗಣಿಸುವಂತಿಲ್ಲ. ಐಪಿಎಲ್‌ನಲ್ಲಿ ಸಿಗುವ ದೊಡ್ಡ ಮೊತ್ತ ಹಣದ ಆಕರ್ಷಣೆಯಿಂದಾಗಿ ಇತ್ತೀಚಿನ ಬಹಳಷ್ಟು ಆಟಗಾರರು ಸೀಮಿತ ಓವರ್‌ಗಳ ಆಟಕ್ಕಷ್ಟೇ ಗಮನ ನೀಡುತ್ತಿದ್ದಾರೆ.

ಆದ್ದರಿಂದ ಅವರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಬೇಕಾದರೆ, ಆಟಗಾರರು ಆಯ್ಕೆ ಪ್ರಕ್ರಿಯೆ ನಡೆಯುವ ವರ್ಷದಲ್ಲಿ ದೇಶಿ ಟೂರ್ನಿಗಳಲ್ಲಿ ಆಡಿರುವುದು ಕಡ್ಡಾಯ.

'ಉದಯೋನ್ಮುಖ ಆಟಗಾರರು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಬೇಕಾದರೇ ದೇಶಿ ಟೂರ್ನಿಗಳಲ್ಲಿ ಆಡಲೇಬೇಕು. ಯಾವುದೇ ಕಾರಣಕ್ಕೂ ಕಡೆಗಣಿಸುವಂತಿಲ್ಲ' ಎಂದು ಶಾ ಹೇಳಿದ್ದಾರೆ.

ಸಭೆಯಲ್ಲಿ ಚೇತನ್ ಶರ್ಮಾ

ಟಿ20 ವಿಶ್ವಕಪ್‌ನಲ್ಲಿ ತಂಡ ಸೋತ ನಂತರ ರಾಷ್ಟ್ರೀಯ ಆಯ್ಕೆ ಸಮಿತಿಯನ್ನು ವಜಾಗೊಳಿಸಲಾಗಿತ್ತು. ಅದರ ಮುಖ್ಯಸ್ಥರಾಗಿದ್ದ ಚೇತನ್ ಶರ್ಮಾ ಅವರು ಈ ಬಿಸಿಸಿಐ ಸಭೆಯಲ್ಲಿ ಭಾಗವಹಿಸಿದ್ದು ಅಚ್ಚರಿ ಮೂಡಿಸಿತು.

ಹೊಸ ಆಯ್ಕೆ ಸಮಿತಿಯನ್ನು ನೇಮಕ ಮಾಡಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಚೇತನ್ ತಮ್ಮ ಪುನರಾಯ್ಕೆ ಬಯಸಿ ಅರ್ಜಿ ಸಲ್ಲಿಸಿದ್ದಾರೆ. ಮಾಜಿ ಆಟಗಾರ ಹರವಿಂದರ್ ಸಿಂಗ್ ಅರ್ಜಿ ಹಾಕಿದ್ದಾರೆ. ಶರ್ಮಾ ಉತ್ತರ ವಲಯದ ಪ್ರತಿನಿಧಿಯಾಗಿ ಮತ್ತೆ ಆಯ್ಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಮುಂದಿನ ವಾರ ಆಯ್ಕೆ ಸಮಿತಿಯನ್ನು ನಿರ್ಧರಿಸುವ ಸಾಧ್ಯತೆ ಇದೆ.

ಪೂರ್ವ ವಲಯದಿಂದ ಅರ್ಜಿ ಹಾಕಿರುವ ಶಿವಸುಂದರ್ ದಾಸ್ ಅವರೂ ಈ ಸ್ಪರ್ಧೆಯಲ್ಲಿದ್ದಾರೆ. ಅವರು 21 ಟೆಸ್ಟ್‌ಗಳನ್ನು ಆಡಿದ್ದಾರೆ. ಪಶ್ಚಿಮ ವಲಯದಿಂದ ಮುಕುಂದ್ ಪರಮಾರ್, ಸಲೀಲ್ ಅಂಕೋಲಾ ಹಾಗೂ ಸಮೀರ್ ಧಿಗೆ ಸ್ಪರ್ಧೆಯಲ್ಲಿದ್ದಾರೆ. ದಕ್ಷಿಣ ವಲಯದಿಂದ ಕನ್ನಡಿಗ ವೆಂಕಟೇಶ್ ಪ್ರಸಾದ್ ಕೂಡ ಕಣದಲ್ಲಿದ್ದಾರೆ. ಅವರು 33 ಟೆಸ್ಟ್ ಆಡಿದ್ದಾರೆ. ದೊಡ್ಡ ಗಣೇಶ್ ಕೂಡಾ ಅರ್ಜಿ ಹಾಕಿದ್ದಾರೆ.



ಫುಟ್‌ಬಾಲ್ ದಿಗ್ಗಜ ಪೆಲೆ ಜನಿಸಿದ ಮನೆಯ ಗೋಡೆಯ ಮೇಲೆ ತಾಯಿ ಸೆಲೆಸ್ಟಿ ಅರಾಂಟೆಸ್, ಅಪ್ಪ ದಂಡಿನೊ ಮತ್ತು ತಮ್ಮ ತಂಗಿಯಿರುವ ಕಲಾಕೃತಿ –ಎಎಫ್‌ಪಿ ಚಿತ್ರ

ಶತಾಯುಷಿ ಸೆಲೆಸ್ಟಿಗೆ ಪುತ್ರ ಪೆಲೆ ನಿಧನ ಗೊತ್ತಿಲ್ಲ!

ಸ್ಯಾಂಟೋಸ್, ಬ್ರೆಜಿಲ್: ದಿಗ್ಗಜ ಫುಟ್‌ಬಾಲ್ ಆಟಗಾರ ಪೆಲೆ ಅವರು ನಿಧನರಾಗಿ ನಾಲ್ಕು ದಿನಗಳು ಕಳೆದಿವೆ. ಮಂಗಳವಾರ ಬ್ರೆಜಿಲ್ ದೇಶದ ಸ್ಯಾಂಟೋಸ್‌ನಲ್ಲಿ ಅವರ ಅಂತ್ಯಕ್ರಿಯೆ ನೆರವೇರಲಿದೆ.

ಆದರೆ ಇದುವರೆಗೂ ಅವರ ತಾಯಿ, ಶತಾಯುಷಿ ಸೆಲೆಸ್ಟಿ ಅರಾಂಟೆಸ್ ಅವರಿಗೆ ಇನ್ನೂ ಪುತ್ರನ ನಿಧನದ ಕುರಿತು ತಿಳಿದಿಲ್ಲ ಎಂದು ಪೆಲೆ ಅವರ ತಂಗಿ ಮರಿಯಾ ಲೂಸಿಯಾ ಡು ನಸಿಮೆಂಟೊ ಹೇಳಿದ್ದಾರೆ.

100 ವರ್ಷದ ಸೆಲೆಸ್ಟಿಯವರನ್ನು ಮರಿಯಾ ಅವರೇ ಬಹುಕಾಲದಿಂದ ಆರೈಕೆ ಮಾಡುತ್ತಿದ್ದಾರೆ. ಸೆಲೆಸ್ಟಿಯವರಿಗೆ ವಯೋಸಹಜವಾದ ಕಾಯಿಲೆ ಹಾಗೂ ಸ್ಮರಣಶಕ್ತಿ ಕುಂದಿದೆ. ಆದ್ದರಿಂದ ಅವರಿಗೆ ಪೆಲೆ ಸಾವಿನ ಕುರಿತು ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದು ಡೇಲಿ ಮೇಲ್ ವರದಿ ಮಾಡಿದೆ.

82 ವರ್ಷದ ಪೆಲೆ ಕ್ಯಾನ್ಸರ್ ಕಾಯಿಲೆಯಿಂದ ಈಚೆಗೆ ನಿಧನರಾದರು.

'ನನಗೆ ಡಬಲ್ ನಷ್ಟ'



ಅರಾವುಜೊ

ಎಎಫ್‌ಪಿ ವರದಿ: 'ಪೆಲೆ ನಿಧನದಿಂದ ನನಗೆ ಡಬಲ್ ನಷ್ಟವಾಗಿದೆ. ಒಬ್ಬ ಸ್ನೇಹಿತ ಮತ್ತು ಒಬ್ಬ ಬಹುಕಾಲದ ಗ್ರಾಹಕನನ್ನು ಕಳೆದುಕೊಂಡಿದ್ದೇನೆ' ಎಂದು ಸುಮಾರು 66 ವರ್ಷಗಳಿಂದ ಪೆಲೆ ಅವರ ಕೇಶವಿನ್ಯಾಸ ಮಾಡುತ್ತಿದ್ದ ಬ್ರೆಜಿಲ್‌ನ ಕ್ಷೌರಿಕ ಜಾವೊ ಅರೌಜೊ (ದಿದಿ) ದುಃಖ ವ್ಯಕ್ತಪಡಿಸಿದ್ದಾರೆ.

'ಬ್ರೆಜಿಲ್‌ನ ಬಹಳ ಹೆಗ್ಗುರುತಾಗಿದ್ದ ಪೆಲೆಯನ್ನು ಕಳೆದುಕೊಂಡಿದ್ದೇವೆ. ಇಡೀ ವಿಶ್ವಕ್ಕೆ ಇದು ನಷ್ಟ. ನನಗಂತೂ ಅತ್ಯಂತ ಗಣ್ಯ ಗ್ರಾಹಕ ಮತ್ತು ಸಹೃದಯೀ ಗೆಳೆಯನ್ನು ಅಗಲಿದ ನೋವು ಕಾಡುತ್ತಿದೆ' ಎಂದು 84 ವರ್ಷದ ದಿದಿ ಹೇಳಿದ್ದಾರೆ.

ಪೆಲೆ ತಮ್ಮ 16ನೇ ವಯಸ್ಸಿನಲ್ಲಿ ಸ್ಯಾಂಟೋಸ್ ಕ್ಲಬ್‌ಗೆ ಆಡಲು ಆರಂಭಿಸಿದ ಸಮಯದಿಂದಲೂ ದಿದಿ ಬಳಿಯೇ ಕ್ಷೌರ ಮಾಡಿಸುತ್ತಿದ್ದರು. ಅವರು ವಿಶ್ವ ಫುಟ್‌ಬಾಲ್‌ನಲ್ಲಿ ಬಹು ಎತ್ತರಕ್ಕೆ ಬೆಳೆದರೂ ತಮ್ಮ ಕೇಶವಿನ್ಯಾಸಕ್ಕೆ ಮಾತ್ರ ದಿದಿ ಬಳಿಯೇ ತೆರಳುತ್ತಿದ್ದರು. ದಿದಿ ತಮ್ಮ ಅಂಗಡಿಯ ತುಂಬ ಪೆಲೆಯವರ ವಿವಿಧ ಚಿತ್ರಗಳು ಪ್ರದರ್ಶಿಸಿದ್ದಾರೆ. ಆ ಸ್ಥಳ ಒಂದು ರೀತಿಯಲ್ಲಿ ಪೆಲೆ ನೆನಪಿನ ಮ್ಯೂಸಿಯನಂತೆ ಗೋಚರಿಸುತ್ತಿದೆ. ಪೆಲೆಯ ಅಭಿಮಾನಿಗಳು ಅಂಗಡಿಗೆ ಭೇಟಿ ನೀಡಿ ವೀಕ್ಷಿಸುತ್ತಿದ್ದಾರೆ.

'ಪೆಲೆ ಇಲ್ಲಿಗೆ ಬಂದಾಗ ಕಿಂಗ್ ಆಗಿರಲಿಲ್ಲ. ಆದರೆ ನಂತರ ಅರಸನಾಗಿ ಬೆಳೆದು, ಅರಸನಾಗಿಯೇ ನಿಧನರಾದರು' ಎಂದು ದಿದಿ ನೆನೆಯುತ್ತಾರೆ.

ರೋಹಿತ್ ನಾಯಕತ್ವ ಅಬಾಧಿತ

ನವದೆಹಲಿ (ಪಿಟಿಐ): ರೋಹಿತ್ ಶರ್ಮಾ ಅವರು ಭಾರತ ಕ್ರಿಕೆಟ್ ತಂಡದ ನಾಯಕರಾಗಿ ಮುಂದುವರಿಯಲಿದ್ದಾರೆ. ಅವರ ಸ್ಥಾನಕ್ಕೆ ಯಾವುದೇ ಕುತ್ತು ಇಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮೂಲಗಳು ಖಚಿಪಡಿಸಿವೆ.

ಅಲ್ಲದೇ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಸಿದ್ಧಗೊಳಿಸಲು ಒಟ್ಟು 20 ಸಂಭವನೀಯ ಆಟಗಾರರನ್ನು ಆಯ್ಕೆ ಮಾಡಲಾಗಿದೆ. ಟೂರ್ನಿಯವರೆಗೂ ನಡೆಯುವ ಎಲ್ಲ ಸರಣಿಗಳಲ್ಲಿ ಈ ಆಟಗಾರರನ್ನು ರೊಟೇಟ್ ಮಾಡಲಾಗುವುದು ಎಂದು ತಿಳಿದುಬಂದಿದೆ.

ಭಾನುವಾರ ಇಲ್ಲಿ ನಡೆದ ಬಿಸಿಸಿಐ ಪುನರ್ವಿಮರ್ಶೆ ಸಭೆಯಲ್ಲಿ ರೋಹಿತ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಭಾಗವಹಿಸಿದ್ದರು. ಇದೇ ತಿಂಗಳು ಶ್ರೀಲಂಕಾ ಎದುರು ನಡೆಯಲಿರುವ ಟಿ20 ತಂಡದ ನಾಯಕತ್ವ ವಹಿಸಲಿರುವ ಹಾರ್ದಿಕ್ ಪಾಂಡ್ಯ ಈ ಸಭೆಯಲ್ಲಿ ಇರಲಿಲ್ಲ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪ್ರವೇಶದ ಹೊಸ್ತಿಲಲ್ಲಿ ತಂಡ ಇದೆ. ಇದೇ ವರ್ಷ ಭಾರತವು ಏಕದಿನ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ರೋಹಿತ್ ಅವರನ್ನೇ ನಾಯಕರನ್ನಾಗಿ ಮುಂದುವರಿಸಲು ಬಿಸಿಸಿಐ ನಿರ್ಧರಿಸಿದೆ ಎನ್ನಲಾಗಿದೆ.



ರೋಹಿತ್ ಶರ್ಮಾ

'ರೋಹಿತ್ ನಾಯಕತ್ವದ ಭವಿಷ್ಯದ ಕುರಿತು ಯಾವುದೇ ಮಾತುಕತೆಗಳು ನಡೆದಿಲ್ಲ. ಏಕದಿನ ಹಾಗೂ ಟೆಸ್ಟ್ ಮಾದರಿಯಲ್ಲಿ ಅವರೇ ಮುಂದುವರಿಯುವರು. ಅವರ ದಾಖಲೆಗಳು ಉತ್ತಮವಾಗಿವೆ' ಎಂದು ಮೂಲಗಳು ಸ್ಪಷ್ಟಪಡಿಸಿವೆ.

'ಅಭ್ಯಾಸ ಪಂದ್ಯ ಅನಿವಾರ್ಯವಲ್ಲ'

ಸಿಡ್ನಿ (ಪಿಟಿಐ): ವಿದೇಶ ಪ್ರವಾಸದ ವೇಳೆ ಅಭ್ಯಾಸ ಪಂದ್ಯ ಆಡುವುದಿಲ್ಲ ಎಂಬ ನೀತಿಯನ್ನು ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಅನುಸರಿಸುತ್ತಿದೆ. ಈ ನೀತಿಯು ಭಾರತ ಪ್ರವಾಸದ ವೇಳೆ ತಂಡಕ್ಕೆ ಅನುಕೂಲಕರಾಗಿ ಪರಿಣಮಿಸಬಹುದು ಎಂದು ಕೋಚ್ ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ಹೇಳಿದ್ದಾರೆ.

ಭಾರತದಲ್ಲಿ ನಡೆಯಲಿರುವ ಬಾರ್ಡರ್– ಗಾವಸ್ಕರ್ ಟ್ರೋಫಿಗೆ ಮುನ್ನ ಆಸ್ಟ್ರೇಲಿಯಾ ಯಾವುದೇ ಅಭ್ಯಾಸ ಪಂದ್ಯ ಆಡುವುದಿಲ್ಲ. ಈ ಸರಣಿ ಫೆ.9 ರಂದು ಆರಂಭವಾಗಲಿದೆ. ಸರಣಿಗೆ ಕೇವಲ ಒಂದು ವಾರ ಮುಂಚಿತವಾಗಿ ಆಸ್ಟ್ರೇಲಿಯಾ ತಂಡ ಭಾರತಕ್ಕೆ ಬರಲಿದೆ.

'ಅಭ್ಯಾಸ ಪಂದ್ಯವನ್ನು ಆಡಲು ಹಲವು ದಿನ ಮುಂಚಿತವಾಗಿ ಬಂದರೆ ಆಟಗಾರರ ಮೇಲಿನ ಒತ್ತಡ ಹೆಚ್ಚುತ್ತದೆ. ಸರಣಿ ಆರಂಭದ ವೇಳೆಗಾಗಲೇ ಅವರ ಉತ್ಸಾಹ ಕಡಿಮೆಯಾಗಿರುತ್ತದೆ. ಅದರ ಬದಲು ಕೆಲವೇ ದಿನಗಳು ಇರುವಾಗ ಬಂದು ನೇರವಾಗಿ ಸರಣಿಯಲ್ಲಿ ಆಡಿದರೆ ಆಟಗಾರರಲ್ಲಿ ಹುಮ್ಮಸ್ಸು ತಾಜಾ ಆಗಿರುತ್ತದೆ' ಎಂದು ನುಡಿದರು.

ಪ್ರಧಾನ ಸುತ್ತಿಗೆ ರಾಮಕುಮಾರ್

ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿ: ಯೂಕಿ ಭಾಂಬ್ರಿಗೆ ನಿರಾಸೆ

ಪುಣೆ (ಪಿಟಿಐ): ಭಾರತದ ರಾಮಕುಮಾರ್ ರಾಮನಾಥನ್ ಅವರು ಇಲ್ಲಿ ನಡೆಯುತ್ತಿರುವ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಪ್ರಧಾನ ಸುತ್ತು ಪ್ರವೇಶಿಸಿದರು. ಆದರೆ ಯೂಕಿ ಭಾಂಬ್ರಿಗೆ ನಿರಾಸೆ ಉಂಟಾಯಿತು.

ಭಾನುವಾರ ನಡೆದ ಅರ್ಹತಾ ಸುತ್ತಿನ ಎರಡನೇ ಹಾಗೂ ಕೊನೆಯ ಪಂದ್ಯದಲ್ಲಿ ರಾಮಕುಮಾರ್ 6–3, 7–5 ರಲ್ಲಿ ಇಟಲಿಯ ಮಟಿಯಾ ಬೆಲ್ಲೂಚಿ ಅವರನ್ನು ಮಣಿಸಿದರು. ಆಕರ್ಷಕ ಆಟವಾಡಿದ ರಾಮನಾಥನ್ ಒಂದೂವರೆ ಗಂಟೆಯ ಸೆಣಸಾಟದ ಬಳಿಕ ಗೆದ್ದರು.

ಆದರೆ ಯೂಕಿ ಅವರು 1–6, 4–6 ರಲ್ಲಿ ಕಳೆದ ಬಾರಿಯ ಸೆಮಿಫೈನಲಿಸ್ಟ್ ಸ್ವೀಡನ್‌ನ ಎಲಿಯಾಸ್ ಯೆಮೆರ್ ಕೈಯಲ್ಲಿ ಪರಾಭವಗೊಂಡರು. ಭಾರತದ ಅನುಭವಿ ಆಟಗಾರ ಮೊದಲ ಸೆಟ್‌ನಲ್ಲಿ ಒಂದು ಗೇಮ್ ಮಾತ್ರ ಗೆದ್ದರು. ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಲು ಪ್ರಯತ್ನಿಸಿದರೂ ಎದುರಾಳಿ ಅವಕಾಶ ನೀಡಲಿಲ್ಲ.



ಪ್ರಧಾನ ಸುತ್ತು ಪ್ರವೇಶಿಸಿದ ರಾಮಕುಮಾರ್ ರಾಮನಾಥನ್

ಈ ಪಂದ್ಯ ಒಂದು ಗಂಟೆ 12 ನಿಮಿಷ ನಡೆಯಿತು.

ಸಿಂಗಲ್ಸ್ ವಿಭಾಗದ ಅರ್ಹತಾ ಸುತ್ತಿನಲ್ಲಿ ಕಣದಲ್ಲಿದ್ದ ಭಾರತದ ಇತರ ಆಟಗಾರರಾದ ಪ್ರಜ್ಞೇಶ್ ಗುಣೇಶ್ವರನ್, ಸಿದ್ಧಾರ್ಥ್ ರಾವತ್ ಮತ್ತು ಆದಿತ್ಯ ಬಾಲಶೇಖರ್ ಅವರು ಮೊದಲ ಸುತ್ತಿನಲ್ಲೇ ಸೋತಿದ್ದರು.

ಅಮೆರಿಕ ಓಪನ್ ಮಾಜಿ ಚಾಂಪಿಯನ್, ಹಾಗೂ ವಿಶ್ವದ 17ನೇ ರ‍್ಯಾಂಕ್‌ನ ಆಟಗಾರ ಕ್ರೊವೇಷ್ಯಾದ ಮರಿನ್ ಸಿಲಿಚ್ ಅವರಿಗೆ ಇಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದೆ. ಅವರಿಗೆ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿದೆ.

ದಕ್ಷಿಣ ಏಷ್ಯಾದ ಏಕೈಕ ಎಟಿಪಿ 250 ಟೂರ್ನಿಯನ್ನು ಮಹಾರಾಷ್ಟ್ರ ಟೆನಿಸ್ ಸಂಸ್ಥೆಯು ಆಯೋಜಿಸಿದ್ದು, ವಿಶ್ವ ರ‍್ಯಾಂಕಿಂಗ್‌ನಲ್ಲಿ 100ರ ಒಳಗಿನ ಸ್ಥಾನದಲ್ಲಿರುವ 17 ಆಟಗಾರರು ಪಾಲ್ಗೊಂಡಿದ್ದಾರೆ.

ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಅವರು ಡಬಲ್ಸ್ ವಿಭಾಗದಲ್ಲಿ ಕಣಕ್ಕಿಳಿಯಲಿದ್ದು, ನೆದರ್ಲೆಂಡ್ಸ್‌ನ ವ್ಯಾನ್ ಡಿ ಜಾಂಡ್‌ಶಪ್ ಅವರ ಜೊತೆ ಆಡಲಿದ್ದಾರೆ.

ಮುಖ್ಯಾಂಶಗಳು

- ಇಟಲಿಯ ಮಟಿಯಾ ಬೆಲ್ಲೂಚಿ ವಿರುದ್ಧ ಗೆಲುವು
- ಇಂದಿನಿಂದ ಪ್ರಧಾನ ಸುತ್ತಿನ ಪಂದ್ಯ
- ಮರಿನ್ ಸಿಲಿಚ್‌ಗೆ ಅಗ್ರಶ್ರೇಯಾಂಕ

ಟ್ರಯಲ್ಸ್: ಹಿಂದೆ ಸರಿದ ಸೈನಾ

ನವದೆಹಲಿ (ಪಿಟಿಐ): ಒಲಿಂಪಿಯನ್ ಸೈನಾ ನೆಹ್ವಾಲ್ ಫೆಬ್ರುವರಿಯಲ್ಲಿ ದುಬೈನಲ್ಲಿ ನಡೆಯಲಿರುವ ಏಷ್ಯನ್ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಆಡದಿರಲು ತೀರ್ಮಾನಿಸಿದ್ದಾರೆ.

ಜ.2 ಮತ್ತು 3 ರಂದು ನಡೆಯಲಿರುವ ಟ್ರಯಲ್ಸ್‌ಗೆ ಸೈನಾ ನೆಹ್ವಾಲ್, ಆಕರ್ಷಿ ಕಶ್ಯಪ್ ಮತ್ತು ಮಾಳವಿಕಾ ಬನ್ಸೋದ್ ಅವರ ಹೆಸರನ್ನು ಅಂತಿಮಗೊಳಿಸಲಾಗಿತ್ತು. ಸಿಂಗಲ್ಸ್ ವಿಭಾಗದಲ್ಲಿ ಪಿ.ವಿ.ಸಿಂಧು ನೇರ ಪ್ರವೇಶ ಗಿಟ್ಟಿಸಿದ್ದು, ಎರಡನೇ ಆಟಗಾರ್ತಿಯ ಆಯ್ಕೆಗೆ ಟ್ರಯಲ್ಸ್ ನಡೆಸಲು ಆಯ್ಕೆ ಸಮಿತಿ ತೀರ್ಮಾನಿಸಿತ್ತು. ಆದರೆ ಸೈನಾ ಮತ್ತು ಮಾಳವಿಕಾ ಹಿಂದೆ ಸರಿದಿದ್ದಾರೆ.

'ಟ್ರಯಲ್ಸ್‌ಗೆ ತಾವು ಲಭ್ಯವಿಲ್ಲ ಎಂದು ಇಬ್ಬರು ಆಟಗಾರ್ತಿಯರೂ ಭಾರತ ಬ್ಯಾಡ್ಮಿಂಟನ್ ಸಂಸ್ಥೆಗೆ (ಬಿಎಐ) ಮಾಹಿತಿ ನೀಡಿದ್ದಾರೆ. ಹಾಗಾಗಿ ಅಶ್ಮಿತಾ ಚಾಲಿಹಾ ಅವರನ್ನು ಟ್ರಯಲ್ಸ್‌ಗೆ ಆಹ್ವಾನಿಸಿದ್ದೇವೆ. ಇನ್ನೂ ಕೆಲವು ಸ್ಪರ್ಧಿಗಳು ಟ್ರಯಲ್ಸ್‌ನಿಂದ ಹಿಂದೆ ಸರಿದಿದ್ದಾರೆ' ಎಂದು ಬಿಎಐ ಮೂಲಗಳು ಹೇಳಿವೆ.

ಸೈನಾ ಮತ್ತು ಮಾಳವಿಕಾ ಅವರ ಅನುಪಸ್ಥಿತಿಯಲ್ಲಿ ಆಕರ್ಷಿ ಮತ್ತು ಅಶ್ಮಿತಾ ನಡುವೆ ನೇರ ಪೈಪೋಟಿ ನಡೆಯಲಿದೆ.



ಸೈನಾ ನೆಹ್ವಾಲ್

ಸೈನಾ ಅವರು 2022 ರಲ್ಲಿ ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದರು. ಗಾಯದಿಂದ ಬಳಲಿದ್ದರಿಂದ, ಕೆಲವೊಂದು ಟೂರ್ನಿಗಳಲ್ಲಿ ಪಾಲ್ಗೊಂಡಿರಲಿಲ್ಲ. ಇದರಿಂದ ವಿಶ್ವ ರ‍್ಯಾಂಕಿಂಗ್‌ನಲ್ಲಿ 31ನೇ ಸ್ಥಾನಕ್ಕೆ ಕುಸಿತ ಕಂಡಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಹೊಂದಿರುವ ಸ್ಥಾನವನ್ನು ಅಧರಿಸಿಕೊಂಡು ಆಯ್ಕೆ ಸಮಿತಿಯು ಸಿಂಗಲ್ಸ್ ವಿಭಾಗದಲ್ಲಿ ಲಕ್ಷ್ಯ ಸೇನ್, ಎಚ್.ಎಸ್.ಪ್ರಣಯ್, ಸಿಂಧು ಹಾಗೂ ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಗೆ ಏಷ್ಯನ್ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗೆ ನೇರ ಪ್ರವೇಶ ನೀಡಿದೆ.

ಅಶ್ವಿನಿ ಪೊನ್ನಪ್ಪ ಮತ್ತು ಎನ್.ಸಿಕ್ಕಿ ರೆಡ್ಡಿ ಅವರೂ ಟ್ರಯಲ್ಸ್‌ನಿಂದ ಹಿಂದೆ ಸರಿದಿದ್ದಾರೆ. ಡಬಲ್ಸ್‌ನಲ್ಲಿ ಜತೆಯಾಗಿ ಆಡುತ್ತಿದ್ದ ಇವರು ಕೆಲ ತಿಂಗಳ ಹಿಂದೆ ಬೇರೆಬೇರೆಯಾಗಲು ತೀರ್ಮಾನಿಸಿದ್ದರು.

ಏಷ್ಯನ್ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿಯ ಟೂರ್ನಿ ಈ ಬಾರಿ ನಡೆಯಲಿದೆ. 2017 ರಲ್ಲಿ ಭಾರತ ತಂಡ ಕ್ವಾರ್ಟರ್ ಫೈನಲ್‌ನಲ್ಲಿ 2–3 ರಲ್ಲಿ ಥಾಯ್ಲೆಂಡ್ ಕೈಯಲ್ಲಿ ಸೋತಿತ್ತು. 2019 ರಲ್ಲಿ ನಾಕೌಟ್ ಹಂತ ಪ್ರವೇಶಿಸಲು ವಿಫಲವಾಗಿತ್ತು.

ಹೊಸವರ್ಷಕ್ಕೆ ಜಯದ ಆರಂಭದತ್ತ ಪಾಕಿಸ್ತಾನ, ನ್ಯೂಜಿಲೆಂಡ್ ಚಿತ್ತ

ಕರಾಚಿ (ಎಪಿ): ಆತಿಥೇಯ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಸೋಮವಾರ ಇಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಎರಡು ಪಂದ್ಯಗಳ ಸರಣಿಯ ಕೊನೆಯ ಹಣಾಹಣಿಯೂ ಇದಾಗಿದೆ. ಮೊದಲ ಪಂದ್ಯವು ಡ್ರಾ ಆಗಿತ್ತು. ಆದ್ದರಿಂದ ಈ ಪಂದ್ಯದಲ್ಲಿ ಜಯಿಸುವ ತಂಡಕ್ಕೆ ಸರಣಿ ಕಿರೀಟ ಒಲಿಯಲಿದೆ. ಗೆಲುವಿನೊಂದಿಗೆ ಹೊಸವರ್ಷವನ್ನು ಆರಂಭಿಸುವ ಛಲದಲ್ಲಿ ಉಭಯ ತಂಡಗಳಿವೆ. ಆದ್ದರಿಂದಾಗಿ ಪಂದ್ಯವು ಕುತೂಹಲ ಕೆರಳಿಸಿದೆ.

ಮೊದಲ ಪಂದ್ಯದಲ್ಲಿ ಪಾಕ್ ನಾಯಕ ಬಾಬರ್ ಆಜಂ ಹಾಗೂ ಆಘಾ ಸಲ್ಮಾನ್ ಶತಕ ಸಿಡಿಸಿದ್ದರು. ನ್ಯೂಜಿಲೆಂಡ್ ತಂಡದ ನಿಕಟಪೂರ್ವ ನಾಯಕ ಕೇನ್ ವಿಲಿಯಮ್ಸನ್ ಅಜೇಯ ದ್ವಿಶತಕ ಗಳಿಸಿದ್ದರು. ಟಾಮ್ ಲಥಾಮ್ ಕೂಡ ಶತಕ ಬಾರಿಸಿದ್ದರು. ಆ ಪಂದ್ಯದಲ್ಲಿ ಎರಡೂ ತಂಡಗಳಿಂದ ರನ್‌ಗಳ ಹೊಳೆ ಹರಿದಿತ್ತು. ಆದರೆ, ಫಲಿತಾಂಶ ಹೊರಹೊಮ್ಮಲಿಲ್ಲ.

'ಅಣ್ವಸ್ತ್ರ ಸಾಮರ್ಥ್ಯ ಹೆಚ್ಚಳಕ್ಕೆ ಆದೇಶ'

ಸೋಲ್ (ಎ.ಪಿ): ದೇಶದ ಅಣ್ವಸ್ತ್ರಗಳ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸುವಂತೆ ಉತ್ತರ ಕೊರಿಯಾದ ನಾಯಕ ಕಿಮ್ ಜಾಂಗ್ ಉನ್ ಭಾನುವಾರ ಆದೇಶಿಸಿದ್ದಾರೆ.

ಅಮೆರಿಕ ಜೊತೆಗಿನ ಹಗೆತನದ ಹಿನ್ನೆಲೆಯಲ್ಲಿ ಗುಣಮಟ್ಟ ಮತ್ತು ಪ್ರಮಾಣ ಎರಡೂ ವಿಷಯದಲ್ಲಿ ಹೆಚ್ಚು ಅಣ್ವಸ್ತ್ರಗಳನ್ನು ಹೊಂದುವ ತಮ್ಮ ಪ್ರತಿಪಾದನೆಗೆ ಪೂರಕವಾಗಿ ಈ ಆದೇಶ ಹೊರಬಿದ್ದಿದೆ. ಅಧಿಕ ಸಾಮರ್ಥ್ಯದ ಖಂಡಾಂತರ ಕ್ಷಿಪಣಿ ಅಭಿವೃದ್ಧಿ ಮತ್ತು ದೇಶದ ಪ್ರಥಮ ಕಣ್ಗಾವಲು ಉಪಗ್ರಹ ಉಡಾವಣೆಗೂ ಆದೇಶಿಸಿದ್ದಾರೆ ಎಂದು ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಉತ್ತರ ಕೊರಿಯಾ 2022ರಲ್ಲಿ ದಾಖಲೆ ಮಟ್ಟದಲ್ಲಿ ಶಸ್ತ್ರಾಸ್ತ್ರಗಳ ಪ್ರಯೋಗ ನಡೆಸಿತ್ತು.

ರೋಹಿತ್ ನೇತೃತ್ವದಲ್ಲಿ ವಿಶ್ವಕಪ್ ಆಡಲಿ: ಗಂಭೀರ್

ಹಾರ್ದಿಕ್ ಯಶಸ್ವಿ ನಾಯಕರಾಗಬಲ್ಲರು


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಯಶಸ್ವಿ ನಾಯಕರಾಗಿ ಬೆಳೆಯಬಲ್ಲ ಎಲ್ಲ ಗುಣಗಳನ್ನೂ ಹೊಂದಿದ್ದಾರೆ' ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಗೌತಮ್ ಗಂಭೀರ್ ಅಭಿಪ್ರಾಯಪಟ್ಟರು.

ಮುಂಬರುವ ಭಾರತ– ಶ್ರೀಲಂಕಾ ಕ್ರಿಕೆಟ್ ಸರಣಿಯ ನೇರ ಪ್ರಸಾರದ ಹಕ್ಕು ಹೊಂದಿರುವ ಸ್ಟಾರ್ ಸ್ಪೋರ್ಟ್ಸ್ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಹಾರ್ದಿಕ್ ಅವರಲ್ಲಿ ನಾಯಕತ್ವದ ಗುಣಗಳಿವೆ. ಅದನ್ನು ಅವರು ಐಪಿಎಲ್ ಟೂರ್ನಿಯಲ್ಲಿ ಗುಜರಾತ್ ಟೈಟನ್ಸ್ ತಂಡದ ನಾಯಕರಾಗಿ ತೋರಿಸಿಕೊಟ್ಟಿದ್ದಾರೆ. ಈ ಹಿಂದೆ ಭಾರತ ತಂಡವನ್ನು ಮುನ್ನಡೆಸುವ ಅವಕಾಶ ಲಭಿಸಿದ್ದಾಗಲೂ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದರು' ಎಂದರು.

'ಕೇವಲ ಒಂದು ಐಸಿಸಿ ಟೂರ್ನಿಯಲ್ಲಿ ತಂಡದ ಪ್ರದರ್ಶನ ನೋಡಿಕೊಂಡು ರೋಹಿತ್ ಶರ್ಮ ನಾಯಕತ್ವದ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ನಾಯಕರಾಗಿ ಅವರ ಒಟ್ಟಾರೆ ಸಾಧನೆ ಅತ್ಯುತ್ತಮವಾಗಿದೆ. ಮುಂಬರುವ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತವು ಅವರ ನಾಯಕತ್ವದಲ್ಲೇ ಆಡಬೇಕು' ಎಂದು ತಿಳಿಸಿದರು.



ಗೌತಮ್ ಗಂಭೀರ್

'ಟಿ20 ಮತ್ತು ಏಕದಿನ ಮಾದರಿಗಳಿಗೆ ಪ್ರತ್ಯೇಕ ನಾಯಕರನ್ನು ನೇಮಿಸುವ ಬದಲು, ಒಬ್ಬರೇ ನಾಯಕ ಇರಬೇಕು. ಟೆಸ್ಟ್ ಮಾದರಿಗೆ ಪ್ರತ್ಯೇಕ ನಾಯಕ ಬೇಕು. ಮೂರು ಮಾದರಿಗಳಿಗೆ ಮೂವರು ನಾಯಕರನ್ನು ನೇಮಿಸುವುದು ಸರಿಯಲ್ಲ' ಎಂದರು.

ಶ್ರೀಲಂಕಾ ವಿರುದ್ಧದ ಟಿ20 ಸರಣಿಗೆ ಹಿರಿಯ ಆಟಗಾರರನ್ನು ಕೈಬಿಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿ, 'ತಂಡದ ಭವಿಷ್ಯವನ್ನು ಮುಂದಿಟ್ಟುಕೊಂಡು ಆಯ್ಕೆಗಾರರಿಗೆ ಕೆಲವೊಮ್ಮೆ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಉತ್ತರಿಸಿದರು.

'ಶಿಖರ್ ಧವನ್‌ಗೆ ಏಕದಿನ ತಂಡದ ಬಾಗಿಲು ಸಂಪೂರ್ಣವಾಗಿ ಮುಚ್ಚಿಲ್ಲ. ಆದರೆ ಇಶಾನ್ ಕಿಶನ್ ಮತ್ತು ಶುಭಮನ್ ಗಿಲ್ ಅವರು ಉತ್ತಮವಾಗಿ ಆಡುತ್ತಿರುವುದರಿಂದ ಧವನ್, ತಂಡದಲ್ಲಿ ಮತ್ತೆ ಸ್ಥಾನ ಪಡೆಯುವುದು ತುಂಬಾ ಕಷ್ಟ' ಎಂದು ನುಡಿದರು.

ಕಾಬೂಲ್‌ನಲ್ಲಿ ಸ್ಫೋಟ: 10 ಸಾವು

ಕಾಬೂಲ್ (ಎಪಿ): ಕಾಬೂಲ್ ಸೇನಾ ವಿಮಾನ ನಿಲ್ದಾಣವನ್ನು ಭಾನುವಾರ ನಡುಗಿಸಿದ ಬಾಂಬ್ ಸ್ಫೋಟದಲ್ಲಿ 10 ನಾಗರಿಕರು ಮೃತಪಟ್ಟು, ಎಂಟು ಮಂದಿ ಗಾಯಗೊಂಡಿದ್ದಾರೆ.

ಬಾಂಬ್ ಸ್ಫೋಟ ಮಿಲಿಟರಿ ವಿಮಾನ ನಿಲ್ದಾಣದ ಮುಖ್ಯ ದ್ವಾರದ ಹತ್ತಿರದಲ್ಲೇ ಸಂಭವಿಸಿದೆ ಎಂದು ತಾಲಿಬಾನ್ ಆಂತರಿಕ ಸಚಿವಾಲಯದ ವಕ್ತಾರ ಅಬ್ದುಲ್ ನಾಫೀ ಠಾಕೂರ್ ಹೇಳಿಕೆ ಉಲ್ಲೇಖಿಸಿ 'ಖಾಮಾ ಪ್ರೆಸ್' ವರದಿ ಮಾಡಿದೆ.

ದಾಳಿಯ ಹೊಣೆಯನ್ನು ಇದುವರೆಗೂ ಯಾವುದೇ ಉಗ್ರ ಸಂಘಟನೆಗಳು ಹೊತ್ತುಕೊಂಡಿಲ್ಲ. ಉತ್ತರ ತಾಖರ್ ಪ್ರಾಂತ್ಯದ ರಾಜಧಾನಿ ತಾಲುಕನ್ ನಗರದಲ್ಲಿ ಕಳೆದ ಬುಧವಾರ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ನಾಲ್ವರು ಗಾಯಗೊಂಡಿದ್ದರು. ಈ ಘಟನೆ ನಡೆದು ಮೂರು ದಿನಗಳ ನಂತರ ಈ ಸ್ಫೋಟ ನಡೆದಿದೆ.

ಘಟನಾ ಸ್ಥಳದಲ್ಲಿ ಛಾಯಾಗ್ರಹಣ ಮತ್ತು ದೃಶ್ಯ ಚಿತ್ರೀಕರಣವನ್ನು ತಾಲಿಬಾನ್ ಭದ್ರತಾ ಪಡೆ ನಿರ್ಬಂಧಿಸಿದೆ.



ಕಾಬೂಲ್‌ನ ಮಿಲಿಟರಿ ವಿಮಾನ ನಿಲ್ದಾಣದ ಹೊರಗಡೆ ಸ್ಫೋಟ ಸಂಭವಿಸಿದ ಸ್ಥಳವನ್ನು ಪರಿಶೀಲಿಸುತ್ತಿರುವ ತಾಲಿಬಾನ್ ಪರ ಹೋರಾಟಗಾರರು –ಎಎಫ್‌ಪಿ ಚಿತ್ರ

ಹೈದರಾಬಾದ್ ರೇಸ್

ಕ್ವೀನ್ ಎನ್ವಿಡ್ ಗೆಲ್ಲುವ ನಿರೀಕ್ಷೆ

ಗೋಲ್ಕಂಡ ಓಕ್ಸ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ವೀನ್ ಎನ್ವಿಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.40ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಟ್ರಾಸ್ 1, ಅಬ್ರಾ ವಾಹೆದ್ ಅಬ್ರಾ 5 ಸಿಟಿ ಕ್ರ್ಯೂಝ್ 2
2ನೇ ರೇಸ್: ಹಂಟಿಂಗ್‌ಡಾನ್ 1, ಲಕ್ಕಿ ನೈನ್ 5, ಎನ್‌ಆರ್‌ಐ ಡಬಲ್‌ಪವರ್ 7
3ನೇ ರೇಸ್: ಟಾಪ್ ಇನ್ ಕ್ಲಾಸ್ 2, ಮ್ಯಾಕ್ಸಿಮಮ್ ಗ್ಲಾಮರ್ 1, ಲಾರಸ್ 7
4ನೇ ರೇಸ್: ಲೇಡಿ ಡೇಂಜರ್ 4, ಕಚ್‌ನಾರ್ 3, ವಾಟ್ಸ್ ಅಪ್ ಜೇ 6
5ನೇ ರೇಸ್: ವಾಚ್ ಮೈ ಸ್ಟ್ರೈಡ್ 3, ಟಾಪ್ ಸೀಕ್ರೆಟ್ 2, ಕೇಸರಿಯ ಬಾಲಮ್ 5
6ನೇ ರೇಸ್: ನೈಟ್‌ಮೇರ್ 1, ಜುರಾಮೆಂಟೊ 4, ಎಸ್ಪರ್ಡೇ 5
7ನೇ ರೇಸ್: ರೋಲ್ ಮಾಡೆಲ್ 5, ವಿಷನರಿ 2, ಈಸ್ಟರನ್ ಬ್ಲೇಝ್ 3
8ನೇ ರೇಸ್: ಕ್ವೀನ್ ಎನ್ವಿಡ್ 6, ಹ್ಯೂಮಾನಿಟೇರಿಯನ್ 2
9ನೇ ರೇಸ್: ಗ್ರ್ಯಾಂಡ್ ಡ್ಯೂಕ್ 1, ಸೂಪರ್‌ಸ್ಟೆಲ್ಲಾರ್ 3, ಕಾರ್ನಿವಲ್ ಗ್ಲೋರಿ 2

ಉತ್ತಮ ಬೆಟ್: ಹಂಟಿಂಗ್‌ಡಾನ್

ಜಾಕ್‌ಪಾಟ್ **5,6,7,8,9** 1ನೇ ಮಿನಿ ಜಾಕ್‌ಪಾಟ್ **2,3,4,5**, 2ನೇ ಮಿನಿ ಜಾಕ್‌ಪಾಟ್ **6,7,8,9**

1ನೇ ಟ್ರಿಬಲ್ **2,3,4** 2ನೇ ಟ್ರಿಬಲ್ **4,5,6** 3ನೇ ಟ್ರಿಬಲ್ **7,8,9**

ಫ್ರೀಡಂ ಶಾಪಿಂಗ್ ಮಾಲ್‌ನಲ್ಲಿ ನಡೆದ ಘಟನೆ

ಹೊಸ ವರ್ಷಾಚರಣೆ: ಉಗಾಂಡದಲ್ಲಿ ಕಾಲ್ತುಳಿತಕ್ಕೆ ಒಂಬತ್ತು ಮಂದಿ ಸಾವು

ಕಂಪಾಲ: ಉಗಾಂಡದ ರಾಜಧಾನಿ ಕಂಪಾಲದಲ್ಲಿನ ಫ್ರೀಡಂ ಸಿಟಿ ಶಾಪಿಂಗ್ ಮಾಲ್‌ನಲ್ಲಿ ಭಾನುವಾರ ಹೊಸ ವರ್ಷಾಚರಣೆ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಮಹಿಳೆ ಮತ್ತು ಮಕ್ಕಳು ಸೇರಿದಂತೆ ಒಂಬತ್ತು ಜನರು ಸಾವಿಗೀಡಾಗಿದ್ದಾರೆ. ಇವರಲ್ಲಿ ಬಹುತೇಕರು 10ರಿಂದ 20 ವರ್ಷ ವಯಸ್ಸಿನೊಳಗಿನವರು ಎಂದು ಪೊಲೀಸರು ತಿಳಿಸಿದ್ದಾರೆ.

ಶಾಪಿಂಗ್ ಮಾಲ್‌ನಲ್ಲಿ ಹೊರಗಡೆ ಪಟಾಕಿ ಹಚ್ಚಿ ಸಂಭ್ರಮಿಸಿದ ಬಳಿಕ ಕಾಲ್ತುಳಿತ ಉಂಟಾಗಿದ್ದು, ಸ್ಥಳದಲ್ಲೇ ಐವರು ಸಾವಿಗೀಡಾಗಿದ್ದಾರೆ. ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಕೈಗೊಂಡು ಗಾಯಗೊಂಡಿದ್ದ ಹಲವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಒಟ್ಟಾರೆ ಘಟನೆಯಲ್ಲಿ ಒಂಬತ್ತು ಮಂದಿ ಸಾವಿಗೀಡಾಗಿದ್ದಾರೆ ಎಂಬುದು ದೃಢಪಟ್ಟಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಮೃತಪಟ್ಟವರಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಸೇರಿದ್ದಾರೆ. ದುಡುಕುತನ ಮತ್ತು ನಿರ್ಲಕ್ಷ್ಯದ ಕಾರಣದಿಂದ ಈ ದುರ್ಘಟನೆ ಸಂಭವಿಸಿದೆ' ಎಂದೂ ಅವರು ತಿಳಿಸಿದ್ದಾರೆ.

ಕಾಲ್ತುಳಿದಲ್ಲಿ ಬದುಕುಳಿದಿರುವವರಲ್ಲಿ ಒಬ್ಬರಾದ ಉದ್ಯಮಿ ಸಿಲ್ವಿಯಾ ನಕಲೆಮಾ ಅವರು ತಮ್ಮ ಅನುಭವ ಹಂಚಿಕೊಂಡಿದ್ದು, 'ನಾವು ಹೊಸ ವರ್ಷದ ಸಂಭ್ರಮವನ್ನು ವೀಕ್ಷಿಸಿ ವಾಪಸ್ ಬರುವಾಗ ಕಾಲ್ತುಳಿತ ಉಂಟಾಯಿತು. ಆಗ ಬೃಹತ್ ಜನಸಂದಣಿಯಿತ್ತು. ನೂಕಾಟ ಹೆಚ್ಚಾಗಿ ಒಬ್ಬರು ಮತ್ತೊಬ್ಬರನ್ನು ತಳ್ಳಲಾರಂಭಿಸಿದರು. ಹಲವರಿಗೆ ಉಸಿರಾಟದ ತೊಂದರೆ ಉಂಟಾಯಿತು. ಮಕ್ಕಳು ಅಳುತ್ತಿದ್ದರು, ನನ್ನನ್ನು ಮೂಲೆಗೆ ತಳ್ಳಿದ್ದರಿಂದ ಜೀವ ಉಳಿಯಿತು' ಎಂದಿದ್ದಾರೆ.

ಕೋವಿಡ್– 19 ಸಾಂಕ್ರಾಮಿಕ ಮತ್ತು ಭದ್ರತಾ ಸಮಸ್ಯೆಗಳಿಗೆ ಸಂಬಂಧಿಸಿದ ಮೂರು ವರ್ಷಗಳ ನಿರ್ಬಂಧಗಳ ಬಳಿಕ ಇದೇ ಮೊದಲ ಬಾರಿಗೆ ಪೂರ್ವ ಆಫ್ರಿಕಾ ದೇಶದಲ್ಲಿ ಹೊಸ ವರ್ಷಾಚರಣೆ ನಡೆದಿದೆ.